ಗೌರಿ ಲಂಕೇಶರ

ಲಂಕೇಶ್

ಅಕ್ಟೋಬರ್ 18, 2006 ಬೆಲೆ ರೂ. 10/- ◆ ರಂಜನೆ ◆ ಬೋಧನೆ ◆ ಪ್ರಚೋದನೆ



ಚಿತ್ರರಂಗ ಹೀರೋ ಅಂದ್ರೆ ದೇವ್ರಾ?

ವಚನಭ್ರಷ್ಟ ಕುಮಾರ!

ರಾಜ್‌ಗೆ ದೋಖಾ

ಗುಪ್ತಾ ಮಾರ್ಕೆಟ್ ಗುಪ್ತ ಕತೆ!



ಕರಾವಳಿ

ಗೌಡಾಗೆ ಬೇಕು ಮುಸ್ಲಿಂ ರಕ್ತ!

ಕಾರ್ಡೇ ಕೊಡದ ಸರ್ಕಾರ ಇನ್ನು ರೇಷನ್ ಕೊಡುವುದೇ?



ಕರ್ನಾಟಕದ ಬಡಜನರ ಅಭಿವೃದ್ಧಿಗೆಂದೇ ಸರ್ಕಾರ ರಚಿಸಿದ್ದೇವೆ ಎಂದು ಹೇಳುವ ಈ ಕೋ-ಜಾ ಸರ್ಕಾರಕ್ಕೆ ಅಸಲು ಕರ್ನಾಟಕದಲ್ಲಿ ಎಷ್ಟು ಜನ ಬಡವರಿದ್ದಾರೆ ಎಂಬುದೇ ತಿಳಿದಿಲ್ಲ. ಕೆಲವು ತಿಂಗಳ ಹಿಂದೆ ಕರ್ನಾಟಕದಲ್ಲಿ ಕೇವಲ 37ಲಕ್ಷ ಜನ ಮಾತ್ರ ಬಡವರಿದ್ದಾರೆ ಆದರೆ ಸುಮಾರು 11 ಲಕ್ಷ ಬೋಗಸ್ ಕಾರ್ಡುಗಳು ಇವೆಯೆಂದು ಹೇಳಿದ್ದರು. ಆದರೂ ಸರ್ಕಾರದ ಪ್ರಕಾರ 70 ಲಕ್ಷ ಕಾರ್ಡ್‌ಗಳು ಚಾಲ್ತಿಯಲ್ಲಿದ್ದವು. ಮೊನ್ನೆ ಅದರ ಬಗ್ಗೆ ಮತ್ತೆ ಹೇಳಿಕೆ ಕೊಟ್ಟಿರುವ ಸಚಿವ ಕಾರಜೋಳರವರು ಬಡವರ ಮಟ್ಟಿಗೆ ಕಾರವನ್ನಾಗಲೀ ಜೋಳವನ್ನಾಗಲೀ ಉಳಿಸುವಂತೆ ಕಾಣುತ್ತಿಲ್ಲ.


ಒಂದು ಕಡೆ ಮುಖ್ಯಮಂತ್ರಿಗಳು ರೇಷನ್ ಕಾರ್ಡಿಗೆ ಹೆಚ್ಚು ಹೆಚ್ಚು ಬಡಜನರು ಅರ್ಹರಾಗುವಂತೆ ಐದು ಎಕರೆ ಇದ್ದವರನ್ನೂ ಬಡವರೆಂದೇ ಪರಿಗಣಿಸಿ ಕಾರ್ಡು ಕೊಡುವುದಾಗಿ ಹೇಳುತ್ತಿದ್ದರೆ ಮತ್ತೊಂದು ಕಡೆ ಈ ಎಲ್ಲಾ ಭ್ರಮೆಗಳಿಗೆ ತೆರೆ ಎಳೆಯುವಂತೆ, ಮೊನ್ನೆ ಇದೆ ಸಚಿವ ಕಾರಜೋಳರು ರಾಜ್ಯದಲ್ಲಿ 70 ಲಕ್ಷ ಕಾರ್ಡುಗಳಿವೆ. ಆದರೆ ನೈಜ ಫಲಾನುಭವಿಗಳಿಗೆ ಆಹಾರ ಒದಗಿಸುವ ಸದುದ್ದೇಶದಿಂದ ಆ ಸಂಖ್ಯೆಯನ್ನು ಪ್ರಾರಂಭಕ್ಕೆ 64 ಲಕ್ಷಕ್ಕಿಳಿಸುವುದಾಗಿ ಹೇಳಿದ್ದಾರೆ. ಅಂದರೆ ಒಂದೆಡೆ ಅರ್ಹರ ಸಂಖ್ಯೆ ಹೆಚ್ಚಾಗುತ್ತದೆ.

ಆದರೆ ಕಾರ್ಡ್‌ಗಳ ಸಂಖ್ಯೆ ಮಾತ್ರ ಕಡಿಮೆಯಾಗುತ್ತದೆ. ಅಂದರೆ ಅರ್ಥವಿಷ್ಟೆ. ಅರ್ಹರ ಸಂಖ್ಯೆ ಹೆಚ್ಚಾಗುವುದು ಮತ್ತು ಕಾರ್ಡುಗಳ ಸಂಖ್ಯೆ ಹೆಚ್ಚುವುದು ಮುಖ್ಯಮಂತ್ರಿಗಳ ಭಾಷಣದಲ್ಲಿ ಮಾತ್ರ. ಅಸಲಿನಲ್ಲಿ ಬಡವರ ಬದುಕು ಮಾತ್ರವಲ್ಲ ಅವರ ಸಂಖ್ಯೆಯೊಂದಿಗೂ ಸರ್ಕಾರ ಸಾವಿನಾಟವಾಡುತ್ತದೆ ಎಂದರ್ಥ..! ಕಾರ್ಡೇ ಕೊಡದ ಸರ್ಕಾರ ಇನ್ನು ರೇಷನ್ ಕೊಡುವುದೇ..!?

ಚಾರ್ವಾಕ

- ಶಿವಸುಂದರ್-

ಖಾಲಿ ಬೀಳುವ ಸೀಟುಗಳು-ಹಿಂಬಾಗಿಲಿನಿಂದ ಕ್ಯಾಪಿಟೇಷನ್..!



ಈ ಬಾರಿ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಕಡಿಮೆ ಫೀಸಿನ ಕೋಟಾದ 6200 ಸೀಟುಗಳು ಕಾಲಿ ಬದ್ದಿವೆ. ಇದು ಕಳೆದ ಬಾರಿ ಖಾಲಿಬಿದ್ದ ಸೀಟುಗಳ ಸಂಖ್ಯೆಗಿಂತ 3000ದಷ್ಟು ಜಾಸ್ತಿ. ಏಕೆ ಇಷ್ಟೊಂದು ಸೀಟುಗಳು ಖಾಲಿ ಬೀಳುತ್ತಿವೆ? ಏಕೆಂದರೆ ಹಿಂದೆಂದೂ ಇಲ್ಲದಂತೆ ಕಡಿಮೆ ಫೀಸಿನ ಸೀಟಿಗೆ ಹೆಚ್ಚಿನ ಅರ್ಹತಾ ಮಟ್ಟವನ್ನು ನಿಗದಿ ಪಡಿಸಲಾಗಿದೆ. ಎರಡನೆಯದಾಗಿ ಕಡಿಮೆ ಫೀಸು ಎಂಬುದು ಎಷ್ಟಾದರೂ ಒಂದು ಸಾಪೇಕ್ಷ ಸಂಖ್ಯೆ ಎಷ್ಟೆ. ಹೆಚ್ಚಿನ ಫೀಸಿಗೆ ಹೋಲಿಸಿದರೆ ಅದು ಕಡಿಮೆ ಫೀಸು. ಆದರೆ ಬಡ-ಮಧ್ಯಮ ವರ್ಗದ ಬದುಕಿನ ಮಟ್ಟಕ್ಕೆ ಹೋಲಿಸಿಕೊಂಡರೆ ಅದು ಎಟುಕಲಾಗದ ಫೀಸೇ..!

ಹೀಗಾಗಿ ಅದನ್ನು ತುಂಬಲಾಗದೇ ಹೆಚ್ಚೆಚ್ಚು ಜನ ಸೀಟು ಸಿಕ್ಕರೂ ವಿದ್ಯಾಭ್ಯಾಸ ಮುಂದುವರೆಸಲಾಗದೆ ಬಿಟ್ಟು ಬರುತ್ತಾರೆ. ಈಗ ಆ ಖಾಲಿಬಿದ್ದ ಸೀಟುಗಳ ಕಥೆ ಏನಾಗುತ್ತದೆ? ಇನ್ನೇನಾಗುತ್ತದೆ? ಅವೆಲ್ಲಾ ಮ್ಯಾನೇಜ್‌ಮೆಂಟ್ ಕೋಟಾದ ಸೀಟುಗಳಾಗಿ ಬದಲಾಗುತ್ತವೆ. ಕರ್ನಾಟಕದಲ್ಲಿನ ಒಟ್ಟು 118 ಇಂಜನಿಯರಿಂಗ್ ಕಾಲೇಜುಗಳಲ್ಲಿ 30020 ಸೀಟುಗಳು ಇವೆ. ಇದರಲ್ಲಿ 21000 ಸೀಟುಗಳು ಕಡಿಮೆ ಫೀಸಿನವು ಮತ್ತು 8000ದಷ್ಟು ಹೆಚ್ಚು ಫೀಸಿನವು. ಆದರೆ ಈಗ 6000 ಸೀಟುಗಳು ಮೇಲೆ ಹೇಳಿದ ರೀತಿ ಹೆಚ್ಚಿನ ಫೀಸಿನ ಲೆಕ್ಕದಲ್ಲಿ ಸೇರಿ 14000 ಆಗುತ್ತದೆ. ಮತ್ತು ಕಡಿಮೆ ಫೀಸಿನಲ್ಲಿ 6000 ಕಡಿಮೆಯಾಗಿ 15000 ಆಗುತ್ತದೆ. ಅಂದರೆ ಸರ್ಕಾರಿ ನೀತಿಯಲ್ಲಿ ಇಂಜನಿಯರಿಂಗ್‌ನಲ್ಲಿ ಸರ್ಕಾರಿ ಮತ್ತು ಖಾಸಗಿ ಸೀಟುಗಳ ಅನುಪಾತ 65:35 ಎಂದೇ ಇದ್ದರೂ ವಾಸ್ತವವಾಗಿ ಅದು ಹೆಚ್ಚು ಕಡಿಮೆ 50:50 ಆಗುತ್ತಿದೆ. ಇದನ್ನು ಮಾತ್ರ ಯಾರೂ ಸ್ಕಾಮ್ ಎಂದೂ ಪರಿಗಣಿಸುವುದಿಲ್ಲ.. ಮೋಸವೆಂದೂ ಎಣಿಸುವುದಿಲ್ಲ..!

ಚಡ್ಡಿಗಳೆಲ್ಲಾ ಟಿಪ್ಪು ಕನ್ನಡದ್ರೋಹಿ ಎಂದು ಅರಚಾಡುತ್ತಿರುವಾಗ ಚಿಮೂ ಏಕೆ ದ್ರೋಹಿ ಎನ್ನಲಾರೆ ಎನ್ನುತ್ತಾರೆ?

ಈಗ ಕರ್ನಾಟಕದಲ್ಲಿ ಯಾರು ಬೇಕಾದರೂ ಇತಿಹಾಸ ಕಾರರಾಗಿ ಬಿಡಬಹುದು. ಅದರಲ್ಲೂ ಯಾರಾದರೂ ಮುಸ್ಲಿಂ ದೊರೆಯನ್ನು ಟೀಕಿಸಬೇಕೆಂದರೆ ಅವರು ಇತಿಹಾಸ ಓದಿರಲೇ ಬೇಕೆಂಬ ಕಡ್ಡಾಯವೂ ಏನಿರುವುದಿಲ್ಲ. ಇಲ್ಲದಿದ್ದರೆ ಬಾಲವಿಲ್ಲದ ಭಜರಂಗದಳದ ರಾಜ್ಯಾಧ್ಯಕ್ಷನಾದ ಮಹೇಂದ್ರಕುಮಾರನೂ ಟಿಪ್ಪು ದಾಳಿ ಮಾಡಿದ ಜಾಗವನ್ನು ತಾನು ಬೇಕಾದರೆ ತನ್ನ ಖರ್ಚಿನಲ್ಲೇ ಗಿರೀಶ್ ಕಾರ್ನಾಡರಿಗೆ ತೋರಿಸುತ್ತೇನೆ ಎಂದು ಹೇಳುತ್ತಿದ್ದನೆ? ಇರಲಿ. ಇವೆಲ್ಲ ಚಿಲ್ಲರೆ ವಿಷಯಗಳು. ಆದರೆ ನಮ್ಮ ಚಡ್ಡಿ ಸಂಶೋಧಕ ಪಿತಾಮಹರಾದ ಚಿದಾನಂದ ಮೂರ್ತಿಗಳು ಮಾತ್ರ ಆ ರೀತಿ ಮಾತಾಡುತ್ತಿಲ್ಲ.

ಕಾದಂಬರಿಕಾರ ಎಸ್ಸೆಲ್ ಭೈರಪ್ಪ, ಪೂರ್ವಾಶ್ರಮದ ಕವಿ ಸುಮತೀಂದ್ರ ನಾಡಿಗರಂತವರೆಲ್ಲಾ ಟಿಪ್ಪು ಕನ್ನಡ ದ್ರೋಹಿಯೆಂದು ಭಾವಣೆಯ ಮೇಲೆ ಕುಳಿತು ಅರಚಾಡುತ್ತಿರು ವಾಗ ಚಿದಾನಂದ ಮೂರ್ತಿಯವರು ಮಾತ್ರ 'ಟಿಪ್ಪು ಕನ್ನಡ ಬಳಸಲಿಲ್ಲ ಮತ್ತು ಪರ್ಶಿಯನ್ ಬಳಸಿದ್ದ ಎಂದು ಹೇಳಬಹುದೇ ವಿನಃ ಕನ್ನಡದ್ರೋಹಿ ಎಂದು ಹೇಳಲಾರೆ' ಎಂದು ಹೇಳುತ್ತಿದ್ದಾರೆ. ಸಾರಾಂಶದಲ್ಲಿ ಟಿಪ್ಪುವಿನ ಬಗ್ಗೆ ಅವರ ಅಭಿಪ್ರಾಯಕ್ಕೂ ಚಿಮೂ ಅಭಿಪ್ರಾಯಕ್ಕೂ ಹೆಚ್ಚಿನ ವ್ಯತ್ಯಾಸವಿಲ್ಲ. ಆದರೂ ಚಿಮೂ ಟಿಪ್ಪುವಿಗೆ ಈ ರಿಯಾಯಿತಿ ತೋರಿಸುತ್ತಿರುವುದೇಕೆ? ಕನ್ನಡ ದ್ರೋಹಿಯಲ್ಲ ಎನ್ನುತ್ತಿರುವುದೇಕೆ?

ಗುಟ್ಟು ರಟ್ಟು




ಕನ್ನಡ ಬಳಸದವರೆಲ್ಲಾ ಕನ್ನಡ ದ್ರೋಹಿಗಳೆನ್ನುವುದಾದರೆ ಕಾನ್ವೆಂಟ್‌ಗೆ ಹೋಗುವ ಮೊಮ್ಮಕ್ಕಳನ್ನೇನನ್ನಬೇಕು?

ಟಿಪ್ಪು ಕನ್ನಡ ಬಳಸಲಿಲ್ಲ ಎನ್ನುವುದು ಬೇರೆ. ಕನ್ನಡ ಬಳಸದವರೆಲ್ಲಾ ಕನ್ನಡ ದ್ರೋಹಿಗಳೆನ್ನುವುದು ಬೇರೆ.. ಹಾಗೆ ಕನ್ನಡ ಬಳಸದವರನ್ನೆಲ್ಲಾ ದ್ರೋಹಿಗಳೆಂದರೆ ದೇವಾಲಯಗಳಲ್ಲಿ ಸಂಸ್ಕೃತ ಬಳಸುವ ಪೂಜಾರಿಗಳನ್ನೇನನ್ನಬೇಕು? ಅದೆ ರೀತಿ ಕನ್ನಡದ ಪ್ರದೇಶಗಳನ್ನಾಳಿದ ಮರಾಠ ಪೇಶ್ವೆಗಳು ಕನ್ನಡ ಬಳಸದೇ ಇದ್ದದ್ದನ್ನು ಏನೆಂದು ಕರೆಯಬೇಕು? ಸ್ವಾತಂತ್ರ್ಯ ಬಂದ ನಂತರವೂ, ಈಗಲೂ ಹೈಕೋರ್ಟುಗಳಲ್ಲಿ ಇಂಗ್ಲೀಷೇ ಅಧಿಕೃತ ಮತ್ತು ಕಡ್ಡಾಯ ಭಾಷೆಯಾಗಿರುವುದನ್ನು ಏನೆಂದು ಕರೆಯಬೇಕು. ಮಾತ್ರವಲ್ಲ ಇಂದು ಈ ಕನ್ನಡದ ಕುಲಪುರೋಹಿತರ ಮೊಮ್ಮಕ್ಕಳೆಲ್ಲಾ ಕನ್ನಡ ಮಾಧ್ಯಮದಲ್ಲಿ ಕಲಿಯುವ ಅವಕಾಶವಿದ್ದರೂ ಇಂಗ್ಲೀಷಲ್ಲೇ ಕಲಿಯುವ ಅವರನ್ನು ಚಿಮೂಗಳು ಕನ್ನಡದ್ರೋಹಿ ಎಂದು ಕರೆಯಲಾಗುವುದಿಲ್ಲವಲ್ಲ.

ಆದ್ದರಿಂದಲೇ ಬಹಳ ಜಾಣತನದಿಂದ 'ಕನ್ನಡ ಬಳಸಲಿಲ್ಲ ಎಂದು ಹೇಳುತ್ತೇನೆಯೆ ವಿನಃ ಕನ್ನಡ ದ್ರೋಹಿ ಎಂದು ಹೇಳಲಾರೆ' ಎಂದು ಹೇಳಿದ್ದಾರೆ. ಚಿಮೂಗಳಂತವರ ಕನ್ನಡ ಪ್ರೇಮ ಅರಳುವುದು ತಮಿಳಿನ ವಿರುದ್ಧ ಅಥವಾ ಮುಸ್ಲಿಂ ಮತ್ತು ಇಸ್ಲಾಮಿನ ವಿರುದ್ಧ ಮಾತ್ರ. ಪಾಕಿಸ್ತಾನವಿಲ್ಲದೆ ಇವರ ದೇಶಪ್ರೇಮ ಅರಳುವುದಿಲ್ಲ. ಮುಸ್ಲಿಮರಿಲ್ಲದೆ ಹಿಂದೂತ್ವ ಪ್ರೇಮ ಅರಳುವುದಿಲ್ಲ. ಇವರ ದೇಶ ಪ್ರೇಮವೂ ಎಂತಹುದೆಂದರೆ ಈ ದೇಶವನ್ನು ಶಾಶ್ವತ ಗುಲಾಮಗಿರಿಗೆ ಸಿಲುಕಿಸಿರುವ ಬ್ರಿಟಿಷರು ಭೈರಪ್ಪನವರ ಪಾಲಿಗೆ ಮುಸ್ಲಿಂ ದಾಸ್ಯದಿಂದ ಹಿಂದೂಗಳನ್ನು ವಿಮೋಚನೆ ಮಾಡಲು ಬಂದ ದೇವಮಾನವರು..!

ಹೀಗೆ ಇವರ ಕನ್ನಡ ಪ್ರೇಮದಲ್ಲಿ ಪರಭಾಷಾ ದ್ವೇಷವೇ ಹೆಚ್ಚು. ದ್ವೇಷದ ಆಧಾರದಲ್ಲಿ ಇರುವ ಪ್ರೇಮ ಸುಡುವ ಪ್ರೇಮವೇ ಹೊರತು ಬೆಳಗುವ ಪ್ರೇಮವಲ್ಲ.

ಹೊಳೆಗುಂಟ ನಡೆದ ಹುಡುಗಿ



ತಿರುಗಿ ಬಂದಿಲ್ಲ
ಹೊಳೆಗುಂಟ ನಡೆದ ಹುಡುಗಿ
ವಿದಾಯ ಹೇಳಿದಳೆ?
ಹೆಜ್ಜೆ ಗುರುತುಗಳು
ಚಿಗುರೊಡೆಯವ ಮುನ್ನ
ಖಾಲಿ ಕಪ್ಪೆಚಿಪ್ಪಿನಲ್ಲಿ
ಸ್ವಾತಿ ಹನಿ ಬೀಳದ ಮುನ್ನ
ದಡಕ್ಕೆ ಗೊತ್ತಾಗಿದೆ

ಅವಳು ಹೊಳೆಯ ಜೊತೆ ಮಾತಾಡಿದ್ದು
ಅತ್ತಿದ್ದು ನಕ್ಕಿದ್ದು
ಬೇಲದ ಹಣ್ಣನ್ನು ಮೀನಿಗೆ ಹಾಕಿದ್ದು
ಬಯಲ ಬಸಿರ ಬೇಡಿದ್ದೂ ಕೂಡ

ಹಿಂಬಾಲಿಸಿವೆ ಅವಳ
ಗಾಳಿಗರಿಕೆ ಲಂಟಾನದ ಬಿಗ್ಗು
ಇಂದು ಮುನಿಸೂ ಇಲ್ಲ
ಮುಟ್ಟಿದರೆ ಮುನಿಗೂ
ಅವಳ ಕಣ್ಣಲ್ಲಿ ಹೊಳೆಯೋ?
ಹೊಳೆಯೇ ಅವಳೋ?
ಮಿಂಚುಳ್ಳಿಗೂ ಗೊತ್ತಿಲ್ಲ
ಮರೆಯಾಗಿದೆ ಕಣ್ಣೆವೆಯಲ್ಲಿ
ರಭಸ ತಗ್ಗಿಸಿದೆ ಹೊಳೆ

ಅವಳ ಹೆಜ್ಜೆಗೆ ಸೇರಿಸಲು ಹೆಜ್ಜೆ
ಮೆಲ್ಲಗೆ ಮೈದಡವಿ
ಪಿಸುಗುಟ್ಟಿದೆ
ಸದಾ ಹರಿಯುತ್ತಿರು

ಕಾಯೋಣ
ಸರಿದ ಸಂಜೆಯಲ್ಲಿ
ಚುಕ್ಕಿ ಚಂದ್ರಮರ ಜೊತೆ
ಮಿಂಚುಹುಳುಗಳ ಬೆಳಕಿನಲ್ಲಿ
ತಿರುಗಿ ಬರಬಹುದು
ಹೊಳೆಗುಂಟ ನಡೆದ ಹುಡುಗಿ

-ಡಾ. ಸಿ. ರವೀಂದ್ರನಾಥ್

No Comments

"ಧಮಡಿ ಘಾಯದಾ ನಹಿ, ಘಡಿ ಪುರ್ಸೊತ್ ನಹಿ"

-ಮಲ್ಲಿಕಾರ್ಜುನ ಖರ್ಗೆ, ಬೆಳಗಾ[ವಿ] ಅಧಿವೇಶನದ ಕುರಿತು

"ಅಧಿಕಾರಿ ಮತ್ತು ರಾಜಕೀಯ ನಾಯಕರ ನಡುವೆ ಯಾವಾಗಲೂ ದ್ವಂದ್ವವಿರುತ್ತದೆ"

-ಬಿ.ಕೆ.ದಾಸ್, ರಾಜ್ಯದ ನಿವೃ[ತ್ತ] ಮುಖ್ಯಕಾರ್ಯದರ್ಶಿ

"ಸರ್ಕಾರದ ಕಿರುಕುಳ ತಡೆಯಲಾಗದೆ ಕೆಲವು ಐ.ಎ.ಎಸ್. ಅಧಿಕಾರಿಗಳು ಕೇಂದ್ರದ ಸೇವೆಗೆ ಎರವಲು ಹೋಗುತ್ತಿದ್ದಾರೆಂಬುದು ಸುಳ್ಳು."

-ಯಡಿಯೂರಪ್ಪ



"ವಿಕಿಪೀಡಿಯಾದಲ್ಲಿರುವ 4032 ಕನ್ನಡ ಲೇಖನದಲ್ಲಿ ಶೇ.97ರಷ್ಟನ್ನು ಪರದೇಶದಲ್ಲಿರುವ ಕನ್ನಡಿಗರು ಬರೆದದ್ದು."


ಜಿಮ್ಮಿ ವೇಲ್ಸ್, ವಿಕಿಪೀಡಿಯಾದ ಸ್ಥಾಪ[ಕ]



"ಕನ್ನಡದಲ್ಲಿ ಆಡಳಿತ ಇರಬೇಕೆಂದು ಈವರೆಗೆ 150 ಆದೇಶಗಳು ಹೊರಬಿದ್ದಿವೆ"

-ಮುಖ್ಯಮಂತ್ರಿ ಚಂದ್ರು

ನಂಬಿದ್ರೆ ನಂಬಿ ಬಿಟ್ರೆ ಬಿಡಿ:



"ನಾನು ಎಡಪಂಥೀಯನೂ ಅಲ್ಲ ಬಲಪಂಥೀಯನೂ ಅಲ್ಲ ಮತ್ತು ನಾನು ಯಾವ ರಾಜಕೀಯ ಪಕ್ಷಕ್ಕೂ ಸೇರಿದವನಲ್ಲ"

-ಚಿದಾನಂದ ಮೂರ್ತಿ




"ಜಾಗತೀಕರಣವನ್ನು ಒಪ್ಪಿಕೊಳ್ಳದೆ ಅನ್ಯಮಾರ್ಗವಿಲ್ಲ"

-ರುಥ್ ಮನೋರಮ, ಜನಪರ ಹೋರಾಟಕ್ಕೆ ನೀಡುವ ರೈಟ್ ಲೈವ್ಲಿಹುಡ್ ಪ್ರಶಸ್ತಿ ವಿಜೇತೆ.



"ಮಾರ್ಕ್ಸ್‌ವಾದಿಗಳು ನಾವು ದೇವರನ್ನು ನಂಬುವುದಿಲ್ಲ"

-ಗುರುದಾಸ್ ದಾಸ್‌ಗುಪ್ತ ಸಿಪಿಐ ಪಕ್ಷದ ಎಂಪಿ.



"ನಾನು ನಿಮ್ಮೆಲ್ಲರ ಜೊತೆ ಇದ್ದ ಏಕೈಕ ಪುರುಷನಾಗಿದ್ದರೂ ನಾನೇನೂ ವಿಚಲಿತನಾಗಲಿಲ್ಲ"

-60ಜನ ಮಹಿಳಾ ಪತ್ರಕರ್ತರು ಸುತ್ತುವರಿದಿದ್ದ ಬಗ್ಗೆ ನರೇಂದ್ರ ಮೋದಿ.

"ನಾನಿರುವುದು ಗಾಂಧಿ ಕಾಂಗ್ರೆಸ್ಸಿನಲ್ಲಿ ಸೋನಿಯಾ ಕಾಂಗ್ರೆಸ್ಸಿನಲ್ಲಲ್ಲ"

-ಹಾರ್ನಳ್ಳಿ ರಾಮಸ್ವಾಮಿ



"ಚಲನಚಿತ್ರ ನಿರ್ಮಾಣ ಕಾರ್ಮಿಕರ ಒಕ್ಕೂಟವೂ ನಿರ್ಮಾಪಕರ ಶೋಷಣೆಯಲ್ಲಿ ಭಾಗಿಯಾಗಿದೆ"

-ಸಂದೇಶ್ ನಾಗರಾಜ್, ನಿರ್ಮಾಪಕ.

ಸತ್ಯವಾಕ್ಯ

"ಟಿಪ್ಪು ಕಾಲದಲ್ಲಿ ಪರ್ಶಿಯನ್‌ಗೆ ಸಂಸ್ಕೃತದಷ್ಟೇ ಮಾನ್ಯತೆ ಇತ್ತು. ಆಡಳಿತದಲ್ಲಿ ಒಂದಕ್ಕಿಂತ ಹೆಚ್ಚು ಭಾಷೆ ಬಳಸುವುದು ಸಹಜವೇ ಆಗಿತ್ತು."

-ಶೆಟ್ಟರ್, ಇತಿಹಾಸತಜ್ಞ

ಶೇಕ್ಸ್‌ಪಿಯರ್ ಬರೆದದ್ದೇ ಹಾಗೆ... ಅವನ ಒಂದಕ್ಷರವೂ ವ್ಯರ್ಥವಾಗಲಿಲ್ಲ. ತನ್ನ ಮಾಂತ್ರಿಕ ಸಾಹಿತ್ಯಿಕ ಕಸುಬುದಾರಿಕೆಯಿಂದ ಇಡೀ ಜಗತ್ತಿನ ಸಹೃದಯರಿಗೆ ಆದ್ರ[ಕ] ಅಕ್ಷರ ಸಿಂಚನ ಮಾಡಿದ. ಅವನ ಅಲ್ಲಲ್ಲಿಯ ಕೆಲವು ಮಾತುಗಳು ಈ ಸಲ ಸೂಕ್ತಿಗಳಾಗಿವೆ.

-ಮೂರ್ತಿ

ಶಬಾನಾ ಎಂಬ ನಿಜಶರಣೆ

"ಇವತ್ತು ಜಗಳ, ಮನಸ್ತಾಪ, ವಿರೋಧ ಇರುವುದು ಹಿಂದೂ ಮತ್ತು ಮುಸಲ್ಮಾನರ ನಡುವೆ ಅಲ್ಲ, ಬದಲಾಗಿ ಈ ಎರಡೂ ಧರ್ಮಗಳಲ್ಲಿರುವ ಮೂಲಭೂತವಾದಿಗಳಿಗೂ, ಹಾಗೆಯೇ ಈ ಎರಡೂ ಸಮುದಾಯಗಳಲ್ಲಿ ಇರುವ ಪ್ರಗತಿಪರರು, ಸೌಹಾರ್ದಿಗಳು, ಸಹಿಷ್ಣುತೆ ಬಯಸುವವರ ನಡುವೆ. ದುರಂತ ಯಾವುದೆಂದರೆ, ಎಲ್ಲಾ ಧರ್ಮಗಳಲ್ಲಿನ ಮೂಲಭೂತವಾದಿಗಳು ಕನ್ನಡಿಯ ಬಿಂಬದಂತೆ ಒಬ್ಬರೊಬ್ಬರ ಪ್ರತಿಬಿಂಬಗಳಾಗಿರುತ್ತಾರೆ. ಹೊರಗೆ ವಿರೋಧಿಗಳಾಗಿದ್ದರೂ, ಒಳಗೊಳಗೆ ಆಪ್ತಮಿತ್ರರಾಗಿರುತ್ತಾರೆ. ಏಕೆಂದರೆ ಅವರು ಧರ್ಮದ ಹೆಸರಿನಲ್ಲಿ ತಮ್ಮ ಜನರನ್ನು ಇತರರ ವಿರುದ್ಧ ಎತ್ತಿಕಟ್ಟುತ್ತಾರಲ್ಲದೆ, ಇವತ್ತು ಜನರನ್ನು ಕಾಡುತ್ತಿರುವ ಮೂಲಭೂತ ಸಮಸ್ಯೆಗಳತ್ತ ಅವರ ಗಮನ ಹರಿಯದಂತೆ ನೋಡಿಕೊಳ್ಳುತ್ತಾರೆ. ಇಂಥವರ ಬಗ್ಗೆ ಎಲ್ಲರೂ ಸದಾ ಎಚ್ಚರದಿಂದಿರಬೇಕು....

"ನಾನು ಮಗಳು, ತಾಯಿ, ಸಹೋದರಿ, ನಟಿ, ಮಹಿಳೆ, ಭಾರತೀಯಳು, ಮುಸಲ್ಮಾನಳು... ಎಲ್ಲವೂ ಆಗಿದ್ದೇನೆ. ಆದರೆ ನನ್ನನ್ನು ಯಾರಾದರೂ ಓರ್ವ ಮಹಿಳೆ ಅಂತಲೋ, ಅಥವಾ ಮುಸಲ್ಮಾನಳು ಅಂತಲೋ ಸೀಮಿತಗೊಳಿಸಿದರೆ ಅದು ನನ್ನ ವ್ಯಕ್ತಿತ್ವಕ್ಕೆ ಮಾಡುವ ಅವಮಾನವಾಗುತ್ತದೆ. ಏಕೆಂದರೆ, ಈ ಎಲ್ಲ ಐಡೆಂಟಿಟಿಗಳು ನನಗೆ ಮುಖ್ಯ....."

ಹಿಂದಿನ ದಿನವೇ, 'ಕಮ್ಯೂನಲಿಸಮ್ ಕಾಂಬ್ಯಾಟ್' ಎಂಬ ಪತ್ರಿಕೆಯ ವಿಶೇಷ ಸಂಚಿಕೆಯಲ್ಲಿ ನಮ್ಮ ರಾಜ್ಯ ಹೇಗೆ ಮತ್ತೊಂದು ಗುಜರಾತ್ ಆಗುವುದರತ್ತ ಸಾಗುತ್ತಿದೆ ಎಂಬುದನ್ನು ಕುರಿತು ಜಿ. ರಾಜಶೇಖರ್, ಫಣಿರಾಜ್, ವಿ.ಎಸ್. ಶ್ರೀಧರ, ಶಿವಸುಂದರ್, ನಾನು ಮತ್ತು ನಮ್ಮ ಕರ್ನಾಟಕ ಕೋಮು ಸೌಹಾರ್ದ ವೇದಿಕೆಯ ಇತರರು ಬರೆದಿದ್ದ ಲೇಖನಗಳನ್ನು ನೋಡಿದ್ದರು. "ಅದನ್ನು ಓದಿ ಶಾಕ್ ಆಯಿತು. ಸಂಘ ಪರಿವಾರದ ಈ ಕುತಂತ್ರವನ್ನು ತಡೆಯುವುದಕ್ಕೆ ನೀವೆಲ್ಲ ಮಾಡುತ್ತಿರುವ ಕೆಲಸ ನಿಜವಾಗಲೂ ಅಭಿನಂದನಾರ್ಹ. ನಾವೂ ಕೂಡ 'ಮುಸ್ಲಿಮ್ಸ್ ಫಾರ್ ಸೋಶಿಯಲ್ ಡೆಮಾಕ್ರಸಿ' ಎಂಬ ಸಂಘಟನೆಯನ್ನು ಪ್ರಾರಂಭಿಸಿದ್ದೇವೆ. ಅದರ ವೆಬ್‌ಸೈಟನ್ನು ನೋಡಿ, ನಿಮ್ಮ ಸಂಘಟನೆಯವರಿಗೂ ತಿಳಿಸು. ಹಾಗೆಯೇ ಇಲ್ಲಿರುವ ಪ್ರಗತಿಪರ ಮುಸ್ಲಿಮ್ ಸಂಸ್ಥೆಗಳಿಗೂ ಕೊಡು" ಎಂದರು. ಹೀಗೆ, ರಾಜ್ಯ, ರಾಷ್ಟ್ರದ ಪ್ರಸ್ತುತ ಪರಿಸ್ಥಿತಿಯನ್ನು ಚರ್ಚಿಸುತ್ತಾ ಚಿತ್ರದುರ್ಗವನ್ನು ತಲುಪಿದೆವು.



ಹೀಗೆ ಅವತ್ತು ಚಿತ್ರದುರ್ಗದ ಸಭೆಯಲ್ಲಿ ಶಬಾನಾ ಆಜ್ಮಿಯವರು ಮಾತನಾಡುತ್ತಿದ್ದರೆ ಜನ ಚಪ್ಪಾಳೆ ತಟ್ಟುತ್ತಿದ್ದರು. ಆಜ್ಮಿಯವರ ಸಾಧನೆ, ಪ್ರಾಮಾಣಿಕತೆ, ಅಲ್ಲಿದ್ದ ಜನರ ಉತ್ಸಾಹ, ವೇದಿಕೆ ಮೇಲಿದ್ದ ಎಲ್ಲರೂ ಅವರನ್ನು ಪ್ರಶಂಸಿಸಿದ ರೀತಿ ಕಂಡು ಬೆರಗಾದೆ......

ಸುಮಾರು ಎರಡು ತಿಂಗಳ ಹಿಂದೆ, ಮುರುಘ ರಾಜೇಂದ್ರ ಶರಣರು ಫೋನ್ ಮಾಡಿ "ಈ ಬಾರಿ 'ಬಸವಶ್ರೀ' ಪ್ರಶಸ್ತಿಯನ್ನು ಶಬಾನಾ ಆಜ್ಮಿಯವರಿಗೆ ನೀಡುವುದೆಂದು ನಿರ್ಧರಿಸಲಾಗಿದೆ. ಅವರನ್ನು ಒಪ್ಪಿಸಿ ಕರೆದುಕೊಂಡುಬರುವುದು ನಿಮ್ಮ ಜವಬ್ದಾರಿ" ಎಂದಿದ್ದರು. ಆಜ್ಮಿಯವರ ಇಷ್ಟಾ ಮಿತ್ರರಾದ, ಖ್ಯಾತ ಚಿತ್ರ ನಿರ್ದೇಶಕ ಎಂ.ಎಸ್. ಸತ್ಯುರವರ ನೆರವನ್ನು ಪಡೆದು ಆಜ್ಮಿಯವರನ್ನು ಸಂಪರ್ಕಿಸಿದೆ. ಪ್ರಸ್ತುತ ಕರ್ನಾಟಕದ ರಾಜಕೀಯ ಸನ್ನಿವೇಶದಲ್ಲಿ, ಕೋಮುವಾದಿ ಬಿಜೆಪಿ ಪಕ್ಷವು ತನ್ನ ಕರಾಳ ಬುದ್ಧಿಯನ್ನು ರಾಜ್ಯದೆಲ್ಲಡೆ ಹಬ್ಬಿಸುತ್ತಿರುವ ಹಿನ್ನಲೆಯಲ್ಲಿ, ವೀರಶೈವ ಮಠವೊಂದು ಬಸವಣ್ಣನ ಹೆಸರಿನಲ್ಲಿ ನೀಡುತ್ತಿರುವ ಪ್ರಶಸ್ತಿಯನ್ನು ಮಹಿಳೆಯೂ, ಮುಸಲ್ಮಾನಳೂ, ನಟಿಯೂ, ಕೋಮು ಸೌಹಾರ್ದಕ್ಕೆ ಹೋರಾಡುತ್ತಿರುವ ಕಾರ್ಯಕರ್ತೆಯಾಗಿಯೂ ಅವರು ಸ್ವೀಕರಿಸಬೇಕು ಅಂತ ವಿವರಿಸಿ ಅವರನ್ನು ಒಪ್ಪಿಸಿದೆ.

ಅಂತರರಾಷ್ಟ್ರೀಯ ಖ್ಯಾತಿಯ ನಟಿ, ಹಲವಾರು ಪ್ರಶಸ್ತಿಗಳ ವಿಜೇತೆ, ಮಾಜಿ ರಾಜ್ಯಸಭಾ ಸದಸ್ಯೆ ಪದ್ಮಶ್ರೀ ಪುರಸ್ಕೃತೆ....ಇನ್ನು ಏನೇನೋ ಆಗಿರುವ ಆಜ್ಮಿಯವರು ಎಂದಿಷ್ಟು ಧಿಮಾಕು ಹೊಂದಿರುತ್ತಾರೆ ಅಂದುಕೊಂಡಿದ್ದೆ. ಆದರೆ ಅಂತಹ ಯಾವುದೇ ಲಕ್ಷಣ ಅವರಲ್ಲಿ ಕಿಂಚಿತ್ತೂ ಇರಲಿಲ್ಲ. ಉದಾಹರಣೆಗೆ, ವಿಮಾನನಿಲ್ದಾಣದಿಂದ ಹೊರಬಂದಾಗ ಅವರು ಎಲ್ಲಾದರೂ ತಿಂಡಿ ತಿನ್ನೋಣ ಅಂದರು. ನಾನು ಅವರು ಪಂಚತಾರಾ ಹೋಟೆಲ್ ಬಗ್ಗೆ ಹೇಳುತ್ತಿರಬೇಕೆಂದುಕೊಂಡೆ. ಆದರೆ ಅವರು, ಬೆಂಗಳೂರು ದಾಟಿದ ನಂತರ ಯಾವುದಾದರೂ [illegible] ಬದಿಯ ಧಾಬಾದಲ್ಲಿ ತಿನ್ನೋಣ" ಅಂದರು.

ಅಲ್ಲಿ, ಮುರುಘಾರಾಜೇಂದ್ರ ಮಟದ ಇತಿಹಾಸ, ಅನ್ನದಾಸೋಹ ಪರಂಪರೆ, ಜಾತಿ/ಧರ್ಮ/ಲಿಂಗ ಎಂಬ ಭೇದವಿಲ್ಲದ ಸಂಸ್ಕೃತಿ, ವಿಗ್ರಹಗಳ ಬದಲಾಗಿ ವಚನಗಳಿಗೆ ಪ್ರಾಮುಖ್ಯತೆ.... ಎಲ್ಲವನ್ನು ನೋಡಿ ಆಜ್ಮಿಯವರು ಮನಸಾರೆ ಮೆಚ್ಚಿಕೊಂಡರು. ಶ್ರೀ ಶಿವಮೂರ್ತಿ ಶರಣರೊಂದಿಗೆ ಊಟ ಮಾಡಿದ ನಂತರ ಅವರಿಗೆ 'ಬಸವಶ್ರೀ' ಪ್ರಶಸ್ತಿ ಪ್ರದಾನ ಮಾಡುವ ಸಮಾರಂಭ. ಆವತ್ತು, ಧರ್ಮಸಿಂಗರಿಂದ ಹಿಡಿದು, ಹೊರಟ್ಟಿಯವರ ತನಕ ಎಲ್ಲರೂ ಶಬಾನಾ ಅಜ್ಮಿಯವರ ಹೋರಾಟ, ಜ್ಯಾತ್ಯತೀತ ನಿಲುವನ್ನು ಹೊಗಳಿದ್ದೇ ಹೊಗಳಿದ್ದು..... ರಾಜಕಾರಣಿಗಳು ಹಾಗೆಯೇ ಬಿಡಿ. ಆದರೆ ಅಂದಿನ ಸಭೆಯಿಂದಾಗಿ ಹಲವು ಜನಸಾಮಾನ್ಯರಾದರೂ ಜಾತ್ಯತೀತರಾಗಿ ಪರಿವರ್ತನೆಗೊಂಡಾರು ಎಂಬ ಆಶಯ ಇದ್ದೇ ಇದೆ...

* * * * *

ಶಬಾನಾ ಆಜ್ಮಿಯವರಿಗೆ ನಮ್ಮ ಕರಾವಳಿ ಪ್ರದೇಶದಲ್ಲಿ ಹೇಗೆ ಸಂಘ ಪರಿವಾರ 'ಕರ್ನಾಟಕವನ್ನು ಮೊತ್ತೊಂದು ಗುಜರಾತ್ ಆಗಿಸುವ ಯೋಜನೆ'ಗೆ ಚಾಲನೆ ನೀಡಿದೆ ಎಂದು ಹೇಳಿದ ಎರಡು ದಿನಗಳ ನಂತರ ಮಂಗಳೂರು ಹೊತ್ತಿ ಉರಿಯಲಾರಂಭಿಸಿತು. ಅಲ್ಲಿಂದ ಹಲವಾರು ಜನ ಫೋನ್ ಮಾಡಿ, ಪರಿಸ್ಥಿತಿಯನ್ನು ಬೇಗನೆ ಹತೋಟಿಗೆ ತರದಿದ್ದರೆ ಗಲಭೆಗಳು ಹೆಚ್ಚಾಗುವ ಅಪಾಯದ ಬಗ್ಗೆ ತಮ್ಮ ಆತಂಕ ವ್ಯಕ್ತಪಡಿಸಿದರು.

ರಾಜ್ಯದಲ್ಲಿ ಪ್ರವಾಹವಾಗಲಿ, ರೈತರು ಆತ್ಮಹತ್ಯೆ ಮಾಡಿಕೊಳ್ಳಲಿ, ಏನೇ ಆಗಲಿ, ತಾವು ಮಾತ್ರ ಚಾಮುಂಡೇಶ್ವರಿ ವಿಧಾನ ಸಭಾ ಕ್ಷೇತ್ರದಲ್ಲಿ ಅಪರಿಚಿತರ ಮನೆಗಳಿಗೆ ಹೋಗಿ ಮಲಗುವುದನ್ನೇ ತಮ್ಮ ಕಾಯಕ ಮಾಡಿಕೊಂಡಿರುವ ಮುಖ್ಯಮಂತ್ರಿ ಕುಮಾರಸ್ವಾಮಿಯವರನ್ನು ಮಂಗಳೂರಿನ ಗಲಭೆಗಳ ಕುರಿತು ಮಾತನಾಡಿಸಿದರೆ ಏನೂ ಪ್ರಯೋಜನ ಇಲ್ಲವೆಂದು ನಿರ್ಧರಿಸಿ ಗೃಹ ಮಂತ್ರಿ ಎಂ. ಪಿ. ಪ್ರಕಾಶ್‌ರವರನ್ನು ಭೇಟಿಯಾಗಲು ಪ್ರಯತ್ನಿಸಿದೆವು.

ಆದರೆ, ಚಿತ್ರದುರ್ಗದ ಸಭೆಯಲ್ಲಿ "ನಾನು ನಿಜವಾಗಲೂ ಶರಣ ತತ್ವವನ್ನು ಪಾಲಿಸಲು ಆಗುತ್ತಿಲ್ಲ" ಎಂದೂ, ಗಾಂಧಿ ಜಯಂತಿ ದಿನದಂದು "ಗಾಂಧಿ

ಕಂಡಹಾಗೆ



ಈಗಲೂ ಪ್ರಸ್ತುತ, ಆದರೆ ನಮ್ಮಿಂದ ಗಾಂಧಿ ತತ್ವವನ್ನು ಪಾಲಿಸಲಾಗುತ್ತಿಲ್ಲ" ಎಂದೂ ಸ್ವತಃ ಎಲ್ಲಡೆ ಸಾರಿಕೊಂಡು ಬರುತ್ತಿರುವ ಪ್ರಕಾಶರಿಂದ ಎಷ್ಟು ಸಾಧ್ಯವಾದೀತು ಎಂಬ ಗುಮಾನಿಯಂತೂ ಇತ್ತು.

ಅದಕ್ಕೆ ತಕ್ಕಂತೆ, ಪ್ರಕಾಶ್‌ರವರು ತಾವು ಪರಿಸ್ಥಿತಿಯನ್ನು ಅರ್ಥಮಾಡಿಕೊಂಡಿರುವುದಾಗಿಯೂ, ಅದಕ್ಕೆ ತಕ್ಕುದಾದ ಕಾನೂನು ವ್ಯವಸ್ಥೆ ಮಾಡಿರುವುದಾಗಿಯೂ ಹೇಳಿದರು. ಆದರೆ ತಾವು ಇಷ್ಟೆಲ್ಲ ಮುನ್ನೆಚ್ಚರಿಕೆ ವಹಿಸಿದ್ದರೂ ಹೇಗೆ ಗಲಭೆಗಳು ಮುಂದುವರೆಯುತ್ತಿವೆ ಎಂಬುದರ ಬಗ್ಗೆ ಮಾತ್ರ ಅವರು ಆತ್ಮವಿಮರ್ಶೆ ಮಾಡಿಕೊಂಡಂತಿರಲಿಲ್ಲ. ಬದಲಾಗಿ ನಾವು ಅವರನ್ನು ರಸ್ತೆಯಲ್ಲಿ ತಡೆದು ಪ್ರಶ್ನಿಸಿದಾಗ ಚೆಡ್ಡಿ ಬುದ್ಧಿಯ ಪೊಲೀಸ್ ಅಧಿಕಾರಿಯೊಬ್ಬನನ್ನು ತಾವು ಅಮಾನತ್ತು ಗೊಳಿಸಿದ್ದರೂ ಆತ ಒತ್ತಡ ತಂದು ಮತ್ತೆ ತನ್ನ ಜಾಗಕ್ಕೆ ಬಂದಿರುವುದಾಗಿ ಅವರೇ ಹೇಳಿದರು. "ಗೃಹ ಮಂತ್ರಿಯವರೇ ಹೀಗೆ ಅಸಹಾಯಕರಾದರೆ, ಇನ್ನು ಭಯ ಭೀತಿಯಲ್ಲಿರುವ ಕರಾವಳಿ ಪ್ರದೇಶದ ಜನಸಾಮಾನ್ಯರು ಇನ್ನೆಷ್ಟು ಅಸಹಾಯಕರಾಗಿರಬೇಕು?" ಎಂದು ನಾವು ಕೇಳುವ ಗೋಜಿಗೇ ಹೋಗಲಿಲ್ಲ.

ಅವತ್ತು ಅವರನ್ನು ರಸ್ತೆಯಲ್ಲಿ ತಡೆದು ಮಾತನಾಡಿಸಬೇಕಿದ್ದರ ಅನಿವಾರ್ಯತೆಯನ್ನು ವಿವರಿಸಿ "ನಾವು ಹೀಗೆ ತಡೆಯದಿದ್ದರೆ, ನೀವು ಮತ್ತಿನ್ನೆಲ್ಲಿಗೋ ಹೋಗಿ ನಮಗೆ ಸಿಗುತ್ತಿರಲಿಲ್ಲ" ಎಂದು ನಮ್ಮವರೊಬ್ಬರು ಹೇಳಿದಾಗ, ಪ್ರಕಾಶ್‌ರವರು ಉತ್ತರಿಸಿದ್ದು ಹೇಗೆ ಗೊತ್ತ? "ಅಧಿಕಾರ ದಾಹ ಇರುವವರೆಗೂ ನಾವೆಲ್ಲೂ ಹೋಗಲ್ಲ, ಇಲ್ಲೇ ಇರುತ್ತೇವೆ. ನಾವು ಎಲ್ಲದರೊಂದಿಗೂ ರಾಜಿ ಮಾಡಿಕೊಂಡಿದ್ದೇವೆ"!

ಇದು ಸೋಷಿಯಲಿಸ್ಟ್ ಪರಂಪರೆಯ, ಸೂಕ್ಷ್ಮ ಮನಸ್ಸಿನ, ಓದು-ವಿದ್ಯೆ ಇರುವ, ಪ್ರಗತಿಪರ ನಿಲುವನ್ನು ಹೊಂದಿರುವ ಪ್ರಕಾಶ್, ರಾಜ್ಯದ ಗೃಹ ಸಚಿವರಾಗಿರುವ ಪ್ರಕಾಶ್‌ರವರು ಆಡಿದ ಮಾತು.

ಮರುದಿನ ಅವರನ್ನು ಭೇಟಿ ಆದವರಿಗೆ ಮತ್ತಷ್ಟು ಆಘಾತಗಳು ಕಾದಿದ್ದವು. ಕಳೆದ ಸೆಪ್ಟೆಂಬರ್ ತಿಂಗಳ 27ರಂದು ನಮ್ಮ ವೇದಿಕೆ ಚಿಕ್ಕಮಗಳೂರಿನಲ್ಲಿ ನಡೆಸಿದ ಸೌಹಾರ್ದ ಸಭೆಯಲ್ಲಿ ಮಾತನಾಡಿದ್ದ ಜನರ ವಿರುದ್ಧ ಅಲ್ಲಿನ ಪೊಲೀಸರು "ಅವಹೇಳನಕಾರಿ ಭಾಷಣ" ಮಾಡಿದರೆಂದು ಕೇಸ್‌ಗಳನ್ನು ಜಡಿದಿದ್ದಾರೆ. ಯಾವಾಗ ಕರ್ನಾಟಕದಲ್ಲಿ ಸೌಹಾರ್ದಕ್ಕಾಗಿ ದನಿ ಎತ್ತುವುದು "ಅವಹೇಳನಕಾರಿ" ಆಯಿತು ಎಂಬುದರ ಬಗ್ಗೆ ಪ್ರಕಾಶರಲ್ಲಿ ಉತ್ತರವಿರಲಿಲ್ಲ. ಬದಲಾಗಿ "ಅಯ್ಯೋ, ಇದಷ್ಟೇ ಅಲ್ಲ ಪೊಲೀಸರು ಬೇಕಿದ್ದರೆ ಇನ್ನೂ ಎತೆಂತಹ ಕೇಸ್‌ಗಳನ್ನು ಜಡಿಯುತ್ತಾರೆ, ಗೊತ್ತಾ?" ಅಂತ ಪ್ರಶ್ನಿಸಿದರು.

ನಮ್ಮ ಪ್ರಶ್ನೆ ಇಷ್ಟೇ: ಅಧಿಕಾರಕ್ಕಾಗಿ ತಮ್ಮ ಎಲ್ಲ ನಿಲುವು, ನೈತಿಕತೆಯನ್ನು ತೊರೆದು ರಾಜಿ ಮಾಡಿಕೊಳ್ಳಬಲ್ಲ ಮನುಷ್ಯರೊಬ್ಬರು, ಆ ಅಧಿಕಾರವನ್ನು ಉಳಿಸಿಕೊಳ್ಳಲು ಮತ್ತಷ್ಟು ರಾಜಿ ಆಗುತ್ತಾರೆಂಬುದರ ಬಗ್ಗೆ ಅನುಮಾನಗಳಿಲ್ಲ. ಇಂತಹ ಸಂದರ್ಭದಲ್ಲಿ ಪ್ರಕಾಶ್‌ರವರು ಈ ರಾಜ್ಯಕ್ಕೆ ಸೂಕ್ತ ಗೃಹ ಮಂತ್ರಿಗಳೇ? ಅವರಿಂದ ಕರಾವಳಿಯ ಜನರಿಗೆ ನೆರವು, ಸಹಾಯ, ಆತ್ಮವಿಶ್ವಾಸ ನೀಡಲು ಸಾಧ್ಯವೇ?

ಇದು ಪ್ರಾಕಾಶ್ ಎಂಬ 'ಮೇಧಾವಿ'ರಾಜಕಾರಣಿ ತಲುಪಿರುವ ಅಧೋಗತಿ ಮಾತ್ರವಲ್ಲ, ಬದಲಾಗಿ ಸೌಹಾರ್ದ ಪರಂಪರೆಯ ಕರ್ನಾಟಕದ ರಾಜಕೀಯ ತಲುಪಿರುವ ಸ್ಥಿತಿಯೂ ಹೌದು. ಇದೆಲ್ಲ ಬದಲಾಗುವುದೆಂದು.....?

-ಗೌರಿ ಲಂಕೇಶ್


ಸಚಿವ ಸಂಪುಟದಲ್ಲಿ "ಅಂಡಿನ" ಖಾತೆ!

ಕ್ಷಮಿಸಿ... ಇದು ತಮಾಷೆಗಾಗಿ

ರಸಿಕ ಚಕ್ರವರ್ತಿ ಜೆ.ಎಚ್. ಪಟೇಲರು ಮುಖ್ಯಮಂತ್ರಿಯಾಗಿದ್ದ ಸಂದರ್ಭ. ಮಾರನೆ ದಿನ ಅವರು ಸಚಿವ ಸಂಪುಟವನ್ನು ವಿಸ್ತರಿಸುವ ಕಾರ್ಯಕ್ರಮವಿತ್ತು, ದಿನಪತ್ರಿಕೆಯ ವರದಿಗಾರರಿಗೆ ಆತುರ. ಅಧಿಕೃತವಾಗಿ ಪ್ರಕಟವಾಗುವ ಮುನ್ನವೇ ಸಚಿವರುಗಳು ಮತ್ತವರ ಖಾತೆಗಳನ್ನು ಮುದ್ರಿಸಿ ಶಭಾಶ್‌ಗಿರಿ ಪಡೆಯುವ ಹವಣಿಕೆ. ಅಂತ ವರದಿಗಾರರ ದಂಡೇ ಪಟೇಲರ ಮನೆಯ ಮುಂದೆ ನೆರೆದಿತ್ತು, ಸಹಜವಾಗಿ ಸಚಿವ ಸ್ಥಾನ ಆಕಾಂಕ್ಷಿ ಶಾಸಕರು ಸಹ ಅಲ್ಲೇ ಬೀಡುಬಿಟ್ಟು, ಪಟೇಲರೇನಾದರೂ ಗುಟ್ಟುಬಿಟ್ಟು ಕೊಡಬಹುದೆ ಎಂದು ಕಾತುರದಿಂದ ಕಾಯುತ್ತಿದ್ದರು.

ಪಟೇಲರೊಂದಿಗೆ ಸ್ವಲ್ಪ ಸಲಿಗೆಯಿಂದ ಇದ್ದ ವರದಿಗಾರರೊಬ್ಬರು ನೇರವಾಗಿ ಮನೆಯೊಳಗೆ ಹೋಗಿ ಪಟೇಲರ ತಲೆ ತಿನ್ನತೊಡಗಿದರು. "ಸಾರ್ ಒಂದಿಬ್ರು ಸಚಿವರ ಹೆಸ್ರು, ಪೋರ್ಟ್‌ಫೋಲಿಯೋನಾದ್ರು ಹೇಳಿ, ನಾಳೆ ಬೆಳಿಗ್ಗೆ ಪೇಪರ್‌ನಲ್ಲಿ ಬರ್ಲೆಬೇಕು." ವರದಿಗಾರರನ್ನು ಸ್ವಲ್ಪ ಹೊತ್ತು ಆಟವಾಡಿಸಿ, ಕಿಚಾಯಿಸಿದ ಪಟೇಲರು ಕೊನೆಗೂ ಒತ್ತಡಕ್ಕೆ ಮಣಿದು ಕೆಲವು ಹೆಸರುಗಳನ್ನು ಹೇಳಿದರು.

ತಮ್ಮ ಎದುರಿಗೇ ಕೂತಿದ್ದ ಪಿ.ಜಿ.ಆರ್. ಸಿಂಧ್ಯಾರತ್ತ ಬೆಟ್ಟು ಮಾಡಿ ತೋರಿಸಿ "ಇವ್ನ ಹೆಸ್ರನ್ನ ಬರ್ಕೊ, ಟ್ರಾನ್ಸ್‌ಪೋರ್ಟ್ ಕೊಟ್ಟಿದ್ದೀನಿ" ಅಂದ್ರು. ಸಿಂಧ್ಯಾ ಇಷ್ಟಗಲ ಮುಖಾ ಮಾಡಿಕೊಂಡೆದ್ದು ಧನ್ಯೋಸ್ಮಿ ಎಂಬಂತೆ ಪಟೇಲರಿಗೆ ಕೈ ಮುಗಿದು ಕೂತರು. ಅಷ್ಟರಲ್ಲಿ ಮೂಗಲ್ಲಿ ಬೆರಳನ್ನು ತೂರಿಸಿ ತಿರುವತ್ತ ಬಂದ ಶಾಸಕರೊಬ್ಬರು ದಿಢೀರನೆ ಪಟೇಲರ ಕಾಲಿನ ಮೇಲೆ ರಾಗಿ ಮೂಟೆ ಉರುಳಿದಂತೆ ಬಿದ್ದು ನಮಸ್ಕರಿಸಿದರು. ಅವರನ್ನು ತೋರಿಸಿದ ಪಟೇಲರು, "ಇವರ ಹೆಸರನ್ನು ಬರ್ಕೊ ಇವ್ರಿಗೆ ಸೈನ್ಸ್ ಅಂಡ್ ಟೆಕ್ನಾಲಜಿ ಕೊಟ್ಟಿದ್ದೀನಿ" ಅಂದ್ರು. ಈ ಮಾತು ಕೇಳಿದ "ರಾಗಿ ಮೂಟೆಯು" ಅಷ್ಟೇನು ಸಂತೋಷ ತೋರದೆ ಹೊರಟು ಹೋದರು.



ಅವರು ಹಾಗೆ ಹೋದ ನಂತರ ಮಹಾ ಹಾಸ್ಯ ಪ್ರಜ್ಞೆಯ ಪಟೇಲರು, ವರದಿಗಾರನನ್ನುದ್ದೇಶಿಸಿ "ಈ ಮುಂಡೇದಕ್ಕೆ ಸೈನ್ಸು ಗೊತ್ತಿಲ್ಲ, ಟೆಕ್ನಾಲಜಿ ಮೊದಲೇ ಗೊತ್ತಿಲ್ಲ, ಅದಕ್ಕೆ ಅವೆರಡರ ಮಧ್ಯದ "ಅಂಡ್" ಕೊಟ್‌ಬಟ್ರೆ ಹೆಂಗಿರುತ್ತೆ?" ಅಂತ ಕೇಳಿದರು. ಹೀಗೆ "ಅಂಡ್" ಖಾತೆಗೆ ಸೆಲೆಕ್ಟಾಗಿದ್ದ ಶಾಸಕರು ಬೇರ್‍ಯಾರೂ ಅಲ್ಲ, ಮಾಜಿ ಪ್ರಧಾನಿ, ಮಣ್ಣಿನ ಮಗ ಎಚ್.ಡಿ. ದೇವೇಗೌಡರ ಪುತ್ರ, ಹಾಲಿ ಲೋಕೋಪಯೋಗಿ ಸಚಿವ ಎಚ್.ಡಿ. ರೇವಣ್ಣ

ಕರಾವಳಿ ಗಲಭೆ

ಗೌಡಾಗೆ ಬೇಕು ಮುಸ್ಲಿಂ ರಕ್ತ!


ಬಿಳಿದಾಳೆ ಈಶ

ದೇವೇಗೌಡರ ಸಂಘ ಪರಿವಾರದೆದುರು ಸಂಪೂರ್ಣ ಶರಣಾಗಿದ್ದಾರೆ. ಅಷ್ಟೇ ಅಲ್ಲ, ಹಾಲಿ ಕೋ-ಬಿಜೆಪಿ ಸರ್ಕಾರದ ಪಾಲುದಾರ ಪಕ್ಷವಾದ ಜೆಡಿ(ಎಸ್) ಕೂಡ ಹಿಂದೂ ಫ್ಯಾಸಿಸ್ಟ್ ಸಂಘಟನೆಗಳು ಕರ್ನಾಟಕವನ್ನು ಇನ್ನೊಂದು ಗುಜರಾತ್ ಮಾಡುವ ಹಿಂಸೆ, ಹತ್ಯೆ ಅನ್ಯಾಯಗಳ ಅಜೆಂಡಾಗೆ ತಾನೂ ಶಾಮೀಲಾಗಿ ಹೋಗಿದೆ.

ಮೊನ್ನೆ ಅಕ್ಟೋಬರ್ 5ರ ಗುರುವಾರ ಬೆಳಗ್ಗೆ ಮಂಗಳೂರಿನಲ್ಲಿ ಸಂಘ ಪರಿವಾರಿಗಳು ಉದ್ಘಾಟಿಸಿದ ವ್ಯವಸ್ಥಿತ ಮುಸ್ಲಿಂ ವಿರೋಧಿ ಕೋಮುಗಲಭೆ ಈಗ ಇಡೀ ಕರಾವಳಿಯುದ್ದಕ್ಕೂ ಹರಡಿದೆ. ಅಬ್ದುಲ್ ಗಫೂರ್ ಎಂಬ ಮೂವತ್ತು ವರ್ಷದ ಬಡ ಕುಟುಂಬದ ಮೌಲ್ವಿಯೊಬ್ಬರನ್ನು ಭಜರಂಗಿಗಳು ಇರಿದು ಕೊಂದಿದ್ದಾರೆ. ಶುಕ್ರವಾರ ಸಂಜೆ ಮಂಗಳೂರು ಏರ್‌ಪೋರ್ಟ್ ರಸ್ತೆಯಲ್ಲಿ ವಾಹನದಲ್ಲಿ ಸಾಗುತ್ತಿದ್ದ ಬೋಳ್ಯಾರ್‌ನ ಇಬ್ರಾಹಿಂ (36) ಎಂಬುವರನ್ನು ತಲವಾರ್‌ಗಳಿಂದ ಕೊಚ್ಚಿ ಕೊಲೆ ಮಾಡಲಾಗಿದೆ.







ಲೂಟಿಗೀಡಾದ ಮುಸ್ಲಿಮರ ಅಂಗಡಿಗಳು

ಅಲ್ಲಿಗೆ ಅಧಿಕಾರಕ್ಕಾಗಿ ಕೋಮುವಾದಿಗಳೊಂದಿಗೆ ಶಾಮೀಲಾಗಿರುವ ದೇವೇಗೌಡರಿಗೊಂದು ನರಬಲಿ ಮತ್ತು ಮದರಾಸಾಗಳೆಲ್ಲಾ ಭಯೋತ್ಪಾದಕರ ಆಶ್ರಯ ತಾಣವಾಗಿದೆ ಎಂದು ಭಜರಂಗಿಯಂತೆ ಹೇಳಿಕೆ ನೀಡಿದ್ದ ಜಾತ್ಯತೀತ ದಳದ ಮುಖ್ಯಮಂತ್ರಿ ಕುಮಾರಸ್ವಾಮಿಗೊಂದು ಮುಸ್ಲಿಂ ರಕ್ತ ತರ್ಪಣ ನಡೆದೇ ಹೋದಂತಾಗಿದೆ.

ವಾಸ್ತವವಾಗಿ ಇಂದಿನ ಗಲಭೆ ದೊಡ್ಡ ಮಟ್ಟದ್ದು ಎಂಬುದನ್ನು ಬಿಟ್ಟರೆ ಕಳೆದ ಮೂರ್ನಾಲ್ಕು ವರ್ಷಗಳಿಂದಲೂ ಸಂಘ ಪರಿವಾರ ಮುಸ್ಲಿಮರ ವಿರುದ್ಧ ನಿರಂತರವಾಗಿ ಹಲ್ಲೆ ದಾಳಿ-ದೌರ್ಜನ್ಯಗಳನ್ನು ನಡೆಸಿಕೊಂಡೇ ಬಂದಿತ್ತು.

ಮೊನ್ನೆ ಅಕ್ಟೋಬರ್ 3ರಂದು ನಡೆದ 'ಬಪ್ಪಬ್ಯಾರಿ' ಮೆರವಣಿಗೆ ಪ್ರಕರಣ ಈ ಗಲಭೆಗಳಿಗೊಂದು ನೆಪವಾಗಿತ್ತು ಅಷ್ಟೇ.

ಕಳೆದ ಹದಿನೈದು ದಿನದಿಂದ ಮಂಗಳೂರು ಮತ್ತು ಉಡುಪಿ ಜಿಲ್ಲೆಗಳಲ್ಲಿ ಸ್ವಲ್ಪ ಮಟ್ಟದ ಕೋಮು ಉದ್ರಿಕ್ತ ಪರಿಸ್ಥಿತಿ ಇತ್ತು. ಇದು ಆರಂಭವಾಗಿದ್ದು ಮಂಗಳೂರಿನ ಬಜ್ಪೆ ಪ್ರದೇಶದಲ್ಲಿ. ಪ್ರತಿ ವರ್ಷವೂ ಅಲ್ಲಿ ಶಾರದಾ ಮಹೋತ್ಸವ ನಡೆಯುತ್ತದೆ. ಆ ಸಂದರ್ಭದಲ್ಲಿ ನಡೆಯುವ ಟ್ಯಾಬ್ಲೋಗಳ ಮೆರವಣಿಗೆಯ ವಿಶೇಷ ಆಕರ್ಷಣೆಯೆಂದರೆ ಬಪ್ಪ ಬ್ಯಾರಿಯ ಸ್ತಬ್ಧಚಿತ್ರ. ಮುಸ್ಲಿಂ ಧರ್ಮದ ಬಪ್ಪಬ್ಯಾರಿ ಮುಲ್ಕಿಯ ಸಮೀಪದ ಬಪ್ಪನಾಡು ದುರ್ಗಾ ಪರಮೇಶ್ವರಿ ದೇವಸ್ಥಾನವನ್ನು ಕಟ್ಟಿಸಿದವರೆಂಬ ಕಥೆಯಿದೆ. ಆ ಕಾರಣದಿಂದ ಇಲ್ಲಿನ ಬಹುತೇಕ ಹಿಂದೂ ಹಬ್ಬಗಳಲ್ಲಿ ಬಪ್ಪಬ್ಯಾರಿಗೆ ವಿಶೇಷ ಸ್ಥಾನವಿದೆ.


ಆದರೆ ಅಂದು ಅದೇನು ಎಡವಟ್ಟಾಯಿತೋ, ಬಜ್ಪೆಯಿಂದ ಕಟಲಿಗೆ ಮೆರವಣಿಗೆ ಬರುತ್ತಿದ್ದಾಗ ಒಂದಿಬ್ಬರು ಕಿಡಿಗೇಡಿಗಳು, ಮೆರವಣಿಗೆಯತ್ತ ಕಲ್ಲು ತೂರಿದ್ದಾರೆ. ಸ್ವಲ್ಪ ಗೊಂದಲ, ತಳ್ಳಾಟ, ಹೊಯ್-ಕೈ ಆಗಿ ಮೆರವಣಿಗೆ ಅರ್ಧಕ್ಕೆ ನಿಂತಿದೆ. ಜಿಲ್ಲಾಡಳಿತ, ರಾಜಕಾರಣಿಗಳು ಮತ್ತು ಧಾರ್ಮಿಕ ಮುಖಂಡರು ಮಧ್ಯ ಪ್ರವೇಶಿಸಿ ವಿವೇಚನೆಯಿಂದ ಸೂಕ್ತ ನಿರ್ಧಾರ ಕೈಗೊಂಡಿದಿದ್ದರೆ ಈ ಗಲಭೆ ಅಲ್ಲಿಗೆ ನಿಲ್ಲುತ್ತಿತ್ತು. ಆದರೆ ಉರಿಯುವ ಮನೆಯಲ್ಲಿ ಗಳ ಹಿರಿಯುವ ಜಾತಿಯ ಇಂತಹವರು ಈ ಗಲಭೆಗೆ ಮತ್ತಿಷ್ಟು ಉಪ್ಪು ಸುರಿದು ಎರಡು ಗುಂಪು ಘರ್ಷಣೆಗೆ ಪಕ್ಕಾ ಮತೀಯ ಬಣ್ಣ ಬಳಿದು ಬಿಟ್ಟರು.

ಅಂದು ನಿಂತ ಮೆರವಣಿಗೆಗೆ ಅಕ್ಟೋಬರ್ 3 ರಂದೇ ಮತ್ತೆ ಚಾಲನೆ ನೀಡಲಾಯ್ತು. ಅದೆಲ್ಲಿದ್ದರೋ ಸುಮಾರು ಆರೇಳು ಸಾವಿರ ಚೆಡ್ಡಿವೀರರು ಬಜ್ಪೆಯಲ್ಲಿ ಜಮಾಯಿಸಿ ಬಿಟ್ಟರು. ಮತ್ತೆ ಬಪ್ಪಬ್ಯಾರಿಯ ಟ್ಯಾಬ್ಲೊ ಹಿಡಿದು ಕೈಯಲ್ಲಿ ದೊಣ್ಣೆ ಬೀಸುತ್ತಾ ಸುಮಾರು 7 ಕಿಲೋಮೀಟರ್ ಮೆರವಣಿಗೆ ನಡೆಸಿ ಸವಾಲು ಹೊಡೆದು ಕೆಣಕಿದರು. ಹೀಗೆ ಹೋದ ಮೆರವಣಿಗೆ ಹಿಂದಿರುಗಿ ಬಜ್ಪೆಗೆ ಬರುವಷ್ಟರಲ್ಲಿ ಅದರ ಸ್ವರೂಪ, ಮೆರವಣಿಗೆಯಲ್ಲಿದ್ದವರ ಮನಸ್ಥಿತಿಯೇ ಬದಲಾಗಿತ್ತು. ಇಡೀ ಮೆರವಣಿಗೆ ಒಂದು ಸೂತ್ರವಿಲ್ಲದ ಆಕ್ರಮಣಕಾರಿ ಗುಂಪಾಗಿ ಪರಿವರ್ತನೆಯಾಗಿತ್ತು. ಮಸೀದಿಗಳ ಮೇಲೆ ಕಲ್ಲು ತೂರಾಟ, ಕಂಡ, ಕಂಡ ಅಂಗಡಿಗಳ ಲೂಟಿ, ಬೆಂಕಿ, ಹಲ್ಲೆ ಮನಸ್ಸೋ ಇಚ್ಛೆ ನಡೆಯಿತು. ಚೆಡ್ಡಿಗಳು ಯಾವಾಗ ಅತಿರೇಕಕ್ಕಿಳಿದು ಆಕ್ರಮಣಕ್ಕಿಳಿದರೊ ಮುಸ್ಲಿಂರೂ ತಿರುಗಿಬಿದ್ದರು. ಸೈಕಲ್ ಚೈನು, ಸೋಡಾ ಬಾಟಲಿ, ಸೀಮೆ ಎಣ್ಣೆ, ಚೂರಿ, ಚಾಕುಗಳ ಧಾರಾಳ ಬಳಕೆಯಾಯ್ತು. ಮೊದಲೇ ಕರಾವಳಿಯ ಬಹುತೇಕ ಪೊಲೀಸ್ ಪಡೆ ದತ್ತಪೀಠದ ಅವಾಂತರ ನಿಯಂತ್ರಣಕ್ಕೆ ಬಾಬಾಬುಡನ್‌ಗಿರಿಗೆ ಹೋಗಿದ್ದರು. ಹೀಗಾಗಿ ಗಲಭೆಕೋರರು ನಿಯಂತ್ರಣಕ್ಕೆ ಸಿಗದೆ ಇಡೀ ಕರಾವಳಿ ಯುದ್ಧ ಭೂಮಿಯಾಗಿ ಹೋಯ್ತು.

ಇಲ್ಲಿ ಆರಂಭವಾದ ಗಲಭೆ ಕೇವಲ ಹನ್ನೆರಡು ಗಂಟೆಯಲ್ಲಿ ಜೋಕ[illegible] ಫರಂಗಿಪೇಟೆ, ಸುರತ್ಕಲ್, ತೊಕ್ಕುಟ್ಟು, ಕಟೀಲ್, ಕುದ್ರೋಳಿ, ಕಲ್ಲಡ್ಕ, ಮು[illegible] ಉಜಿರೆ, ವಿಟ್ಲ, ಬಂಟ್ವಾಳ ಪ್ರದೇಶಗಳನ್ನು ವ್ಯಾಪಿಸಿ ಬಿಟ್ಟಿತ್ತು. ಆಗ ಸಂಭವಿ[illegible] ನೋಡಿ ಎಲ್ಲಕ್ಕಿಂತ ದೊಡ್ಡ ದುರಂತ. ಪ್ರತಿಷ್ಠಿತ ದಿನ ಪತ್ರಿಕೆಗಳೂ ಸೇರಿದ[illegible] ಕೆಲವು ಸ್ಥಳೀಯ ಪತ್ರಿಕೆಗಳು "ದನಗಳನ್ನು ಅಕ್ರಮವಾಗಿ ಸಾಗಿಸುತ್ತಿದ್ದ ಟೆಂ[illegible] ಒಂದು ಮಹಿಳೆಯೊಬ್ಬಳಿಗೆ ಹಾಗು ಎರಡು ವಾಹನಗಳಿಗೆ ಡಿಕ್ಕಿ ಹೊಡೆ[illegible] ಪರಾರಿಯಾಯಿತು. ಮಹಿಳೆಯ ಪರಿಸ್ಥಿತಿ ಗಂಭೀರವಾಗಿದೆ. ಟೆಂಪೊ ಕುದ್ರೋಳಿ[illegible] ಕಸಾಯಿಖಾನೆಯ ದಿಕ್ಕಿನಲ್ಲಿ ಪರಾರಿಯಾಯ್ತು. ಟೆಂಪೊವನ್ನು ಅಟ್ಟಿಸಿಕೊಂಡು ಹೋದ ವಾಹನಗಳೆಡೆಗೆ ಕಸಾಯಿಖಾನೆ ಸಮೀಪ ಸೇರಿದ್ದ 'ನಿರ್ದಿಷ್ಟ' ಕೋಮಿನ ಜನರ ಗುಂಪೊಂದು ಕಲ್ಲು ತೂರಿ ಹಲ್ಲೆ ನಡೆಸಿತು" ಎಂದು ವರದಿ ಪ್ರಕಟಿಸಿದವು.







ಮುಸ್ಲಿಮರಿಗೆ ಜೆಡಿಎಸ್ ಕೊಡುಗೆ

ಪತ್ರಿಕೆಗಳ ಈ ವರದಿಯನ್ನು ಪೊಲೀಸರು ಸಂಪೂರ್ಣವಾಗಿ ಅಲ್ಲಗೆಳೆದು, ಈ ರೀತಿ ಮಹಿಳೆಗೆ ಟೆಂಪೊ ಡಿಕ್ಕಿ ಹೊಡೆದ ಬಗ್ಗೆಯಾಗಲಿ, ಆಕೆ ಸ್ಥಿತಿ ಗಂಭೀರವಾಗಿರುವ ಬಗ್ಗೆಯಾಗಲಿ ಯಾವುದೇ ದೂರು ಬಂದಿಲ್ಲಾ ಎಂದು ಸ್ಪಷ್ಟನೇ ನೀಡಿದರೂ, ಹುಚ್ಚೆದ್ದ ಜನ ಕೇಳುವ ಸ್ಥಿತಿಯಲ್ಲಿರಲಿಲ್ಲ. ಮತ್ತೆ ಆರಂಭವಾಯ್ತು ಎರಡನೇ ಸುತ್ತಿನ ಕೋಮು ಯುದ್ಧ. ಇದೊಂದು ಕಡೆಯಾದರೆ, ಸಂಜೆ ಪತ್ರಿಕೆಯೊಂದು ಮತ್ತೊಂದು ಹೆಜ್ಜೆ ಮುಂದೆ ಹೋಗಿ ರಮೇಶ್ ಭಟ್ ಎಂಬ ಶಿಕ್ಷಕರನ್ನು 'ನಿರ್ದಿಷ್ಟ' ಕೋಮಿನ ಜನರು ಹೊಡೆದು ಸಾಯಿಸಿಬಿಟ್ಟರೆಂದು ಛಾಯಾ[illegible] ಸಮೇತ ವರದಿ ಪ್ರಕಟಿಸಿಬಿಟ್ಟಿತು.

ಕಡೆಗೆ ಮೃತರಾದರೆಂದು ಹೇಳಲಾದ ಶಿಕ್ಷಕ ರಮೇಶ್‌ಭಟ್ ಖುದ[illegible] ಟಿವಿ ಚಾನಲ್ ಮತ್ತು ಪತ್ರಿಕೆಗಳಿಗೆ ಹೇಳಿಕೆ ನೀಡಿ "ನಾನಿನ್ನೂ ಸತ್ತಿಲ್ಲಾ, [illegible] ಮೇಲೆ ಹಲ್ಲೆ ಆಗಿಲ್ಲ" ಎಂದು ಬಹಿರಂಗವಾಗಿ ಹೇಳಬೇಕಾಯ್ತು. ಸ[illegible] ಪತ್ರಿಕೆ ಸಹ ಆದ ಪ್ರಮಾದಕ್ಕೆ ಕ್ಷಮೆ ಯಾಚಿಸಿತು. ಆದರೂ ಚೆಡ್ಡಿಗಳು [illegible] ಕಟುಸತ್ಯವನ್ನು ಒಪ್ಪಲು ಸಿದ್ಧರೇ ಇಲ್ಲ. ಅವರ ದೃಷ್ಟಿಯಲ್ಲಿ ಈಗಲೂ ರಮೇ[illegible]

(12ನೇ ಪುಟ[illegible]

ಯಾರಿವರು KFD?

Karnataka Forum For Dignity (KFD) ಎಂಬ ಹೆಸರಿನ ಈ ಸಂಘಟನೆ ಬಗ್ಗೆ ಈಗ ಎಲ್ಲರೂ ಮಾತಾಡುತ್ತಿದ್ದಾರೆ.

'ಮಂಗಳೂರಿನ ಗಲಭೆಗೆ KFD ನೇ ಕಾರಣ' ಅಂತಲೂ ಕೆಲವರು ಚೀರಿಕೊಳ್ಳುತ್ತಿದ್ದಾರೆ. ಇಷ್ಟಲ್ಲದೆ KFDಗೆ ನಿಷೇದಿತ ಸಿಮಿ ಜೊತೆ ಸಂಪರ್ಕಗಳಿವೆ ಎಂದೂ ಹಬ್ಬಿಸಲಾಗುತ್ತಿದೆ.



ಆದರೆ KFD ಪ್ರಧಾನವಾಗಿ ಒಂದು ಮುಸಲ್ಮಾನರ ಸಂಘಟನೆಯೇ ಆದರೂ ಅದು ಭಜರಂಗದಳ, ಶ್ರೀರಾಮ ಸೇನೆ, ಆರ್‌ಎಸ್‌ಎಸ್ ತರ ಸಮಾಜ ವಿರೋಧಿ ಸಂಘಟನೆಯಲ್ಲ. ಅದೇ ರೀತಿ ಇಸ್ಲಾಮಿಕ್ ಧಾರ್ಮಿಕ ಮೂಲಭೂತವಾದಿ ಗುಂಪೂ ಅಲ್ಲ. ಕರ್ನಾಟಕದ ಇಂದಿನ ಮುಸ್ಲಿಂ ಸಮುದಾಯಕ್ಕೆ ಅಗತ್ಯವಾಗಿರುವ ವೈಚಾರಿಕತೆ, ರಾಜಕೀಯ ದನಿ, ಸಾಮಾಜಿಕ ಅನ್ಯಾಯಗಳ ವಿರುದ್ಧ ಹೋರಾಟಕ್ಕೆ ಪ್ರೇರಣೆ ನೀಡಬಲ್ಲ ಚಟುವಟಿಕೆಗಳಲ್ಲಿ ನಿರತವಾಗಿದೆ KFD.

ಸ್ವತಃ ಮುಸ್ಲಿಂ ಸಮುದಾಯದೊಳಗೆ ವರದಕ್ಷಿಣೆ ಪದ್ಧತಿ ನಿವಾರಣೆಗೆ, ಸ್ತ್ರೀಯರ ಸಮಾನ ಹಕ್ಕುಗಳಿಗೆ, ಕೆಎಫ್‌ಡಿ ಜಾಗೃತಿ ಮೂಡಿಸುವ ಶಿಬಿರಗಳನ್ನು ನಡೆಸಿದೆ. ಸಾಮೂಹಿಕ ಸರಳ ವಿವಾಹಗಳನ್ನು ಅರೇಂಜ್ ಮಾಡಿದೆ. ಆರೋಗ್ಯ ತಪಾಸಣೆ, ಕಾನೂನು ಅರಿವು, ವ್ಯಕ್ತಿತ್ವ ವಿಕಸನದಂತಹ ವರ್ಕ್‌ಶಾಪ್‌ಗಳನ್ನು ಆಯೋಜಿಸಿದೆ. ಕರ್ನಾಟಕದ ಹದಿನಾಲ್ಕು ಜಿಲ್ಲೆಗಳಲ್ಲಿ ಈಗ ಬಲಿಷ್ಠ ಸಂಘಟನೆ ಕಟ್ಟಿರುವ ಕೆಎಫ್‌ಡಿಯ ಬಲ ಇರುವುದು ಅದಕ್ಕಿರುವ ಜನಬೆಂಬಲದಲ್ಲಿ.

ಜಾರ್ಜ್ ಬುಷ್ ಭಾರತಕ್ಕೆ ಭೇಟಿ ನೀಡಿದಾಗ, ಉಡುಪಿ ಬೆತ್ತಲೆ ಪ್ರಕರಣ, ಬಾಬಾಬುಡನ್‌ಗಿರಿ ಸೌಹಾರ್ದ ಸಮಾವೇಶಗಳಲ್ಲೆಲ್ಲಾ ಬೃಹತ್ ಸಂಖ್ಯೆಯಲ್ಲಿ ಬಂದು ಭಾಗವಹಿಸಿರುವ ಕೆಎಫ್‌ಡಿ ಕೋಮು ಗಲಭೆ ಪ್ರಚೋದಿಸಿದ ಉದಾಹರಣೆಗಳಿಲ್ಲ. ಕಳೆದ ಮೇ 19 ರಂದು ಬೆಂಗಳೂರಿನಲ್ಲಿ 20 ಸಾವಿರ ಜನರ 'ವಿಧಾನಸೌಧ ಚಲೋ' ಬೃಹತ್ ರ್‍ಯಾಲಿ ನಡೆಸಿತ್ತು ಕೆಎಫ್‌ಡಿ.

ಹಾಲಿ ಕೋಮುವಾದಿ ಸರ್ಕಾರದ ಮುಸ್ಲಿಂ ವಿರೋಧಿ ಕೆಲಸಗಳನ್ನು ಖಂಡಿಸಿ ನಡೆದ ರ್‍ಯಾಲಿ ಇದಾಗಿತ್ತು.

"ನೀವು ನಿಮ್ಮ ಮುಖಗಳನ್ನು ಪೂರ್ವ ದಿಕ್ಕಿಗೆ ಅಥವಾ ಪಶ್ಚಿಮ ದಿಕ್ಕಿಗೆ ಮಾಡಿಕೊಳ್ಳುವುದು ಧರ್ಮಶೀಲತೆಯಲ್ಲ. ಕಷ್ಟ ಕಾರ್ಪಣ್ಯಗಳಲ್ಲಿಯೂ ಸತ್ಯಾಸತ್ಯಗಳ ಸಮರವಾಗುತ್ತಿರುವಾಗಲೂ ಸಹನೆಯಿಂದಿರುವುದು ಧರ್ಮಶೀಲತೆ."


ಇದು ಕೆಎಫ್‌ಡಿ ಒಪ್ಪಿಕೊಂಡಿರುವ ನಿಲುವು.

ಚೆಡ್ಡಿ ಪಟಾಲಂ ಹಾಗೂ ದೇವೇಗೌಡರ ಗುಂಪಿನಲ್ಲಿ ಒಬ್ಬನ ಎದೆ ಸೀಳಿ ನೋಡಿದರೂ ಈ ಆರೋಗ್ಯಕರ ನಿಲುವು ಕಾಣ ಸಿಗುವುದಿಲ್ಲ.

ಕರ್ನಾಟಕದ ಸೌಹಾರ್ದ ಪರಂಪರೆ ಎತ್ತಿ ಹಿಡಿಯುತ್ತಾ ಬುದ್ಧ-ಬಸವ-ಅಂಬೇಡ್ಕರ್-ಟಿಪ್ಪೂ ಸುಲ್ತಾನ್ ತಮ್ಮ ಆದರ್ಶಗಳೆಂದು ಪ್ರತಿಪಾದಿಸುವ ಕೆಎಫ್‌ಡಿಯ ಮೇಲೆ ಆಧಾರಗಳಿಲ್ಲದೆ ಸಿಮಿ ಕಾಂಟ್ಯಾಕ್ಟ್ ಇದೆಯೆಂದೂ, ಟೆರರಿಸ್ಟ್‌ಗಳಿಗೆ ನೆರವಾಗುತ್ತಿದ್ದಾರೆಂದು ಹೇಳುತ್ತಿರುವವರು ಅದನ್ನು ಸಮರ್ಥಿಸುವ ಒಂದೇ ಒಂದು ಸಾಕ್ಷಿ ಪುರಾವೆ ಕೊಡಲು ಆಗಿದೆಯಾ?

ಕರಾವಳಿಯ ಕೋಮು ಗಲಭೆಯಲ್ಲಿ ಉದ್ವಿಗ್ನ ಪರಿಸ್ಥಿತಿ ತಿಳಿಗೊಳಿಸಲು, ನೊಂದವರಿಗೆ ಸಾಂತ್ವಾಹ ಹೇಳಲು ಹಗಲು ರಾತ್ರಿ ಶ್ರಮಿಸಿದ ಕೆಎಫ್‌ಡಿಯನ್ನು ಪ್ರಜ್ಞಾವಂತ ಜನ ಸದ್ಯಕ್ಕಂತೂ ಅಪಾರ್ಥ ಮಾಡಿಕೊಳ್ಳುವ ಅಗತ್ಯವಿಲ್ಲ.

ಮುಸ್ಲಿಮರ ಹತ್ಯೆಗಳು



ನಿಷ್ಕ್ರಿಯ ಪೊಲೀಸ್

ಗೃಹಮಂತ್ರಿ ಎಂ.ಪಿ. ಪ್ರಕಾಶ್ 'ಮಂಗಳೂರಿನ ಈಗಿನ ಗಲಭೆಗಳಿಗೆ ಮುಸ್ಲಿಮರೇ ಕಾರಣ' ಎಂಬ ಉಡಾಫೆಯ ಮಾತಾಡುತ್ತಿದ್ದಾರೆ. ಪ್ರಕಾಶ್ ಮುಖದಲ್ಲಿ ಈಗಾಗಲೇ ಭಜರಂಗಿ ಕಳೆ ಕಾಣಿಸುತ್ತಿದೆ. ಒಬ್ಬ ಗೃಹಮಂತ್ರಿಯಾಗಿ ಕರಾವಳಿ ಏರಿಯಾದ ಕೋಮು ಗಲಭೆಗಳ ಚರಿತ್ರೆ ಏನೆಂಬುದು ಪ್ರಕಾಶರಿಗೆ ತಿಳಿಯಲೆಂದು ಹಿಂದೂ ಫ್ಯಾಸಿಸ್ಟ್‌ರಿಂದ ಕರಾವಳಿ ಹಾಗೂ ಮಲೆನಾಡಿನಲ್ಲಿ ನಡೆದಿರುವ ಮುಸ್ಲಿಮರ ಮೇಲಿನ ದೌರ್ಜನ್ಯ ಹತ್ಯೆಗಳ ವಿವರ ನೀಡಿದ್ದೇವೆ.

*2003 ರಲ್ಲಿ ಗಣೇಶೋತ್ಸವ ಮೆರವಣಿಗೆಗೆ ಮುಸ್ಲಿಮರು ಅಡ್ಡಿ ಮಾಡಿದರೆಂದು ಸುಳ್ಳೇ ನೆಪವೊಡ್ಡಿ ಕರಾವಳಿಯ ಕಣ್ಣೂರಿನಲ್ಲೂ ಮುಸ್ಲಿಮರ ಮೇಲೆ ದೌರ್ಜನ್ಯ ನಡೆಸಲಾಯಿತು.

* **16.9.2003** ರಂದು ಶಿರಸಿಯ ಟಿಎಪಿಸಿಎಂಎಸ್ ಅಧ್ಯಕ್ಷರ ಮೇಲೆ ಹಲ್ಲೆ.

* **11.9.2003** ರಲ್ಲಿ ಸಾಗರದ ಕಾಂಗ್ರೆಸ್ ಪಾರ್ಟಿ ಆಫೀಸಿನ ಮೇಲೆ ದಾಳಿ, ಬೆಂಕಿ.

* ಸೋಮವಾರಪೇಟೆ ಬಿಜೆಪಿ ಶಾಸಕ ಅಪ್ಪಚ್ಚು ರಂಜನ್ ಚಿತಾವಣೆಯಿಂದ ಮುಸ್ಲಿಂ ವಿರೋದಿ ದಂಗೆ.

* **16.5.2003** ಮಂಗಳೂರು ತಾಲ್ಲೂಕು ಪಂಚಾಯಿತಿ ಅಧ್ಯಕ್ಷ ಜಬ್ಬಾರ್ ಹತ್ಯೆ

* ಅದೇ ವರ್ಷದ ಆಗಸ್ಟ್ ತಿಂಗಳಿನಲ್ಲಿ ಕಲ್ಲಡ್ಕದ ಸೈಕಲ್ ಶಾಪ್ ಮಾಲೀಕ ಇಸಬು ಹತ್ಯೆ ಅಂಗಡಿಗೆ ಬೆಂಕಿ.

* ಸೆಪ್ಟೆಂಬರ್ 2ನೇ ವಾರ ಪುತ್ತೂರಿನ ದಿನಸಿ ಅಂಗಡಿ ಮಾಲೀಕ ಹಮೀದ್ ಮೇಲೆ ಭಜರಂಗ ದಳದ ಬಾಲಕೃಷ್ಣ ಹಾಗೂ ಲೋಕೇಶ್ ಗುಂಪಿನಿಂದ ಹಲ್ಲೆ

* **8.9.2003** ಹಾಸನ ಮಂಗಳೂರು ರಸ್ತೆಯ[illegible] ಮುಸ್ಲಿಮರು ಪ್ರಯಾಣಿಸುತ್ತಿದ್ದ ಲಾರಿ ತಡೆದು ದ[illegible] ಸಾಗಿಸುತ್ತಿದ್ದಾರೆಂಬ ಸುಳ್ಳು ನೆಪ ನೀಡಿ ಹಲ್ಲೆ.

* ಸೆಪ್ಟೆಂಬರ್ **6, 2003** ರಂದು ಭಟ್ಕಳ[illegible] ಫಾರ್ಮಾಸಿಸ್ಟ್ ಮಹಮದ್ ಅಪ್ಪಾಲಂ ಮೇಲೆ ಹ[illegible]

* **16.3.2005** ರಂದು ಉಡುಪಿಯ[illegible] ಹಾಜಬ್ಬ-ಹಸನಬ್ಬ ಎಂಬ ತಂದೆ ಮಗನನ್ನು ಹಿಡಿ[illegible] ಬೆತ್ತಲೆ ಮಾಡಿ ಹಲ್ಲೆ. ಆರೋಪಿಗಳಿಗೆ ಶ್ರೀಮಾನ್ ದೇ[illegible] ಗೌಡರಿಂದ ಉಡುಪಿ ನಗರಾಭಿವೃದ್ಧಿ ಮಂಡಳಿಯ [illegible] ಸ್ಯತ್ವದ ಬಹುಮಾನ.

ಮಾರ್ಚ್ **30, 2002:** ಕುಂದಾಪುರ ತಾಲೂ[illegible] ಅಸೋಡು ಗ್ರಾಮದಲ್ಲಿ ಅಬ್ದುಲ್ ಸತ್ತಾರ್, ತಾಹೀ[illegible] ಕರೀಮಸಾಬ ಎಂಬುವವರು ಮೇಲೆ ಚೆಡ್ಡಿಗಳಿಂದ ಹ[illegible] ಜಾತ್ರೆಯಲ್ಲಿ ಯುವತಿಯರಿಗೆ ಸೂಜಿ ಚುಚ್ಚುವ ಮೂ[illegible] ಏಡ್ಸ್ ಹರಡುತ್ತಿದ್ದಾರೆ ಎಂದು ಸುಳ್ಳು ಆರೋಪ.

2003: ಕಾರ್ಕಳ ಸಮೀಪದ ಅಲಂಗಾರುವಿ[illegible] ಪ್ರಾರ್ಥನೆ ಮಾಡುತ್ತಿದ್ದ ಕ್ರಿಶ್ಚಿಯನ್ನರ ಮೇಲೆ ಭಜರ[illegible] ಗಳಿಂದ ಹಲ್ಲೆ.

ಸೆಪ್ಟೆಂಬರ್ **12, 2004:** ರವಿವಾರದ ಪ್ರಾರ್ಥ[illegible] ಸೇರಿದ್ದ ಸುಮಾರು 100 ಪ್ರೊಟೆಸ್ಟೆಂಟ್ ಕ್ರಿಶ್ಚಿಯ[illegible] ಸಭೆ ಮೇಲೆ ಹಿಂದೂ ಯುವ ಸೇನೆ ದಾಳಿ. [illegible] ಮತಾಂತರ ನಡೆಯುತ್ತಿತ್ತು ಎಂದು ಸುಳ್ಳು ಆರೋ[illegible]

2005 ಜೂನ್: ಮುಸ್ಲಿಂ ಮಾಲೀಕನಾಗಿರುವ ಮ[illegible] ಳೂರಿನ 'ಸ್ಯಾರಿ ಪ್ಯಾಲೇಸ್'ನ ಎಲ್ಲ ಧರ್ಮಗಳ ಕೆ[illegible] ಗಾರರು ಪಿಕ್‌ನಿಕ್‌ಗೆ ಹೋಗುತ್ತಿದ್ದಾಗ ಭಜರಂಗಿಗ[illegible] ಬಸ್ ತಡೆದು ಹಲ್ಲೆ ಮಾಡಿ, ಹಣ ಒಡವೆ ದೋಚಿದ್ದ[illegible]

2006 ಮೇ **24:** ದನಗಳ ಮಾರಾಟದ ಬ್ರೋಕ[illegible] ಪೂಜಾರಯ್ಯರನ್ನು ಭಜರಂಗಿ ಉಡುಪಿಯ ಕುಮ[illegible] ಸ್ವಾಮಿ, ಕೃಷ್ಣಶಾನ್‌ಭಾಗ್ ಗುಂಪು ಕೊಂದು ಹಾಕಿ[illegible]

ಇಂತಾ ಇನ್ನೂ ಒಂದು ನೂರು ಘಟನೆಗಳಾದ[illegible] ಕರಾವಳಿಯಲ್ಲಿ ನಡೆದಿವೆ. ಆದರೆ ಪೊಲೀಸರು ನೊ[illegible] ಮುಸ್ಲಿಮರತ್ತ ತಿರುಗಿಯೂ ನೋಡುತ್ತಿಲ್ಲ. ಇನ್ನು ರ[illegible] ನೀಡುವ ಮಾತೆಲ್ಲಿಂದ ಬಂತು. ಇಷ್ಟೆಲ್ಲಾ ಆದ ಮೇ[illegible] ನಮ್ಮ ಗೃಹಮಂತ್ರಿ ಪ್ರಕಾಶ್ ಹೇಳುವುದು 'ಮಂಗಳೂ[illegible] ಈಗಿನ ಗಲಭೆಗೆ ಮುಸ್ಲಿಮರೇ ಕಾರಣ' ಎಂದು.

ನಂಬುವ ಮಾತಾ ಇದು?


ಚಿತ್ರರಂಗ ಹೀರೋ ಅಂದ್ರೆ ದೇವ್ರಾ?

ಕೇಳ್ಲೀ ಬಿಡ್ರೀ... ಸಂಜನಾನೂ ಬಚ್ಚನ್ ಬಾಯಿಂದ ಕನ್ನಡಾ ಡೈಲಾಗ್ ಕೇಳ್ಲಿ.. ಇವರ ಮುಖಕ್ಕೆ ಮೂರು ಕಾಸು ಹುಟ್ಟೋಲ್ಲ ಅಂದ್ಮೇಲೆ ಇವರಿಗ್ಯಾಕ್ರೀ ಎಂಭತ್ತು ಲಕ್ಷ, ಒಂದು ಕೋಟಿ ಕೊಡಬೇಕು? ರಜನಿದೋ ಚಿರಂಜೀವಿದೋ ಪಿಕ್ಚರ್ ತಂದು ಡಬ್ಬಿಂಗ್ ಮಾಡ್ತೀವಿ. ಅವರ ಬಾಯಿಂದ ತಮಿಳು, ತೆಲುಗು ಕೇಳೋ ಬದಲು ಕನ್ನಡವನ್ನೇ ಕೇಳೋಣವಂತೆ. ಬಚ್ಚನ್ ಬಾಯಿಂದ ಹಾಸುವಿಗ್ನಡಾ ಅಂಥ ಬರೋದಾದ್ರೆ ಜನ ಬೇಡ ಅಂತಾರಾ? ಶಾರೂಖ್‌ಖಾನ್ ಅಮೀರ್ ಖಾನ್, ಹಿಂದಿ ಹಾಡಿಗೆ ಕುಣಿಯೋ ಬದ್ಲು ಕನ್ನಡಾ ಹಾಡಿಗೇ ಕುಣೀಲಿ ಬಿಡ್ರೀ...!

ಬಾ.ಮಾ. ಹರೀಶ್ ಎಂಬ ನಿರ್ಮಾಪಕ ಚಿತ್ರ ನಿರ್ಮಾಪಕರ ಸಂಘದ ಅಧ್ಯಕ್ಷರ ಛೇಂಬರಿನಲ್ಲಿ ಮೇಜು ಕುಟ್ಟಿದ ದಾಟಿಯೇ ಹಾಗಿತ್ತು,


ಅದು ಕನ್ನಡ ಚಿತ್ರ ನಿರ್ಮಾಪಕರ ಆಕ್ರೋಶಕ್ಕೆ ಹಿಡಿದ ಕನ್ನಡಿಯಾಗಿತ್ತು, ಇನ್ನು ನಾವ್ಯಾರೂ ಹೊಸ ಚಿತ್ರ ತೆಗೆಯೋಲ್ಲ ಎಂದು ಹಠಕ್ಕೆ ನಿರ್ಮಾಪಕರು ಇದೇ ಅಕ್ಟೋಬರ್ ಎರಡರಿಂದ ಸಿನಿಮಾ ನಿರ್ಮಾಣವನ್ನೇ ನಿಲ್ಲಿಸಿದ್ದಾರೆ. ಅವರ ಬೇಡಿಕೆ ಸರಿಯೋ ತಪ್ಪೋ ಎಂಬುದನ್ನು ಪರಿಶೀಲಿಸುವಷ್ಟು ಸಹನೆ ಕೂಡ ಫಿಲ್ಮ್ ಛೇಂಬರ್ ಅಧ್ಯಕ್ಷ ಗಂಗರಾಜುಗಿಲ್ಲ, ಅವರು ಸಿನಿಮಾ ಮಾಡದಿದ್ದರೇನಂತೆ ನಮ್ಮ ಪಾಡಿಗೆ ನಾವು ಸಿನಿಮಾ ಮಾಡ್ತೀವಿ ಎನ್ನುತ್ತಾರೆ ಪಾರ್ವತಮ್ಮ. ನಿರ್ಮಾಪಕರ ವಿರುದ್ಧ ತಿರುಗಿಬಿದ್ದ ಕಾರ್ಮಿಕರು, ಇದರಲ್ಲೇ ಬೇಳೆ ಬೇಯಿಸಿಕೊಳ್ಳುವ ಪರಭಾಷಾ ಹಂಚಿಕೆದಾರರು ಮತ್ತು ಇದೇ ಸಮಯ ಕಾದು ತಮ್ಮ ಥಿಯೇಟರ್ ಬಾಡಿಗೆಯನ್ನು ಆಕಾಶಕ್ಕೇರಿಸಿದ ಪ್ರದರ್ಶಕರು.

ಇದು ಕನ್ನಡ ಚಿತ್ರರಂಗದ ದಿವಾಳಿಯ ಲಕ್ಷಣವೋ ಅಥವಾ ವಿನಾಶದ ಕೊನೆಗಳಿಗೆಯೋ ಎಂಬುದಷ್ಟೇ ನಿರ್ಧಾರವಾಗಬೇಕಿದೆ. ರಾಜ್ ಬದುಕಿದ್ದಷ್ಟೂ ದಿನ ಕನ್ನಡ ಚಿತ್ರರಂಗದಲ್ಲಿ ಕಾಟಾಚಾರದ ಒಗ್ಗಟ್ಟಾದರೂ ಇತ್ತು, ತಮ್ಮ ಕೊನೇಗಾಲದಲ್ಲಿ ಪರಭಾಷಾ ಚಿತ್ರಗಳ ಹಾವಳಿಯ ವಿರುದ್ಧ ರಾಜ್ ಬೀದಿಗಿಳಿದದ್ದು,



ಅದರ ವಿರುದ್ಧ ಕೆಲ ಥಿಯೇಟರ್ ಮಾಲೀಕರು ಸುಪ್ರೀಂಕೋರ್ಟಿನಿಂದ ತಡೆ ತಂದದ್ದು ಹಳೇ ಕತೆ. ಹೀಗೆ ರಾಜ್ ಕುಟುಂಬ ಪರಭಾಷಾ ಚಿತ್ರಗಳ ವಿರುದ್ಧವೋ ಥಿಯೇಟರ್ ಬಾಡಿಗೆಯ ವಿರುದ್ಧವವೋ ಬೀದಿಗಿಳಿದಾಗೆಲ್ಲ ಅದರ ವಿರುದ್ಧ ಪಿತೂರಿ ಮಾಡುತ್ತಿದ್ದವನು ಸ್ಲಂ ರಮೇಶ್. ಆತನೇ ಕುಮಾರಸ್ವಾಮಿಯನ್ನು ಎತ್ತಿಕಟ್ಟಿ ಪ್ರತ್ಯೇಕ ನಿರ್ಮಾಪಕರ ಸಂಘ ಹುಟ್ಟುಹಾಕಿದ್ದ. ಈಗ ಫಿಲ್ಮ್ ಛೇಂಬರ್ ಅಧ್ಯಕ್ಷನಾಗಿರುವ ಗಂಗರಾಜ್ ರಮೇಶ್‌ನ ಉತ್ತರಾಧಿಕಾರಿ ಮತ್ತು ಆತ ಹಾಕಿಕೊಟ್ಟ ಮೇಲ್ಪಂಕ್ತಿಯನ್ನೇ ಪಾಲಿಸುವಾತ.

ರಾಜ್ ಕುಟುಂಬ ಮೊದಲು ಪ್ರತಿಭಟಿಸಿದ್ದು ಥಿಯೇಟರ್‌ಗಳ ದುಬಾರಿ ಬಾಡಿಗೆಯ ವಿರುದ್ಧ, ಆನಂತರ ಪರಭಾಷಾ ಚಿತ್ರಗಳು ಹತ್ತು ವಾರಗಳ ನಂತರ ಕರ್ನಾಟಕದಲ್ಲಿ ಬಿಡುಗಡೆಯಾಬೇಕೆಂದು ಬೀದಿಗಿಳಿದರು (ಆದರೆ ಇದು ಸಂವಿಧಾನದ ವಿರುದ್ಧ ಎಂಬ ಕಾರಣಕ್ಕೆ ಬಿದ್ದು ಹೋಯಿತು). ವಿಪರ್ಯಾಸ ಯಾವುದೆಂದರೆ ಅವತ್ತು ಯಾರು ರಾಜ್‌ರೊಂದಿಗೆ ಪರಭಾಷಾ ಸಿನಿಮಾ ವಿರುದ್ಧ ನಿಲ್ಲಲಿಲ್ಲವೋ ಈಗ ಅವರಿಗೇ ಬಿಸಿ ತಟ್ಟಿದೆ. ನಾವು ಬೀದಿಗಿಳಿದಾಗ ನಮ್ಮ ಕೈಬಿಟ್ಟವರೆಲ್ಲ ಈಗ ಬಾಯಿಬಡಿದುಕೊಂಡರೆ ಅದಕ್ಕೆ ನಾವೇಕೆ ಸೊಪ್ಪು ಹಾಕಬೇಕು ಎಂಬ ಸಿಟ್ಟು ಪಾರ್ವತಮ್ಮನವರಿಗಿದೆ.



ಇದು ಸಮಸ್ಯೆಯ ಮೂಲ. ಒಂದು ಉದ್ದಿಮೆಯಲ್ಲಿ ಒಗ್ಗಟ್ಟಿಲ್ಲದೇ ಹೋದಾಗ, ಅರಾಜಕತೆ ಮೂಡಿದಾಗ ಏನಾಗುತ್ತದೋ ಅದೇ ಕನ್ನಡ ಚಿತ್ರರಂಗಕ್ಕಾಗಿದೆ. ಕಳೆದ ವರ್ಷ ಬಿಡುಗಡೆಯಾದ 49 ಕನ್ನಡ ಚಿತ್ರಗಳ ಪೈಕಿ ಸುದೀಪ್ ನಿರ್ಮಾಣದ 'ಆಟೋಗ್ರಾಫ್' ಅಷ್ಟಿಷ್ಟು ಲಾಭ ಕಂಡಿದ್ದು ಬಿಟ್ಟರೆ ಬೇರಾವ ಚಿತ್ರಕ್ಕೂ ಬರಕತ್ತಾಗಲಿಲ್ಲ. ಉಪ್ಪಿಯ ನ್ಯೂಸ್, ರವಿಚಂದ್ರನ್ ಮಹತ್ವಾಕಾಂಕ್ಷೆಯ ಅಹಂ ಪ್ರೇಮಾಸ್ಮಿ, ಪುನೀತ್‌ನ ಆಕಾಶ್ ಥರದ ಚಿತ್ರಗಳೇ ಕೈ ಸುಟ್ಟುಕೊಂಡವು. ಥಿಯೇಟರ್ ಬಾಡಿಗೆ ಕಮ್ಮಿ ಮಾಡಿ ಎಂದು ರಾಜ್ ಕುಟುಂಬ ಪಟ್ಟುಹಿಡಿದಾಗ ಯಾರೆಲ್ಲ ಕೈಗೂಡಿಸದೇ ಹೋದರೋ ಅವರಿಗೇ ಬಿಸಿ ತಟ್ಟತೊಡಗಿತ್ತು,


ರಾಜ್ ಕುಟುಂಬದ ವಿರುದ್ಧ ವ್ಯವಸ್ಥಿತ ಷಡ್ಯಂತ್ರ ರೂಪಿಸಿದ ಥಿಯೇಟರ್ ಮಾಲೀಕರು ಕಾಲಕ್ರಮೇಣ ಒಬ್ಬೊಬ್ಬರಾಗಿ ಥಿಯೇಟರ್ ಬಾಡಿಗೆ ಏರಿಸಿದರು.


ವಾರಕ್ಕೆ ಒಂದೂವರೆ ಲಕ್ಷದಷ್ಟಿದ್ದ ಮೆಜೆಸ್ಟಿಕ್‌ನ ಕಲ್ಪನಾ ಥಿಯೇಟರ್ ಒಂದೂ ಮುಕ್ಕಾಲು ಲಕ್ಷಕ್ಕೇರಿಸಿತು. ಕೇವಲ 95 ಸಾವಿರದಷ್ಟಿದ್ದ ಮೇನಕಾ ಥಿಯೇಟರ್ ಒಂದು ಲಕ್ಷದ ಎಂಭತ್ತು ಸಾವಿರಕ್ಕೇರಿಸಿತು. 1.90 ಲಕ್ಷದಷ್ಟಿದ್ದ ಕಪಾಲಿ 2.60 ಲಕ್ಷಕ್ಕೆ, 1.60 ಲಕ್ಷದಷ್ಟಿದ್ದ ಸಾಗರ್ ಥಿಯೇಟರ್ 2.20 ಲಕ್ಷಕ್ಕೆ, 1.60 ಲಕ್ಷವಿದ್ದ ನರ್ತಕಿ ಬಾಡಿಗೆ 2.25 ಲಕ್ಷಕ್ಕೆ, ತ್ರಿವೇಣಿ 1.60 ರಿಂದ 2.20 ಕ್ಕೆ, ಸಂತೋಷ್ 1.80 ರಿಂದ 2.50 ಲಕ್ಷಕ್ಕೇರಿಸಿಬಿಟ್ಟವು.

ಬರೇ 65 ಸಾವಿರದಷ್ಟಿದ್ದ ಜೆ.ಪಿ. ನಗರದ ಸಿದ್ಧಲಿಂಗೇಶ್ವರ ಟಾಕೀಸಿನ ರೆಂಟು ಒಂದೂಕಾಲು ಲಕ್ಷಕ್ಕೇರಿತ್ತು, ಪೀಣ್ಯದ ಭಾರತಿ ಟಾಕೀಸಿನ ಬಾಡಿಗೆ ಬರೇ 80 ಸಾವಿರವಿದ್ದದ್ದು ಒಂದೂವರೆ ಲಕ್ಷಕ್ಕೇರಿತ್ತು, ಸ್ವತಃ ಕೆಸಿಎನ್ ಚಂದ್ರಶೇಖರ್ ಒಡೆತನದ ನವರಂಗ್ ಟಾಕೀಸಿನ ಬಾಡಿಗೆ 90 ಸಾವಿರದಿಂದ 2.25 ಲಕ್ಷಕ್ಕೆ ಏರಿತು.

ಮೊದಲೇ ಪ್ರೇಕ್ಷಕರ ಕೊರತೆಯಿರುವ ಕನ್ನಡ ಚಿತ್ರಗಳು ಇಷ್ಟೊಂದು ದುಬಾರಿ ಬಾಡಿಗೆ ಕೊಟ್ಟು ಸಿನಿಮಾ ಓಡಿಸುವುದು ಹೇಗೆ ಸಾಧ್ಯ? ಈ ಬಗ್ಗೆ ಫಿಲ್ಮ್ ಛೇಂಬರ್ ಅಧ್ಯಕ್ಷ ಗಂಗರಾಜು ಚಕಾರವೆತ್ತಲೇ ಇಲ್ಲ, ಹೋಗಲಿ ಪರಭಾಷಾ ಚಿತ್ರಗಳನ್ನಾದರೂ ನಿಯಂತ್ರಿಸಬೇಕಿತ್ತಲ್ಲ; ಛೇಂಬರ್ ಅಧ್ಯಕ್ಷ ಗಂಗರಾಜುಗೆ ಅದಕ್ಕೂ ಟೈಮಿರಲಿಲ್ಲ, ಯಾವುದೇ ಪರಭಾಷಾ ಚಿತ್ರವೊಂದು ಏಳು ಪ್ರಿಂಟುಗಳ ಮೇಲೆ, ಅದೂ ಹತ್ತು ಚಿತ್ರಮಂದಿರಗಳಿಗಿಂತಲೂ ಹೆಚ್ಚಿಗೆ ಪ್ರದರ್ಶನ ಮಾಡಲೇಬಾರದು ಎಂಬುದು ಛೇಂಬರ್ ನಿಯಮ. ಗಂಗರಾಜ್ ಹೇಳಿಕೇಳಿ ತಮಿಳು ಚಿತ್ರಗಳ ವಿತರಕ. ಈ ಹಿಂದೆ ಆತನೇ ನಿಂತು ರಜನಿಯ ಚಂದ್ರಮುಖಿ ಚಿತ್ರದ ನಲವತ್ತಕ್ಕೂ ಅಧಿಕ ಪ್ರಿಂಟುಗಳನ್ನು ಕರ್ನಾಟಕದಲ್ಲಿ ಓಡಿಸಿದ್ದ.

ಗಂಗರಾಜು ಥಿಯೇಟರ್ ಬಾಡಿಗೆಯನ್ನೂ ನಿಯಂತ್ರಿಸಲಿಲ್ಲ, ಪರಭಾಷಾ ಚಿತ್ರಗಳನ್ನೂ ನಿರ್ಬಂಧಿಸಲಿಲ್ಲ, ಸಹಜವಾಗೇ ಥಿಯೇಟರುಗಳ ಮಾಲೀಕರಿಗೆ ಹೆಚ್ಚಿಗೆ ಬಾಡಿಗೆ ತೆರುವ ಪರಭಾಷಾ ಚಿತ್ರಗಳೇ ಲಾಭದಾಯಕವಾದವು. ನೂರಕ್ಕೆ ನೂರರಷ್ಟು ತೆರಿಗೆ ವಿನಾಯ್ತಿ ಇರುವ ಕನ್ನಡ ಚಿತ್ರವೊಂದು ವಾರಕ್ಕೆ ಒಂದು ಲಕ್ಷ ರೂಪಾಯಿ ಬಾಡಿಗೆ ಕೊಡುವಲ್ಲಿ ತೆಲುಗು ಚಿತ್ರವೊಂದು






ಒಂದು ಲಕ್ಷದ ಅರವತ್ತು ಸಾವಿರ ರೂಪಾಯಿ ಬಾಡಿಗೆ ಕೊಡುತ್ತದೆ. ಇಲ್ಲಿ ಥಿಯೇಟರ್ ಮಾಲೀಕರು ಬಳಸುವ ಮತ್ತೊಂದು ತಂತ್ರವೆಂದರೆ; ನಾಮಕಾವಸ್ತೆಗೆ ಥಿಯೇಟರ್ ಹೊರಗೆ ಕನ್ನಡ ಚಿತ್ರದ ಪೋಸ್ಟರ್ ಅಂಟಿಸಿ ಒಳಗೆ ಪರಭಾಷಾ ಚಿತ್ರ ತೋರಿಸುವುದು. ಟಿಕೆಟ್ಟೊಂದಕ್ಕೆ 25 ರೂ. ಇರುವಲ್ಲಿ ಪರಭಾಷಾ ಚಿತ್ರಕ್ಕೆ 35 ರೂಪಾಯಿ ಗಿಟ್ಟುತ್ತದೆ. ಹಾಗಂಥ ಥಿಯೇಟರ್ ಮಾಲೀಕ ಪರಭಾಷಾ ಚಿತ್ರಕ್ಕೆ ತೆರಿಗೆ ಕಟ್ಟುವುದಿಲ್ಲ, ವಾಣಿಜ್ಯ ತೆರಿಗೆ ಅಧಿಕಾರಿಗಳ ಕೈಬಿಸಿ ಮಾಡಿ ಕನ್ನಡದ ಲೆಕ್ಕ ಕೊಡುತ್ತಾನೆ. ಪರಭಾಷಾ ಚಿತ್ರ ತೋರಿಸಿ ತೆರಿಗೆ ವಂಚಿಸುತ್ತಾನೆ.

ಈ ರೀತಿ ಪರಭಾಷಾ ಚಿತ್ರ ತೋರಿಸಿ ಕನ್ನಡದ ಹೆಸರಲ್ಲಿ ಟ್ಯಾಕ್ಸ್ ಕದಿಯುವ ಥಿಯೇಟರುಗಳಿಂದಾಗಿ ರಾಜ್ಯ ಬೊಕ್ಕಸಕ್ಕೆ ವರ್ಷವೊಂದಕ್ಕೆ ಆಗುವ ಆದಾಯ ಸೋರಿಕೆಯೇ ಅರವತ್ತು ಕೋಟಿ!

ವಾಣಿಜ್ಯ ತೆರಿಗೆ ಇಲಾಖೆಯ ಭ್ರಷ್ಟಾಚಾರಕ್ಕೂ, ಪರಭಾಷಾ ಚಿತ್ರಗಳ ಹಾವಳಿಗೂ ಸಂಬಂಧವಿದೆ ಎಂಬುದನ್ನು ಕನ್ನಡ ಚಿತ್ರ ನಿರ್ಮಾಪಕರು ಮನಗಾಣಲಿಲ್ಲ, ಅರ್ಥವಾದರೂ ಅದನ್ನು ಸರ್ಕಾರದ ಗಮನಕ್ಕೆ ತರಲಿಲ್ಲ, ಬರುಬರುತ್ತಾ ಥಿಯೇಟರ್ ಮಾಲೀಕರಿಗೆ ಕನ್ನಡ ಚಿತ್ರವೆಂದರೇನೇ ನಷ್ಟದ ಬಾಬತ್ತಾಯಿತು. ಇದಕ್ಕೆ ಲಂಗುಲಗಾಮಿಲ್ಲದೆ ಬಿಡುಗಡೆಯಾಗುವ ಪರಭಾಷಾ ಚಿತ್ರಗಳ ಹಾವಳಿ ಮತ್ತಷ್ಟು ಹಾನಿಯುಂಟು ಮಾಡಿತು. ಕಳೆದ ವರ್ಷ ತೆರೆಕಂಡ ಉಪ್ಪಿದಾದಾ ಎಂಬಿಬಿಎಸ್‌ಗೆ 2 ಕೋಟಿ ನಷ್ಟವಾದರೆ, ತಂದೆಗೆ ತಕ್ಕಮಗ ಎರಡೂವರೆ ಕೋಟಿಯ ನಷ್ಟಕ್ಕೀಡಾಯಿತು. ದರ್ಶನ್ ಇದ್ದೂ ಮಂಡ್ಯ 1 ಕೋಟಿಗೆ ಕೈ ಕಚ್ಚಿತು. ದರ್ಶನ್‌ನ ಇತರೇ ಚಿತ್ರಗಳಾದ ದತ್ತ 50 ಲಕ್ಷಕ್ಕೆ ಕೈಕೊಟ್ಟರೆ ಸುಂಟರಗಾಳಿಗೆ 1 ಕೋಟಿ ಲುಕ್ಸಾನಾಯಿತು. ಸುದೀಪ್ ಇದ್ದೂ ತಿರುಪತಿಗೆ ಒಂದೂವರೆ ಕೋಟಿ ನಷ್ಟವಾಗಿತ್ತು, ಮುರಳಿಯ ಕಂಠಿ, ಗೋಪಿ, ಸಿದ್ದು, ಶಂಭು ಮುಂತಾದ ನಾಲ್ಕು ಚಿತ್ರಗಳಿಂದ ಆದ ಒಟ್ಟು ಹಾನಿ 8 ಕೋಟಿ!


ಅಲ್ಲಿಗೆ ಯಾವೊಬ್ಬ ಹೀರೋ ಕೂಡ ಉತ್ತಮ ಕತೆ ಮತ್ತು ನಿರ್ಮಾಣವಿಲ್ಲದೇ ತನ್ನ ಸ್ವಂತ ಸಾಮರ್ಥ್ಯದಿಂದ ಚಿತ್ರವನ್ನು ಗೆಲ್ಲಿಸಲಾರ ಎಂಬುದು ಸಾಬೀತಾಗಿತ್ತು, ಅಂದ ಮೇಲೆ ಇಂಥ ಸ್ಟಾರ್‌ಗಳಿಗೆ ಐವತ್ತು ಲಕ್ಷದಿಂದ ಒಂದು ಕೋಟಿ ಕೊಟ್ಟು ಏನು ಪ್ರಯೋಜನ? ರಜನಿಯ ಯಾವುದೇ ತಮಿಳು ಚಿತ್ರ ಬಿಡುಗಡೆಗೆ ಮೊದಲೇ ಮೂವತ್ತು ಕೋಟಿಯ ಲಾಭ ಕಾಣುವುದಾದರೆ, ಯಾರೇ ತೆಲುಗು ನಿರ್ಮಾಪಕನಿಗೆ ಚಿರಂಜೀವಿಯ ಕಾಲ್‌ಶೀಟ್ ಸಿಕ್ಕಿದ್ರೇ ಹಂಚಿಕೆದಾರರು ಕ್ಯೂ ನಿಂತು ತಲಾ ಒಂದು ಕೋಟಿಯಷ್ಟು ಅಡ್ವಾನ್ಸ್ ಕೊಟ್ಟು ಬರುತ್ತಾರೆಂದರೆ; ನಮ್ಮ ಕನ್ನಡದ ಯಾವೊಬ್ಬ ಹೀರೋಗೂ ಅಂಥ ತಾಕತ್ತು ಯಾಕಿಲ್ಲ?

ಚಿತ್ರವೊಂದಕ್ಕೆ 75 ರಿಂದ 80 ಲಕ್ಷ ಪಡೆಯುವ ಉಪ್ಪಿ, ಅಷ್ಟೇ ಸಂಭಾವನೆ ಬೇಡುವ ವಿಷ್ಣು ಸೌಜನ್ಯಕ್ಕೂ ನಿರ್ಮಾಪಕರ



ಕಷ್ಟ ಕೇಳುವುದಿಲ್ಲ, ರವಿಚಂದ್ರನ್ ಚಿತ್ರವೊಂದಕ್ಕೆ 84 ಲಕ್ಷ ಪಡೆಯುತ್ತಾರಾದರೂ ಇತ್ತೀಚೆಗೆ ಸೋಲೇ ಗ್ಯಾರಂಟಿ ಎಂಬಂತಾಗಿದೆ. ದರ್ಶನ 50 ಲಕ್ಷದಿಂದ 70 ಲಕ್ಷಕ್ಕೇರಿಸಿದ್ದಾನೆ. ಜೋಗಿ ಯಶಸ್ಸಿನ ನಂತರ ಶಿವರಾಜ್‌ಕುಮಾರ್ ರೇಟು 36 ಲಕ್ಷದಿಂದ 63 ಕ್ಕೇರಿದೆ. ಇದ್ದುದರಲ್ಲಿ ಸುದೀಪ್ ವಿವೇಕಿಯಾದರೂ 40 ಲಕ್ಷಕ್ಕೆ ಕಮ್ಮಿ ಮುಟ್ಟಲ್ಲ, ಇವರಿಗೆ ಸ್ಟಾರ್‌ವ್ಯಾಲ್ಯೂ ಇರೋದೇ ನಿಜವಾದರೆ ನಿರ್ಮಾಪಕ ಹಾಕಿದ ಬಂಡವಾಳಕ್ಕೆ ತೆಲುಗು, ತಮಿಳಿನಂತೆ ಕನಿಷ್ಠ ಗ್ಯಾರಂಟಿ ಯಾದರೂ ಇರಬೇಕಿತ್ತಲ್ಲ?

ಇದು ನಿರ್ಮಾಪಕರ ಪ್ರಶ್ನೆ. ಥಿಯೇಟರ್ ಬಾಡಿಗೆ, ಪರಭಾಷಾ ಹಾವಳಿಯಿಂದಾದ ನಷ್ಟದ ಪ್ರಶ್ನೆ ಈಗ ಕನ್ನಡದ ಹೀರೋಗಳ ಬುಡಕ್ಕೆ ಬಂದುನಿಂತಿದೆ. ಅದಕ್ಕೆ ಕಾರ್ಮಿಕರ ಸಂಘದ ಕಿರುಕುಳ ಕೂಡ ಮತ್ತೊಂದು ಕಾರಣದಂತೆ ಸೇರ್ಪಡೆಗೊಂಡಿದೆ. ಹೀರೋಗಳು ತಮ್ಮ ರೇಟು ತಗ್ಗಿಸುವುದು ಸುಲಭದ ಪ್ರಶ್ನೆಯಲ್ಲ,



ರೇಟು ಇಳಿಸದೇ ನಿರ್ಮಾಪಕರು ಬಿಡುವುದಿಲ್ಲ, ಅದಕ್ಕೇ ನಿರ್ಮಾಪಕರು ಡಬ್ಬಿಂಗ್ ಗುಮ್ಮನನ್ನು ಬಿಡುತ್ತಿದ್ದಾರೆ. ಇಂಥ ಹೀರೋಗಳಿಗೆ ಲಾಭದ ಅರ್ಧ ಪಾಲು ಕೊಡೊ ಬದಲು ರಜನಿದೋ, ಚಿರಂಜೀವಿದೋ ಸಿನಿಮಾ ತಂದು ಡಬ್ಬಿಂಗ್ ಮಾಡಿದರಾಯ್ತು, ಅಮಿತಾಭ್ ಬಾಯಿಂದ ಹಿಂದಿ ಡೈಲಾಗ್ ಕೇಳೋ ಬದಲು ಕನ್ನಡ ಕೇಳ್ಲೀ ಬಿಡಿ. ರಜನಿಕಾಂತ್‌ರ ತಮಿಳು ಸಿನಿಮಾ ನೋಡೋ ಬದಲು ಕನ್ನಡ ಸಿನಿಮಾನೇ ಜನ ನೋಡ್ಲೀ!

ಬಹುಶಃ ಇದು ಕನ್ನಡದ ಹೀರೋ ಗಳಿಗೆ ಚುರುಕು ಮುಟ್ಟಿಸುವ ತಂತ್ರ ಕೂಡ. ಇದು ಸಂದೇಶ್ ಗುಂಪಿನ ನಿರ್ಮಾಪಕರ ಹಠ. ಹಾಗೊಮ್ಮೆ ಹೀರೋಗಳು ತಮ್ಮ ರೇಟು ಇಳಿಸಿದಾಕ್ಷಣ ಪರಭಾಷಾ ಹಾವಳಿ ನಿಲ್ಲುತ್ತಾ? ಪರಭಾಷೆ ಚಿತ್ರಗಳಿಲ್ಲ ಎಂದ ಮೇಲೆ ರುಚಿ ಕಂಡ ಥಿಯೇಟರ್ ಮಾಲೀಕರು ತೆಪ್ಪಗಿರುತ್ತಾರಾ? ಇದೆಲ್ಲಾ ಸರಿ ಹೋಯಿತೆಂದಾಕ್ಷಣ ಕನ್ನಡ ನಿರ್ಮಾಪಕರ ಸಿನಿಮಾ ಅಭಿರುಚಿ ಸರಿಹೋಗುತ್ತಾ? ಕತೆ ಮತ್ತು ಗುಣಮಟ್ಟದಿಂದ ಮಾತ್ರವೇ ಕನ್ನಡ ಸಿನಿಮಾಗಳು ಗೆಲ್ಲುವ ದಿನಗಳು ಬರುತ್ತಾ?

ಇಡೀ ಚಿತ್ರರಂಗಕ್ಕೆ ಒಗ್ಗಟ್ಟು ಕಲಿಸುವವರ್‍ಯಾರು?


-ರಾ. ಸೋಮನಾಥ್

ಪಾರ್ವತಮ್ಮನವರಿಗೆ ಯಾವ ಅಳುಕು?

ಉತ್ತಮ ಗುಣಮಟ್ಟದ ಸಿನಿಮಾ ಮಾಡಿಯೇ ಲಾಭ ಮಾಡಬೇಕು ನಿಜ; ಆದರೆ ಹೀರೋಗಳ ಮೇಲೆ ಇಷ್ಟೆಲ್ಲಾ ದುಡ್ಡು ಹಾಕಿದ ಮೇಲೂ ಅವರ ಸ್ಟಾರ್‌ಗಿರಿಗೊಂದು ಗ್ಯಾರಂಟಿ ಬೇಡವೇ?

'ಇದು ನಿರ್ಮಾಪಕರ ಪ್ರಶ್ನೆ, ಇದರಲ್ಲಿ ನ್ಯಾಯವಿಲ್ಲದಿಲ್ಲ, ಪರಭಾಷಾ ಚಿತ್ರಗಳ ಮೇಲೆ ನಿರ್ಬಂಧ ವಿಧಿಸಬೇಕು, ಥಿಯೇಟರ್ ಬಾಡಿಗೆ ಇಳಿಸಬೇಕು, ಕಾರ್ಮಿಕ ಸಂಘದ ಕಾಟ ತಪ್ಪಿಸಬೇಕೆಂಬ ಅವರ ಬೇಡಿಕೆ ನ್ಯಾಯವಾದದ್ದೇ. ಆದರೆ ಇದನ್ನು ಪಾರ್ವತಮ್ಮ ಏಕೆ ಬೆಂಬಲಿಸುತ್ತಿಲ್ಲ ಎಂಬುದೇ ಅಸಲೀ ಪ್ರಶ್ನೆ,

ಬಲ್ಲ ಮೂಲಗಳ ಪ್ರಕಾರ ಹಾಗೇನಾದರೂ ಬೀದಿಗಿಳಿದರೆ ಅದಕ್ಕೆ ಮುಖ್ಯಮಂತ್ರಿ ಕುಮಾರಸ್ವಾಮಿಯೇ ನಿಂತು ಹುಳಿ ಹಿಂಡುತ್ತಾರೆಂಬ ಅಳುಕು ಪಾರ್ವತಮ್ಮನವರಿಗಿದೆ. ಮೊದಲಿನಿಂದಲೂ ದೇವೇಗೌಡರಿಗೆ



ತಮಗಿಂತ ಜನಪ್ರಿಯರಾದ ರಾಜ್ ಬಗ್ಗೆ ಅಸೂಯೆಯಿದೆ. ಅದು ಕುಮಾರಸ್ವಾಮಿಗೂ ರಕ್ತಗತವಾಗಿದೆ. ರಾಜ್ ತೀರಿಕೊಂಡಾಗ ಅದನ್ನು ಎಷ್ಟೊಂದು ಕಾಳಜಿಯಿಂದ ನಿಭಾಯಿಸಬೇಕಿತ್ತೋ ಹಾಗೆ ನಿಭಾಯಿಸದೇ ಯಾರೋ ಯಕಶ್ಚಿತ್ ಕೌನ್ಸಿಲರ್ ಸತ್ತಂತೆ ನಡೆಕೊಂಡಿತು ಕುಮಾರಸ್ವಾಮಿ ಸರ್ಕಾರ. ಶಾಂತ ರೀತಿಯ ಶವದ ಮೆರವಣಿಗೆ ಮೇಲೆ ವಿನಾಕಾರಣ ಲಾಠಿ ಚಾರ್ಜ್ ಮಾಡಿದ್ದರಿಂದಲೇ ಗಲಭೆ ಸಂಭವಿಸಿತು. ಎಂಟು ಮಂದಿ ರಾಜ್ ಅಭಿಮಾನಿಗಳನ್ನು ಗುಂಡಿಟ್ಟು ಕೊಂದು, ನೂರಾರು ಮಂದಿ ರಾಜ್ ಅಭಿಮಾನಿಗಳು ಇವತ್ತಿಗೂ ಜೈಲಿನಲ್ಲೇ ಕೊಳೆಯುವಂತೆ ಮಾಡಿದ್ದೂ ಕುಮಾರ್ ಸರ್ಕಾರವೇ. ಹೋಗಲಿ ಗೋಲಿಬಾರ್‌ನಲ್ಲಿ ಸತ್ತವರಿಗೆ ಪರಿಹಾರವಾದರೂ ನೆಟ್ಟಗೆ ಸಿಕ್ಕಿತಾ? ಅದೂ ಇಲ್ಲ, ಬಹುಶಃ ಬೇರೆ ಯಾರೋ ಮುಖ್ಯಮಂತ್ರಿಯಾಗಿದ್ದರೆ ರಾಜ್ ಅಭಿಮಾನಿಗಳ ಮೇಲೆ ಈ ರೀತಿಯ ದೌರ್ಜನ್ಯವೆಸಗುತ್ತಿರಲಿಲ್ಲ, ಹಿಂದೆ ರಾಜ್ ಕುಟುಂಬದ ವಿರುದ್ಧ ನಿರ್ಮಾಪಕರ ಪ್ರತ್ಯೇಕ ಸಂಘ ಕಟ್ಟಿದ್ದ ಇದೇ ಕುಮಾರಸ್ವಾಮಿ



ಈಗ ಇನ್ನೇನು ಕಾಟ ಕೊಟ್ಟಾರೋ ಎಂಬ ಅಳುಕು ಪಾರ್ವತಮ್ಮನವರಿಗಿದೆ. ಈಗ ಬಂದ್ ಕರೆ ಕೊಟ್ಟ ನಿರ್ಮಾಪಕರ ಒಗ್ಗಟ್ಟಿನ ಬಗ್ಗೆಯೂ ಗುಮಾನಿಯಿದೆ.

ಹೇಗೂ ತಮ್ಮ ಮನೆಯಲ್ಲೇ ಪುನೀತ್-ಶಿವಣ್ಣರಂಥ ಇಬ್ಬರು ಹೀರೋಗಳಿದ್ದಾರೆ. ಇಬ್ಬರಿಗೂ ಅವರದೇ ಆದ ಕಿಮ್ಮತ್ತಿದೆ. ಸಾಲದ್ದಕ್ಕೆ ತಮ್ಮದೇ ಔಟ್‌ಡೋರ್ ಯೂನಿಟ್ಟು, ಎಡಿಟಿಂಗ್ ಸ್ಟುಡಿಯೋ, ಕ್ಯಾಮೆರಾ, ಡಿಸ್ಟ್ರಿಬ್ಯೂಷನ್ ನೆಟ್‌ವರ್ಕ್ ಎಲ್ಲಾ ಇದ್ದೂ ಬೇರೆ ನಿರ್ಮಾಪಕರಂತೆ ಪ್ರತಿಯೊಂದಕ್ಕೂ ಮತ್ತೊಬ್ಬರನ್ನು ಆಶ್ರಯಿಸಬೇಕಾದ ಸ್ಥಿತಿಯಿಲ್ಲ. ಹಾಗಿರುವಾಗ ತಮ್ಮ ಪಾಡಿಗೆ ತಾವು ಗಂಭೀರವಾಗಿಯೇ ಸಿನಿಮಾ ಮಾಡಿಕೊಂಡಿದ್ದರಾಯ್ತು ಎಂಬುದು ಪಾರ್ವತಮ್ಮನವರ ನಿಲುವು. ಸದ್ಯ ರಾಕ್‌ಲೈನ್ ಪಾರ್ವತಮ್ಮನವರ ಬೆನ್ನಿಗಿದ್ದಾರೆ. ಕೋಟಿ, ಮಂಜು, ಮುನಿರತ್ನಂ ನಾಯ್ಡು, ಕೆಸಿಎನ್ ಕುಮಾರ್, ಉಮೇಶ್ ಬಣಕಾರ್, ಬಾ.ಮಾ. ಹರೀಶ್, ಪ್ರವೀಣ್, ಗಣೇಶ್ ಮುಂತಾದ ನಿರ್ಮಾಪಕರು ಸಂದೇಶ್ ನಾಗರಾಜ್ ಜೊತೆ ಕೈ ಜೋಡಿಸಿದ್ದಾರೆ.

ಹಾಸ್ಯಗಾರರು ಗಾಬರಿಯಾದಾಗ ತಮ್ಮ ಗಾಯದ ಬಗ್ಗೆ ಯೋಚಿಸುವುದಿಲ್ಲ

ಬತ್ತ ಬತ್ತಾ ದೇಸಿರ ಮಂಕಾಯ್ತಾಯಿದ್ದತಂತೆ!

"ಮೈಸೂರ್ ದಸರಾ ಬತ್ತ ಬತ್ತಾ ಮಂಕಾಯ್ತಾ ಅದಂತೆ" ಎಂದು ಸೀರ ಮೈಸೂರಿಗೆ ಹೋಗಿ ಬಂದವರ ಅಭಿಪ್ರಾಯವನ್ನು ಎಸೆದ. ಇದನ್ನು ಕೇಳಿಸಿಕೊಂಡು ಗಂಭೀರವಾಗಿ ಯೋಚಿಸಿದ ಕಾಳ ಮಾವ.



"ಯಾವತ್ತು ಜಯಚಾಮ ರಾಜ ವಡೇರ್ನ ಅಂಬಾರಿ ಮ್ಯಾಲಿಂದ ಇಳಿಸಿದ್ರೊ ಅವತ್ತಿಂದ ದಸರದ ಕಳೆನೆ ವಂಟೊಯ್ತು ಕಂಡ್ಯ" ಎಂದ.

"ನೀನೇಳದು ನಿಜ ಕಣ ಮಾವ, ಇಂದ್ರಾಗಾಂಧಿ ಮೈಸೂರ ಮಾರಾಜ ಅಂಬಾರಿ ಮ್ಯಾಲೋಗದು ಬ್ಯಾಡ ಅಂತ ಹೇಳಿದಾಗ ಮಾರಾಜರು ಏನೂ ಮಾತಾಡಲಿಲ್ಲ, ಅಂಬಾರಿ ಹೋದ ಮ್ಯಾಲೆ ಕಾರಲ್ಲಿ ಹೋದ್ರು. ಮಾರಾಜರ ಕಾರೋದ ಕಡಿಕೆ ಜನ ಯಂಗೋಡಿದ್ರು ಅಂತೀ, ಅದ ನ್ಯನಿಸಿಗಂಡ್ರೆ, ಇವತ್ನು ಒಂಥರಾಯ್ತದೆ" ಎಂದ ಉಗ್ರಿ.

"ಇವತ್ತು ಶ್ರೀಕಂಠದತ್ತನ್ನ ಅಂಬಾರಿ ಮ್ಯಾಲೆ ಕೂರಿಸಿ ನೋಡಿ, ಜನ ಮಧ್ಲಿನಂಗೆ ಕೈ ಮುಗಿತರೆ" ಎಂದ ಸೀರ.

"ಯಂತ್ಯಂತವ್ರೊ ಮೂಟೆ ತರದ ಸ್ವಾಮಿಗಳ ಪಲ್ಲಕ್ಕಿಲಿ ಹೊರತರಪ್ಪ, ಆ ರಾಜಕಾರಣಿಗಳ ಟ್ಯಾಗುಟ್ರು ಲಾರಿ ಮ್ಯಾಲೆ ನಿಲ್ಸಿಸಿ ಮ್ಯರವಣಿಗೆ ಮಾಡ್ತರೆ. ಅದಕಿಂತ ಕಡಿಯೆ ಶ್ರೀಕಂಠದತ್ತ."

"ನೀನೇಳದು ನಿಜ ಕಂಡ್ಯ. ಮಾಡಬಾರ್ದ್ದು ಮಾಡಿರೊ ಮುಂಡೆ ಮಕ್ಕಳ ಹೊತಗಂಡು ಮ್ಯರವಣಿಗೆ ಮಾಡ್ತರೆ. ಅಂತದ್ರುಲಿ ಪಾಪ ಮಾರಾಜನ ಮಗ ಅಂಬಾರಿ ಮ್ಯಾಲೊದ್ರೆ ತಪ್ಪೇನು?" ಎಂದಳು ಜುಮ್ಮಿ.

"ಅಂಬಾರಿ ಮ್ಯಾಲೋಗದೇನು ಬ್ಯಾಡ ಕಣೆ, ಅದರಿಂದೆ ಇವುನು ಒಂದಾನೆ ಮ್ಯಾಲೋದ್ರೆ ಅಷ್ಟೆ ಸಾಕು, ಯಲ್ಲಾ ಜನಗಳೂ ಕೈಮುಗಿತರೆ. ಆಗ ಮಾರಾಜನೂ ಇವುರ ಕಡಿಕೆ ನೋಡಿ ಕೈಮುಗಿತನೆ. ನೋಡೋ ಜನಗಳ ಮನಸಿಗೆ ಹರ್ಸಾಯ್ತದೆ. ಅದೇ ಚಾಮುಂಡಿ ವಿಗ್ರ ನೋಡಿದ್ರೆ ಅಂಗಾದತೆ."

"ಆಗದಿಲ್ಲ ಬುಡು."

"ಅಮ್ಯಾಲೆ ಇನ್ನೊಂದೇನವ್ವ ಅಂದ್ರೆ ದಸರಾ ಹಬ್ಬ ಯಲ್ರಿಗೂ ಹಬ್ಬ, ಮುಸ್ಲಿಮರು ಕ್ರಿಸ್ಚಿಯನ್ರು ಯಲ್ಲಾ ದಸರಾ ನೋಡುವಾಗ ಅವುರ್ಯಾಕೆ ಚಾಮುಂಡಿ ನೋಡಕ್ಕೋದರೂ, ಅದೇ ಮಾರಾಜನ ಮಗ ಅಂಬಾರಿ ವಳಗಿದ್ರೆ ನೋಡಿ ಕೈಮುಗಿತರೆ. ಇವತ್ತು ದಸರ ಇನ್ನೂ ಹಾಳು ಸುರಿಯದ ನಿಲ್ಲಸಬೇಕಾದ್ರೆ ಸರ್ಕಾರ ಶ್ರೀಕಂಠದತ್ತರ ಮ್ಯರವಣಿಗೆ ಸುರುಮಾಡ್ಲಿ ಅಮ್ಯಾಲ್ನೋಡ್ಲಿ" ಎಂದ ಉಗ್ರಿ.

"ಯಾರಿಗಾರ ಹೇಳ್ಳ ಉಗ್ರಿ" ಎಂದಳು ಜುಮ್ಮಿ.

"ಯಾರಿಗೇಳದೆ?"

"ದಸರಾ ಮಾಡ್ತರಲ್ಲ ಅವುರಿಗೇಳು, ಕುಮಾರ ಸ್ವಾಮಿಗೆ ಹೇಳು ಅಥವಾ ರೇವಣ್ಣನಿಗೇಳು."

"ಹೋಗಿ ಹೋಗಿ ರೇವಣ್ಣನಿಗೇಳು ಅಂತಿಯಲ್ಲೇ. ಅವುನು ಶ್ರೀಕಂಠ ದತ್ತರಿಗೆ ನಾನು ಯಾವುದ್ರಲ್ಲಿ ಕಡಿಮೆಯಿದ್ದಿನಿ ಅಂತನೆ."

"ಅವುನು ಮಾತಾಡಕ್ಕೆ ಸುರು ಮಾಡ್ಯವುನಲ್ಲ ಅದೇನು?" ಎಂದು ಸೀರ ರೇವಣ್ಣನ ಇತ್ತೀಚಿನ ಪ್ರತಿಕ್ರಿಯೆಗಳಿಗೆ ಅಚ್ಚರಿ ವ್ಯಕ್ತ ಮಾಡಿದ.

"ಅದು ಹಿಂಗೆ ಕಣಮಾವ, ಆ ಕುಮಾರಸ್ವಾಮಿ ಏನೇನೊ ಮಾತಾಡ ವಾಗ ನೀನು ಬಾಯಿಬುಡು ಅಂತ ಹೆಡತಿ ಉಗದವುಳೆ. ಅದ್ಕೆ ಇವುನು ಸುರು ಮಾಡಿಕಂಡವುನೆ" ಎಂದು ಉಗ್ರಿ ನಗಾಡಿದ.

"ಆ ಶೆಟ್ಟಿ ಟಿಪ್ಪು ಬೋದಿದ್ನಲ್ಲ ಆ ಗಲಾಟಿ ಎಲ್ಲಿಗೆ ಬತ್ಲ?" ಎಂದ ಕಾಳಮಾವ.

"ಅಂದಿದ್ದು ತೆಪ್ಪಾಯ್ತು ಅಂದ ಕಣಮಾವ."

"ಅನ್ನದ್ಯಾಕೆ, ಅಂದು ಉಗಿಸಿಗಳದ್ಯಾಕೆ?"

"ಅವುನು ಹಿಂದೊಂದು ಸತಿ ಅಂದು ದಕ್ಕಿಸಿಗಂಡಿದ್ದ ಕಣಮಾವ. ಅಂಗೆ ಈಗ್ಲು ಅನ್ನಕ್ಕೋದ. ಈಗ ತಾನು ಮಂತ್ರಿ ಅನ್ನದ ಮರತು ಬುಟ್ಟಿದ್ದ. ಯಾವಾಗ ಬಿಜೆಪಿ ಜನ ಈ ಶೆಟ್ಟಿ ತಿಗಮುಚ ಗಂಡಿರಕ್ಕೇನಾಗ್ಯದೆ ಅಂತ ಏಳಿದ್ರೊ, ಆಗ ಯಲ್ಲ ಬಾಯಿಮುಚಗಂಡ್ರು. ಆಗ ಇವುನು ತೆಪ್ಪಾಯ್ತು ಅಂತ ಅನ್ನಬೇಕಾಯ್ತು ನೋಡಪ್ಪ."

"ಅದಕಿಂತ ಮದ್ಲು ದ್ಯಾವೇಗೌಡ ಅವುನಪರ ನಾನು ತಪ್ಪು ದಂಡ ಕೊಡ್ತಿನಿ ಅಂದಿದ್ನಂತೆ" ಎಂದ ಸೀರ.

"ಏ ದಂಡ ಕೊಡಕ್ಕೆ ದಂಡ ಹಾಕಿದ್ರೊರ್ಯಾರೊ, ಯಾವಾಗ ಸುತ್ತಮುತ್ತ ಗಲಾಟೆ ಏಳಂಗಾಯ್ತೊ ಆಗ ದ್ಯಾವೇಗೌಡ ಮಗನ ಸರ್ಕಾರಕ್ಕೆ ಏನಾರ ಅಪಾಯ ಆದತು ಅಂತ ಶೆಟ್ಟಿ ಪರ ತಾನೇ ತೆಪ್ಪಾಯ್ತು ಅಂದನಂತೆ."

"ಶೆಟ್ಟಿ ಟಿಪ್ಪು ಬೋದ್ರೆ ಗೌಡನಿಗೇನು ಅನ್ನಂಗೆ" ಇವುನ್ಯಾಕೆ ತೆಪ್ಪಾಯ್ತು ಅಂದ" ಎಂದ ಸೀರ.

"ನಂದು ಅದೇ ಕ್ವೆಸ್ನೆ ಚಿಗಪ್ಪ" ಎಂದುಕೊಂಡು ವಾಟಿಸ್ಸೆ ಬಂದ.

"ಶೆಟ್ಟಿ ಇನ್ನೊಂದು ದೂರೇಳಿದ್ನಂತೆ?" ಎಂದ ಉಗ್ರಿ.

"ಯಾವ ದೂರ್ಲ?" ಎಂದಳು ಜುಮ್ಮಿ.

"ಟಿಪ್ಪು ಆಡಳತ ಮಾಡುವಾಗ ಬರೀ ಸಾಬರನೇ ನೇಮಿಸಿಗಂಡಿದ್ದ ಅಂತವ."

"ಅಂಗೆ ಮಾಡಿದ್ರೆ ಅದು ತೆಪ್ಪಲವೆ?" ಎಂದ ಕಾಳಮಾವ.



"ಅಂಗರೆ ನಿಮ್ಮ ಟಿಪ್ಪು ಮಾಡಿರದು ಸರಿಯೆ ದ್ವಡಪ್ಪ" ಎಂದ ವಾಟಿಸ್ಸೆ.

"ನಮ್ಮ ಟಿಪ್ಪು ಯಾರ್ಲ?"

"ಸಾರಿ, ಟಿಪ್ಪು ಅಲ್ಲ ಹೈದರ್, ಅಂದ್ರೆ ದೇವೇಗೌಡ. ದ್ವಡಪ್ಪ ನಿಮ್ಮ ಗೌಡ್ರು ಟಿಪ್ಪುಗಿಂತ ಒಂದ್ಯಜ್ಜೆ ಮುಂದೋಗಿ ಇಡೀ ಮನಿಮಕ್ಕಳನ್ನಲ್ಲ ಸರ್ಕಾರದ್ನಳಿಕೆ ಸೇರಿಸಿದ್ದರಂ…

"ಯಾರ್ಲ ಅಂಗಂದೋರು?"

"ಯಾರೂ ಅನ್ನದು ಬ್ಯಾಡ ದ್ವಡಪ್ಪ, ದ್ಯಾವೇಗ… ಮನೆಕಡಿಕೆ ನೋಡಿದ್ರೆ ಸಾಕು ಕಾಣ್ತದೆ. ಒಬ್ಬ … ಮುಖ್ಯಮಂತ್ರಿ, ಇನ್ನೊಬ್ಬ ಮಗ ಪಿಡಬ್ಲ್ಯೂಡಿ, ಕರಂ… ಹಾಲು ಇನ್ನು ಏನೇನೊ ಖಾತೆ ಇಟಗಂಡಿರೊ ಮ… ಬಾಲಕಿಷ್ಣ ಸರ್ಕಾರಿ ಜನವ ವರ್ಗಾವಣೆ ಮಾಡ… ಅಧಿಕಾರಿ. ನಾಕನೆ ಹುಡುಗ ರಮೇಶ್ ನನಿಗೆ ಇಂಜಿ… ಕೊಟ್ರು ಮಾತ್ರೆ ಬರಕೊಡಕ್ಕೆ ಬರದಿಲ್ಲ ಅಂತ … ಹಗಿತ ಕುಂತವುನೆ. ಇನ್ನ ಸೊಸೆರೆಲ್ಲ ಭೂಮಿ … ಅಡವು ಮಾಡ್ತ ಕುಂತವುರೆ. ಇದನ್ನೆಲ್ಲ ನೋಡಿ… ಟಿಪ್ಪು ಸುಲ್ತಾನ್ ಬೈಯ್ಯಂಗೆ ಇಲ್ಲ ದ್ವಡಪ್ಪ" ಎ… ವಾಟಿಸ್ಸೆ. "ಅಷ್ಟೇ ಅಲ್ಲ ಕಣೊ ಬೆಂಗಳೂರಲ್ಲಿ… ನೂರಾರು ಜನ ಪೊಲೀಸ್ ಇನ್ಸ್‌ಪೆಕ್ಟರ್ ಪೈಕಿ ತೊಂ… ಎಂಟು ಜನ ಕುಮಾರನ ನಂಟ್ರೆ ಇದ್ದರಂತೆ" ಎ… ಉಗ್ರಿ.

"ಅವುರ್ಯಲ್ಲ ವಳ್ಳೆ ಕ್ಯಲಸಗಾರ್ರಿರ ಬವುದು."

"ಕ್ಯಲಸಗಾರ್ರಲ್ಲ ದ್ವಡಪ್ಪ, ಕುಮ… ಸ್ವಾಮಿ ಅಭಿಮಾನಿ ಸಂಘದ ಸದಸ್… ಅದ್ಕೆ ತಂದು ಆಯಕಟ್ಟಿನ ಜಾ… ಹಾಯ್ಕಂಡಿದ್ದನಂತೆ."

"ಎಲ್ಯಾರ ಹಾಯ್ಕಳ್ಳಿ, ಅದೇ… ಬಂದು ಮಾಡಿದ್ರಂತೆ ಯಾಕ್ಲ?"

"ಮಾಜನ ವರದಿ ಜಾರಿ ಆಗ್ಲಿ ಅ… ಇಡೀ ಕರ್ನಾಟಕ ಬಂದಾಗಿತ್ತು ದ್ವಡ…

"ಮಾಜನ ವರದಿ ಅಂದ್ರೇನ್ಲ?" ಎ… ಸೀರ.

"ಅದೇನು ಅಂತ ಮುಖ್ಯವ… ಯಿಂದ ಹಿಡದು ಮುಂಡ್ರು ಪಂಚ… ಸದಸ್ಯರಗಂಟ ಯಾರಿಗೂ ಗೊತ್… ಯಾರೂ ಓದಿಲ್ಲ, ಆದ್ರು ಅದು ಜ… ಯಾಗಬೇಕು ಅಂತ ಕುಂತವುರೆ."

"ಅಂಗಂತಿಯೇನ್ಲ?" ಎಂದ ಸೀರ.

"ಊ ಚಿಗಪ್ಪ."

"ನೋಡು ಮತ್ತೆ ಇನ್ಯಂತ ಇವುರಿದ್ದರಿವುರು…

"ಲ್ಯಕ್ಕ ಹಾಕು."

–ಬಿ. ಚಂದ್ರೇಗ…

Zero Hour ಮುನ್ನಿ

1. ಗುಂಪಿಗೆ ಸೇರದ ಪದ ತೆಗೆಯಿರಿ
ಸಿ.ಟಿ. ರವಿ, ಸುನೀಲ್‌ಕುಮಾರ್, ಡಿ.ಬಿ. ಚಂದ್ರೇಗೌಡ, ಮುತಾಲಿಕ್, ಎಂ.ಪಿ. ಪ್ರಕಾಶ್



a) ಡಿ.ಬಿ. ಚಂದ್ರೇಗೌಡ
b) ಸುನಿಲ್‌ಕುಮಾರ್
c) ಎಂ.ಪಿ. ಪ್ರಕಾಶ್
d) ಮುನ್ನಿ ಬೇಟಿ, ಎಲ್ರೂ ಅವರೇ ಬಿಡು....

2. 'ಡಿ.ಬಿ. ಚಂದ್ರೇಗೌಡರ ಸೂತ್ರವೇ ಬಾಬಾಬುಡನ್‌ಗಿರಿಗೆ ಪರಿಹಾರ' ಎಂದಿದೆಯಲ್ಲ ವಾನರ ಸಿ.ಟಿ. ರವಿ?
a) ಅವರಣ್ಣನ ಪರ ಮಾತಾಡಿದ ಆ ಮಂಗ...
b) ಪೆದ್ದು ಮುನ್ನಿ, ಆ ವಾನರ, ಅದರಣ್ಣ ಎರಡಕ್ಕೂ ಕೇಳು 'ವಿವಾದವೇ ಇಲ್ಲ... ಇನ್ನೆಲ್ಲಿಯ ಪರಿಹಾರ?' ಎಂದು.
c) ಆ ಡಿಬಿಸಿಗೆ ಸೌಹಾರ್ದತೆಯ ಎ.ಬಿ.ಸಿ.ಯೂ ಗೊತ್ತಿಲ್ಲ!
d) ಡಿ.ಬಿ.ಸಿ.ಗೊಂದು ಚಡ್ಡಿ, ಲಾಠಿ ಕೊಡಿಸೋಣ ಬಿಡು.

3. 'ನಾವು ಹೊಸ ಸಿನಿಮಾ ಮಾಡಂಗಿಲ್ಲ... ಡಬ್ಬಿಂಗ್ ಮಾಡ್ತೀವಿ ಡಬ್ಬಿಂಗ್' ಎಂಬ ನಿರ್ಮಾಪಕರ ಹೇಳಿಕೆಗೆ ನಿಮ್ಮ ಪ್ರತಿಕ್ರಿಯೆ?
a) ಡಬ್ಬಿಂಗ್ ದಂಧೆಯಲ್ಲಿ ಮುಳುಗಿರೋರ್ಗೆ ಇನ್ನೇನು ಹೊಳೆಯುತ್ತೆ?
b) ಇಷ್ಟು ದಿನಾ ಏನು ಇವು ಒರಿಜಿನಲ್ ಸಿನಿಮಾ ಮಾಡಿದ್ರಾ?
c) ರಿಮೇಕು, ರಿಮಿಕ್ಸುಗಳ ಸರದಾರರ ಹೊಸ ವರಸೆ ಇದು.
d) ಈ ನಾಯಕ, ನಾಯಕಿಯರ ಖರ್ಚು ವೆಚ್ಚ ನೋಡಿ ಗಾಬರಿ ಬಿದ್ದಿದ್ದಾರಂತೆ!

4. ಸುಮತೀಂದ್ರ ನಾಡಿಗ ಸಡನ್ನಾಗಿ ಟಿಪ್ಪು ವಿರುದ್ಧ ಬರೆದಿದೆಯಲ್ಲ?
a) ಸಡನ್ನಾಗಿ ಏನ್ ಬಂತು? ಅದರ ಬುದ್ಧಿಯೇ ಅಷ್ಟು.
b) ಆತನ ಮೆದುಳು ಕೇಸರಿಬಣ್ಣದ್ದಂತೆ.
c) ಪೆನ್ನಿಗೆ ಜನಿವಾರ ತೊಡಿಸಿ ಬರೆದರೆ ಇನ್ನೇನಾಗುತ್ತೆ?
d) ಮೇಲಿನೆಲ್ಲವೂ

5. a=b, b=c, ಆಗ a=c ಆಗುತ್ತಂತೆ?
a) ಮುನ್ನಿ ಸುಮ್ನೆ ಕನ್‌ಫ್ಯೂಸ್ ಮಾಡ್ಬೇಡ
b) ಐಶ್ವರ್ಯ ಅಭಿಷೇಕನ 'ಕ್ಲೋಸ್ ಫ್ರೆಂಡು', ಅಭಿಷೇಕ ಸಲ್ಮಾನನ 'ಕ್ಲೋಸ್ ಫ್ರೆಂಡು...' ಅಂದ್ರೆ, ಐಶ್ವರ್ಯ ಸಲ್ಮಾನ್‌ನ 'ಕ್ಲೋಸ್ ಫ್ರೆಂಡು' ಅನ್ನೋಕಾಗುತ್ತಾ?
c) ದೇವೇಗೌಡ=ಕುಮಾರಸ್ವಾಮಿ, ಕುಮಾರಸ್ವಾಮಿ=ಚಡ್ಡಿ ಅಂದ್ರೆ, ದೇವೇಗೌಡ=ಚಡ್ಡಿ ಅಂದಗಾಯ್ತು ಬಿಡು....
d) sorry ಬಾಬ್ಬಾ, ನಮ್ಗೆ ಮ್ಯಾಥ್ಸ್ ಲೈಕ್ ಆಗಲ್ಲ

ಉತ್ತರಗಳು : (1) d (2) b (3) b (4) d (5) c

ಇಮೇಲ್‌ನಲ್ಲೊಂದು ಇನ್‌ಲ್ಯಾಂಡು

ಸುಧವ್ವತ್ತಿ

ಸಾರಿ ಅಂದ್ರ ಸಾರಿಯವಾ... ಈ ಗದ್ದಲದಾಗ ನಿಂಗ ಪತ್ರ ಬರಿಯಾಕ ನೆಪ್ಪು ಆಗಿಲ್ಲ ನೋಡು. ಮೊನ್ನೆ ಮೂರ್ತಿ ಮಾವ ಚೊಲೋ ಡೈಲಾಗ್ ಒಗದಾನ ನೋಡು. 'ನನ್ನ ಹೃದಯ ಸಮಾಜವಾದಿ... ಮೆದುಳು ಬಂಡವಾಳಶಾಹಿ'... ಮಾವಂಗ, ಇನ್ಫೋಸಿಸ್‌ಗೆ ಸುಮ್‌ಸುಮ್ನೆ ಬಯ್ಯೋರಿಗೆಲ್ಲ ಮುಖಕ್ಕ ಹೊಡೆದಂಗ ಹೇಳ್ಯಾನ... ಹೃದಯನೇ ಬ್ಯಾರೆ, ಮೆದುಳೇ ಬ್ಯಾರೆ ಅಂತಾ ಈ ಪ್ರಗತಿಪರರಿಗೇನು ಗೊತ್ತು? ನೀ ಈ ಕಡೆ ಬರಾವಲ್ಯಲ್ಲಬೆ. ಅದರಾಗ ನಿನವು ಬಾಳಾ ಹ್ವಾರೆ ಇರ್ತಾವು...... ಸ್ವಲ್ಪ ಟೈಮು ಮಾಡಿಕೊಂಡು ಬಾರ್ಬೆ....



ರಾಟಿ ಹಂಚಿ ಫೋಟೋ ಹೊಡೆಸಿಗೊಂಡ ಹೋಗ್ವಂತಿ.... ರೋಹನ… ಫಾರಿನ್ನಿಂದ ಯಾವಾಗ ಬರ್ತಾನ? ಮತ್ತ ವಿನೀತಪುಟ್ಟಿಗೆ ನನ್ನ ಸಿಹಿ… ಮುತ್ತುಗಳು.

ಇತಿ…

ಮುನ್ನಿ (Zero hour), ಧಾರವಾ…

ಪಿ.ಕೆ. ಮಲ್ಲನಗೌಡ…

ಬಿಟ್ bit ಹಿಟ್!

ಒಂದು 'ಗಾದಿ' ಮಾತು

(ನಿರ್ಮಾಪಕರ ಫಜೀತಿ ಕುರಿತು)

ಸ್ಕ್ರಿಪ್ಟ್ ಮಾಡಲು ಬಾರದವರು ಪೆನ್ನು ಡೊಂಕು ಎಂದರಂತೆ!
ಸಿನಿಮಾ ಮಾಡಲು ಬಾರದವರು ಕ್ಯಾಮೆರಾ ಡೊಂಕು ಎಂದರಂತೆ!

ಒಂದು `CD' ಗವನ

ಚೆಡ್ಡಿಗೆ
ಕೊಟ್ಟವರ್ಯಾರು
ದತ್ತನ ದತ್ತು
ಬಾಬಾಬುಡನ್‌ಗಿರಿ
ಸರ್ವರ ಸ್ವತ್ತು....



ಕಬ್ಬಿಣದ, ಹೊನ್ನ ಶೂಲ




ಒಂದು ಕಾಲಕ್ಕೆ.... ನನ್ನ ಪುಸ್ತಕದ ಬಗ್ಗೆ ವಿಮರ್ಶೆ, ನನ್ನ ಚಟುವಟಿಕೆಯ ಬಗ್ಗೆ ವರದಿ ಬಂದರೆ ಖುಷಿಯಾಗುತ್ತಿತ್ತು, ಕಾತರದಿಂದ ಓದುತ್ತಿದ್ದೆ. ಈಗ ಹಲವು ವರ್ಷಗಳಿಂದ ಆಸಕ್ತಿ ಕೂಡ ಕೆರಳುವುದಿಲ್ಲ. ಮೊನ್ನೆ ಯಾರೋ 'ಸಂಡೇ'ಯಲ್ಲಿ ಅದೇನೋ ಬಂದಿದೆ ಅಂದರು. ಓದಲಿಲ್ಲ. ಆಮೇಲೆ ನನ್ನ ಮೇಜಿನ ಮೇಲೆ ಬಿದ್ದಿದ್ದಾಗ ಬೇರೆ ಲೇಖನಗಳತ್ತ ಕಣ್ಣಾಡಿಸುವಾಗ ನೋಡಿದೆ. ಈ ವರದಿ ಬರೆದ ಹುಡುಗ ನನಗೆ ಗೊತ್ತು. ಆತ ಹೇಗಿತ್ತು ಎಂದು ಕೇಳಿದರೆ ಏನಾದರೂ ಹೇಳಲೇಬೇಕಾಗುತ್ತೆ ಎಂದು ಓದಿದೆ. ಹೋದವಾರ 'ಇಲಸ್ಟ್ರೇಟೆಡ್ ವೀಕ್ಲಿ'ಯಲ್ಲಿ ಒಂದು ಲೇಖನ, ನನ್ನದೊಂದು ಪತ್ರ ಬಂದಿದೆ ಅಂದರು. ಈ ವೀಕ್ಲಿಗೆ ಐದು ತಿಂಗಳ ಹಿಂದೆ ಹೆಣ್ಣುಮಗಳೊಬ್ಬಳು ಸಂದರ್ಶನ ಮಾಡಿಕೊಂಡು ಹೋದದ್ದು ನೆನಪಿತ್ತು. ಈಗ ಅದೇ ಬಂದಿರಬೇಕೆಂದು ಸುಮ್ಮನಾದೆ. ನನ್ನ ಮೇಲೆ ಬರೆದದ್ದು, ನನ್ನ ಪದ್ಯ ಪ್ರಕಟವಾದದ್ದು ನಾನೇ ಓದಿ ಏನು ಮಾಡುವುದಿದೆ, ಎಂದುಕೊಂಡೆ. ಗೆಳೆಯರು ಬಿಡಲಿಲ್ಲ. ವೀಕ್ಲಿಯನ್ನು ತಂದು ತೋರಿದರು. ಅಲ್ಲಿ ನನ್ನ 'ಅವ್ವ' ಪದ್ಯದೊಂದಿಗೆ ಅಚ್ಚಾದ ಫೋಟೋ ಚೆನ್ನಾಗಿತ್ತು. ನನ್ನವ್ವ ನೋಡಲು ಹೆಚ್ಚು ಕಮ್ಮಿ ಹಾಗೇ ಇದ್ದಳು. ವರದಿಯ ವಿವರವನ್ನೆಲ್ಲ ಓದಲು ಆಗಲೇ ಇಲ್ಲ. ಟೀಕಿಸಿದ್ದರೆ ಅನಗತ್ಯವಾಗಿ ಬೇಸರವಾಗುತ್ತದೆ, ಹೊಗಳಿದ್ದರೆ ಅಂಥ ಹೊಗಳಿಕೆಗೆ ನಾನು ಅರ್ಹನಲ್ಲದಿರಬಹುದು ಅನ್ನಿಸುತ್ತದೆ. ಅಲ್ಲದೆ ಈ ಬಗೆಯ ಜನಪ್ರಿಯತೆ ತಲೆಗೆ ಏರಿದರೆ ಕೆಲಸ ಮಾಡುವುದು ಕಷ್ಟ. ಕಣ್ಣೆದುರು ಇದ್ದದ್ದನ್ನು ನೋಡುವಾಗಲೂ ಜನಪ್ರಿಯ ವ್ಯಕ್ತಿಯ ದೃಷ್ಟಿಯಿಂದ ನೋಡಬೇಕಾಗುತ್ತದೆ.

ಅಂದಹಾಗೆ, ಖ್ಯಾತಿಗೂ ಜನಪ್ರಿಯತೆಗೂ ವ್ಯತ್ಯಾಸವಿದೆ, ಅಲ್ಲವೆ? ಪುಟ್ಟಣ್ಣ ಕಣಗಾಲ್ ಜನಪ್ರಿಯ ನಿರ್ದೇಶಕ. ಸತ್ಯಜಿತ್ ರೇ ಖ್ಯಾತಿವಂತ. ಅ.ನ.ಕೃ. ಜನಪ್ರಿಯ ಕಾದಂಬರಿಕಾರ, ಟಾಲ್‌ಸ್ಟಾಯ್ ಖ್ಯಾತಿವಂತ ಕಾದಂಬರಿಕಾರ. ಇದು ಅಪಾಯದ ವರ್ಣನೆ ಆಗಬಹುದು. ಜನಪ್ರಿಯ ವ್ಯಕ್ತಿ ಖ್ಯಾತಿವಂತರ ಗುಂಪಿನಲ್ಲಿ ನುಗ್ಗಿಕೊಳ್ಳಲು ಪ್ರಯತ್ನಿಸಬಹುದು. ಅಲ್ಲದೆ ಪ್ರತಿಯೊಬ್ಬ ಜನಪ್ರಿಯ ಮನುಷ್ಯನೂ ತಾನೊಬ್ಬ ಖ್ಯಾತಿವಂತ ವ್ಯಕ್ತಿಯೆಂದು ತಿಳಿದಿರುತ್ತಾನೆ.


ಪ್ರಚಾರ ನಿಮಗೆ ನೀಡುವ ಬಳುವಳಿಗಳಲ್ಲಿ ಒಂದು ಆತ್ಮವಂಚನೆ.

ಮಹಿಮೋತ್ಸವ

ಎಕ್ಕ ಒಂದೆರಡು ವಿಷಯ ಹೇಳುವ ಮುನ್ನ ಮೊನ್ನೆ ಓದಿದ ಒಂದು ಸುದ್ದಿಯ ಬಗ್ಗೆ ಬರೆಯುತ್ತೇನೆ. ಜೆ.ಎಚ್. ಪಟೇಲ್ ಮಗನ ಮದುವೆಗೆ ಚಂದ್ರಶೇಖರ್, ಜಾರ್ಜ್, ಅಜಿತ್‌ಸಿಂಗ್ ಮುಂತಾದವರೆಲ್ಲ ಚೆನ್ನಗಿರಿಯ ಹತ್ತಿರದ ಪಟೇಲರ ಊರಿಗೆ ಹೋಗಿದ್ದರೆಂದು ಕೇಳಿದೆ. ಸದರಿ 'ಗಣ್ಯ'ರು ಬೊಮ್ಮಾಯಿ ಮಗನ ಮದುವೆಗೆ, ನಜೀರ್, ದೇವೇಗೌಡರ ಮನೆಯಲ್ಲಾದ ಮದುವೆಗೆ ಬಂದಿದ್ದರು. ಈ ಗಣ್ಯರುಗಳಿಗೆ ನಾಚಿಕೆ, ಮರ್ಯಾದೆ ಒಂದೂ ಇರುವಂತಿಲ್ಲ. ಜನತಾದವರು ಹೇಳಿಕೇಳಿ ತಮ್ಮ ಮಕ್ಕಳ ಗಬ್ಬುನಾತದಿಂದಲೇ ಹಾಳಾಗಿರುವುದು. ಮದುವೆಯಾದವರಲ್ಲಿ ಒಬ್ಬ ಹೆಂಡದ ದಣಿಗಳಿಂದ ಹಣ ಪಡೆದು ಸಿನಿಮಾ ಮಾಡಿದ, ಇನ್ನೊಬ್ಬ ಸರ್ಕಾರಿ ಕಾರ್ಖಾನೆಗಳನ್ನೆಲ್ಲ ನೆಕ್ಕಿಹಾಕಿದ. ಸ್ವಜನ ಪಕ್ಷಪಾತದ ಕೆಲಸದಲ್ಲಿ ಮುಳುಗಿದ ಮಂತ್ರಿಗಳು ತಮ್ಮ ಮಕ್ಕಳ ಮದುವೆಗೆ ಲಕ್ಷಾಂತರ ಖರ್ಚು ಮಾಡುತ್ತಾರೆ. ಪಟೇಲರ ಚೇಲರುಗಳೇ ಈ ಮಗನ ಮದುವೆಗೆ 25 ಲಕ್ಷ ಖರ್ಚಾಯಿತು ಎಂದು ಹೇಳುತ್ತಾರೆ. ಪರವಾಗಿಲ್ಲ, ಮೂವತ್ತು ಲಕ್ಷಕ್ಕಿಂತ ಹೆಚ್ಚು ಉಡುಗೊರೆ ಬಂದಿರುತ್ತದೆ. ದಿಲ್ಲಿಯಿಂದ ಚೆನ್ನಗಿರಿಯವರೆಗೆ ಹಣ ಖರ್ಚು ಮಾಡಿಕೊಂಡು ಇಂಥ ಮದುವೆಗೆ ಬರುವ ಆಸಾಮಿಗಳನ್ನು ಮನುಷ್ಯರು ಎಂದು ಕರೆಯಲು ಸಾಧ್ಯವೆ?



ರಾಜಕಾರಣಿಗಳ ಮನೆಯಲ್ಲಾಗುತ್ತಿರುವ ಮದುವೆಗಳು ಅವರ ಭ್ರಷ್ಟತೆಯ ಉತ್ಸವಗಳಂತೆ ಕಂಡರೆ ಜನ ಏನು ಮಾಡಬೇಕು?



ಜುಲೈ 24, 1988

"ಅಂಕೆ ಇಲ್ಲದ"

ರಾಮಾಯಣ ದೂರದರ್ಶನದಿಂದ ಹಿಂದಕ್ಕೆ ಸರಿಯಲಿದೆ. ಮೊನ್ನೆ ಹನುಮಂತನ ಬಗ್ಗೆ ಬರೆದ ನಾನು ಕೂತು ಯೋಚಿಸುತ್ತಿದ್ದಂತೆ ವಿಚಿತ್ರವೆನ್ನಿಸುತ್ತದೆ. ರಾಮದಾಸ್ ಅವರ ತಾಯಿ ಹೇಳುವವರೆಗೆ ರಾಮದಾಸ್ ಅಂದರೆ ಹನುಮಂತ ಎಂದು ನನಗೆ ಹೊಳೆದೇ ಇರಲಿಲ್ಲ. ಅಲ್ಲದೆ ಈ ರಾಮಾಯಣ ಕುರಿತು ಒಮ್ಮೆ ಚಿಂತಿಸಿ. ತುಂಬ ಗಂಭೀರ ಮಹಾಕಾವ್ಯ, ಸರಳ ಕಾವ್ಯ ಕೂಡ. ರಾಮ ತಮಾಷೆ ಮಾಡುವುದಿಲ್ಲ, ಕಪಿಗಳು ಕೂಡ ರಾಜಗಾಂಭೀರ್ಯದಿಂದ ವರ್ತಿಸುತ್ತವೆ. ಇಲ್ಲಿ ಬರುವ ವ್ಯಭಿಚಾರ ಕೂಡ-ಅಂದರೆ ಸುಗ್ರೀವನ ಹೆಂಡತಿಯ ಜೊತೆಗೆ ವಾಲಿಯ ವ್ಯವಹಾರ- ಘನಗಂಭೀರವಾಗಿದ್ದು, ರಾಮ ತನ್ನ "ಪಾರ್ಟಿ"ಯ ಮನುಷ್ಯನ ಪರವಾಗಿ ವಾಲಿಯನ್ನು ಕೊಲ್ಲುವುದೂ ತುಂಬ ಸೀರಿಯಸ್ಸಾಗಿದ್ದು ನಗೆ ತರಿಸುತ್ತದೆ.

ಸುಗ್ರೀವನಿಗೆ ಬದಲು ವಾಲಿಯೇ ರಾಮನನ್ನು ಮೊದಲು ಸಂಧಿಸಿ ರಾಮನಿಗೆ ಬೆಂಬಲ ಸೂಚಿಸಿದ್ದರೆ ಆ ಮಾತೇ ಬೇರೆ ಇತ್ತು....

ಮಹಾಭಾರತ ಹಾಗಲ್ಲ. ಅಲ್ಲಿಯ ಶ್ರೇಷ್ಠ ವ್ಯಕ್ತಿಯೆನಿಸಿಕೊಂಡ ಸೌಜನ್ಯ ಮೂರ್ತಿಯಾದ ಧರ್ಮರಾಯ ಕಟ್ಟಾ ಜೂಜುಗಾರ. ಅಲ್ಲಿಯ ದೇವತೆ ಕೃಷ್ಣ ವ್ಯಭಿಚಾರವನ್ನು ಪ್ರೇಮದ ಮಟ್ಟಕ್ಕೆ ಏರಿಸಲು ಶತಪ್ರಯತ್ನ ಮಾಡುವ ಎಲ್ಲ ಮನುಷ್ಯರಂಥವನು. ಅಲ್ಲಿಯ ದ್ರೌಪದಿ ದಿಟ್ಟ ಪತಿವ್ರತೆ- ಐವರನ್ನು ಕಟ್ಟಿಕೊಂಡು ಆರನೆಯ ಕರ್ಣನತ್ತ ತವಕಿಸುವ ಈ ಕೃಷ್ಣೆ ಮನುಕುಲದ ತೀವ್ರತೆ, ಚಂಚಲತೆಗೆ ನಿತ್ಯ ಸಂಕೇತ. ವೀರರು, ಹೇಡಿಗಳು, ಗುರುಗಳು, ರಾಜರ್ಷಿಗಳು-ಎಲ್ಲರೂ ಮನುಷ್ಯರಂತೆ, ಮನುಷ್ಯ ಜೀವನದ ವಿಪರ್ಯಾಸವನ್ನು ಬಿಂಬಿಸುತ್ತಾ ಇರುತ್ತಾರೆ....

ಆದರೆ ನಮ್ಮ ಜನ! ರಾಮಾಯಣ, ಮಹಾಭಾರತದಂಥ ಮಹಾಕೃತಿಗಳ ಪ್ರಭಾವದಲ್ಲೇ ಬೆಳೆವ ನಮ್ಮ ಜನ ಎಷ್ಟು ಸಹಜರು ಮತ್ತು ವಿಚಿತ್ರರು! ಹನುಮಂತ ಶ್ರೀರಾಮ ಹೇಳಿದ್ದನ್ನು ಶಿರಸಾವಹಿಸಿ ಮಾಡುವ ದಿಟ್ಟ, ಧೀರನಾದ ಬ್ರಹ್ಮಚಾರಿ ಎಂಬುದನ್ನು ಅರಿತು ಅವನನ್ನು ಪೂಜಿಸುತ್ತಲೇ ನಗಬಲ್ಲವರು. ಇಲ್ಲಿಯ ಸುಗ್ರೀವಾಜ್ಞೆಗಳು, ರಾಮಾಯಣದ ಅಗಸನ ಕತೆ ಇರಲಿ; ಹನುಮಂತನ ಕತೆಯನ್ನೇ ಕೇಳಿ 'ಅಂಕೆ ಇಲ್ಲದ ಕಪಿ ಲಂಕೆ ಸುಟ್ಟಿತಂತೆ' ಎಂಬ ಗಾದೆಯನ್ನು ರೂಪಿಸಿದವರು!



ಹನುಮಂತನ ಬಾಲದಂತೆ ಬೆಳೆವ ಬೋರಿಂಗ್ ಕತೆಗಳು, ಪಕ್ಷಾಂತರಿ ಸುಗ್ರೀವನ ಸುಗ್ರೀವಾಜ್ಞೆಗಳು, ಚಿಕ್ಕ ಕಾರಣಕ್ಕೆ ಸವತಿಯ ಮಕ್ಕಳನ್ನು ಕಾಡಿಗೆ ಅಟ್ಟುವ ಕೈಕೇಯಿ.... ಅಳುಮುಂಜಿ ಸೀತೆ.....

ಗಂಡಿಗೆ ಮೀಸೆ ಚೆಂದ, ಹೆಣ್ಣಿಗೆ?



ಎಸ್. ಶಶಿಧರ. ಬೆಂಗಳೂರು
150 ಕೋಟಿ ಲಂಚ ಕೊಟ್ಟವರ ಹೆಸರನ್ನೇಕೆ ರೆಡ್ಡಿ ಹೇಳುತ್ತಿಲ್ಲ?
* ಕೊಟ್ಟವರದ್ದು ದಾನ, ಈಸಿಕೊಂಡವರದ್ದು ದಾಹ ಎಂಬ ಸಿದ್ಧಾಂತ ಅವರದ್ದು.

ಡಿ.ಎಲ್. ಚಂದ್ರಿಕ. ಹರಪನಹಳ್ಳಿ
ಗಂಡ-ಹೆಂಡಿರ ಜಗಳ ಉಂಡು ಮಲಗುವ ತನಕ, ಸೋದರ-ಸೋದರಿಯರ ಜಗಳ?
* ಗೆದ್ದೋರು ಯಾರೆಂದು ಜನಕ್ಕೆ ಗೊತ್ತಾಗುವ ತನಕ.

ದುಂಚಾಲಿ ಗುರುರಾಜಚಾರು. ಬಳ್ಳಾರಿ
ವೇಗ ನಿಯಂತ್ರಿಸಲು ಸ್ಪೀಡ್ ಬ್ರೇಕರ್, ಪ್ರೀತಿ ನಿಯಂತ್ರಿಸಲು?
* ಬ್ರೇಕ್ inspector ತರಹದ ಅಪ್ಪ-ಅಮ್ಮ.


ಬಿ.ಚಂದ್ರೇಗೌಡ. ಬೆಂಗಳೂರು
ಮಕ್ಕಳೊಂದಿಗೆ ಮಗುವಾಗುವುದು ಎಂದರೇನು?
* ಇಶಾ ಪಾಪು ಜೊತೆ ಗೌರಿ ಜಾರುಬಂಡೆ ಆಡಿದ್ದು ನಿಮಗೆ ಹೇಗೆ ಗೊತ್ತಾಯ್ತು,

ಶಿವಕಂಠಪ್ಪ. ಗುಲಬರ್ಗಾ
ಹಳ್ಳಿ-ಹಳ್ಳಿಗಳಲ್ಲಿ ವಾಸ್ತವ್ಯ ಹೂಡುವ ಸಿ.ಎಂ. ಕುಮಾರಣ್ಣನಿಗೆ ಈ ಪೀಡೆ ತೊಲಗಲಿ ಎಂದು ಯಾರಾದರೂ ವಿಷ ಇಕ್ಕಿದರೆ ಏನು ಮಾಡುವುದು?
* ನಿಮ್ಮ ಹೆಸರಿಗೆ ತಕ್ಕಾದ ಯೋಚನೆ ಬರುತ್ತಲ್ರೀ, ಛೇ!

ಬಿ. ಶಿವಸ್ವಾಮಿ. ಬೆಂಗಳೂರು
ರಾಮ-ಓಮ(ಹೋಮ)ಗೆ ಪ್ರೀತಿ-ಪ್ರೇಮ ಮುಟ್ಟಿದೇ?
* ಓಮೆಯ ಹಂಗಿಲ್ಲದೆ ಪ್ರೀತಿ, ಪ್ರೇಮ, ಕಾಮ ಹುಟ್ಟುತ್ತವೆ ಎಂಬುದು ನಮ್ಮ ನಂಬಿಕೆ, ಏನಂತೀರಿ.

ಸಿ. ಹಸೀನಾ. ಉಜಿರೆ
ದೇವೇಗೌಡ್ರು ಲುಂಗಿ ಒಳಗಡೆ ಇದ್ದ ಒರಿಜಿನಲ್ ಚಡ್ಡಿ ತೆಗ್ದು ಬಿಸಾಕಿ ಆರ್‌ಎಸ್‌ಎಸ್ ಚಡ್ಡಿ ಧರಿಸ್ತವ್ರಂತೆ...?
* ಬಿಸಾಡಿಲ್ಲ, ಹಂಗೇ ಒಳಗೇ ಡ್ರೈ ಮಾಡಿಸಿಕೊಂಡವ್ರೆ ಎನ್ನುತ್ತಿದ್ದಾನೆ ವಾಟಿಸ್ಸೆ.

ಸಾಬಿಯಾ ಬೇಗಂ. ದೇವದುರ್ಗ
ನೆಹರು ಹುಟ್ಟಿದ ದಿನ ಮಕ್ಕಳ ದಿನಾಚರಣೆ, ಗೌಡರು ಹುಟ್ಟಿದ ದಿನ?
* ಮಣ್ಣಿನ ಮಕ್ಕಳ ಯಾತನೆ.



ಪಿ.ಎನ್. ಶ್ರೀವತ್ಸ. ಬೆಂಗಳೂರು
ಸರಿಯಾಗಿ ತಿಂಗಳಿಗೊಮ್ಮೆ ಕೂರುವ ಹೆಣ್ಣೇ ಹೆಚ್ಚು ಆರೋಗ್ಯದಿಂದ ಕೂಡಿರುತ್ತಾಳಲ್ಲಾ?
* ರಜೆಯ ಶಕ್ತಿ ಎನ್ನೋಣವೇ.

ಬಿ.ಎಂ. ಪರಶಿವಮೂರ್ತಿ. ಬೆಂಗಳೂರು
ದೇವರು, ವಿದ್ಯಾವಂತನೋ ಇಲ್ಲಾ ಬುದ್ಧಿವಂತನೋ?
* ಅಮೃತ ಕುಡಿದವರಿಗೆ ವಿದ್ಯೆ, ಬುದ್ಧಿ ಯಾವುದೂ ಬೇಕಿಲ್ಲವಂತೆ.

ಕವಿತಾ ಮಧುಸೂದನ್. ದಾವಣಗೆರೆ
ಲಂಕೇಶ್ ಸಾರ್‌ಗೆ ಸ್ವರ್ಗದಲ್ಲಿ ಪ್ರೀತಿ ಪ್ರೇಮ ಪ್ರಣಯದ ಯೋಚನೆ ಬಂದರೆ?
* ತನನಂ ತನನಂ ಹಾಡುತ್ತಾರೆ ಅಂತಿದ್ದಾಳೆ ಬೇಬಿ.

ಎ.ಎಸ್. ಸ್ವಾಮಿ. ಶೋರಾಪೂರ
ಕೊರೆಯುವ ಚಳಿಯಲ್ಲಿ ಮೈ ಬಿಸಿ ಮಾಡಿಕೊಳ್ಳುವುದು ಹೇಗೆ?
* XXX ಅಂದರೆ ಅರ್ಥವಾಗುತ್ತೆ ತಾನೆ.

ಅಕ್ಷಯಕುಮಾರ. ಶೋರಾಪೂರ
ಟೈಂ-ಬಾಂಬ್‌ಗೂ ಗಣಿಬಾಂಬ್‌ಗೂ ಇರುವ ವ್ಯತ್ಯಾಸ?
* ಅದಕ್ಕೆ ಟೈಂ ಫಿಕ್ಸ್ ಆಗಿರುತ್ತೆ, ಇದಕ್ಕೆ ಟೈಂ ಟೇಬಲ್ ಫಿಕ್ಸ್ ಆಗಿರುತ್ತೆ

ಬಹುಮಾನಿತ ಪ್ರಶ್ನೆ


ಶಾಂದ್‌ಪಾಷಾ. ದೇವದುರ್ಗ
ಗಂಡಿಗೆ ಮೀಸೆ ಚೆಂದ, ಹೆಣ್ಣಿಗೆ?
* ಆ ಮೀಸೆ ಹುಟ್ಟಿಸುವ ಕನಸುಗಳೇ ಆನಂದ.

ಛೀ ತುಂಟಿ!

ಆಫೀಸಿನಿಂದ ಮನೆಗೆ ಬಂದ ಗಂಡನಿಗೆ ಕಾಫಿ ತಿಂಡಿ ಕೊಟ್ಟ ಹೆಂಡತಿ ಅವನು ಕುಳಿತ ಕುರ್ಚಿಯ ಕೈಸವರುತ್ತ ಕೇಳಿದಳು.

'ನೀವು ನಿಮ್ಮ ಯಾವ ಸ್ನೇಹಿತರನ್ನೂ ಯಾಕೆ ಮನೆಗೆ ಕರೆದುಕೊಂಡು ಬರೊಲ್ಲ?'

ಗಂಡ ತನ್ನ ಮಡದಿಯ ಮುಖ ನೋಡಿದ.



ಮತ್ತೆ 'ಅದು ನಿನಗೇ ಗೊತ್ತಿದೆ. ಅದಕ್ಕೆ!' ಅಂದ.

'ನನಗೆ ಮರೆತುಹೋಗಿದೆ, ಅದು ಏನು ಅಂತ ಹೇಳಿ!'

'ಯಾಕೆ ಅಂದರೆ ನಾನು ನಿನ್ನ ಮೊದಲ ಗಂಡನ ಸ್ನೇಹಿತನಾಗಿದ್ದೆ, ಅದಕ್ಕೆ' ಅಂದ ತಣ್ಣಗೆ.


ನಮ್ಮ ಪ್ರಶ್ನೆಗೆ ನಿಮ್ಮ ಉತ್ತರ!!

ವಾರದ ಪ್ರಶ್ನೆ:

ಎಂ.ಪಿ. ಪ್ರಕಾಶ್ "ನಾನು ಶರಣನಲ್ಲಾ" ಎಂದಿದ್ದಾರಲ್ಲಾ?

ಅಕ್ಟೋಬರ್ 4ರ ಸಂಚಿಕೆಯ ನಮ್ಮ ಪ್ರಶ್ನೆ: ಭೈರಪ್ಪನಿಗೂ ಬಂಕಿಮಚಂದ್ರ ಚಟರ್ಜಿಗೂ ಸಾಮ್ಯತೆ ಏನು?
ನಿಮ್ಮ ಉತ್ತರ: *'Congenital'* ಚಡ್ಡಿಗಳು ಎನ್ನುವವರಿದ್ದಾರೆ!
ಉತ್ತರ ಕಳುಹಿಸಿ ಬಹುಮಾನ ಪಡೆದಿರುವವರು: ಭಾಷಾ. ಎಚ್.ಎಸ್., ದಾವಣಗೆರೆ

'ಫಾದರ್ ಆಫ್ ಕೌನ್ಸಿಲರ್' ಚೆಡ್ಡಿ ನರಸಿಂಹಯ್ಯ



ಬಿ.ಎನ್. ನಿರ್ಮಲಾ


"ಫಾದರ್ ಆಫ್ ನೇಷನ್ ಮಹಾತ್ಮಾ ಗಾಂಧೀಜಿ, ಫಾದರ್ ಆಫ್ ಪೊಲಿಟಿಕಲ್ ಸೈನ್ಸ್ ಅರಿಸ್ಟಾಟಲ್, ಫಾದರ್ ಆಫ್ ಎಕನಾಮಿಕ್ಸ್ ಆಡಮ್‌ಸ್ಮಿತ್." ಇದೆಲ್ಲಾ ವಿದ್ಯಾವಂತರಾದ ನಿಮಗೆ ಗೊತ್ತಿದೆ. ಆದರೆ "ಫಾದರ್ ಆಫ್ ಕೌನ್ಸಿಲರ್" ಯಾರೆಂದು ನಿಮಗೆ ಗೊತ್ತೆ? ಗೊತ್ತಿಲ್ಲವಾದರೆ ಮೀಟ್ ಮಿಸ್ಟರ್ ಬಿ.ಎಚ್. ನರಸಿಂಹಯ್ಯ ಉರುಫ್ ಚೆಡ್ಡಿ ನರಸಿಂಹಯ್ಯ ಅಲಿಯಾಸ್ ಸೈಕಲ್ ಷಾಪ್ ನರಸಿಂಹಯ್ಯ "ದಿ ಫಾದರ್ ಆಫ್ ಕೌನ್ಸಿಲರ್." ಯಾಕೆಂದರೆ ಇವರು ತಮ್ಮನ್ನು ತಾವು ಪರಿಚಯಿಸಿಕೊಳ್ಳುವುದೇ ಹಾಗೆ!

ರಾಜಾಜಿನಗರ ವಿಧಾನಸಭಾ ಕ್ಷೇತ್ರದ ವಾರ್ಡ್ ನಂಬರ್ 9 ರ ಸುಬ್ರಮಣ್ಯ ನಗರದ ಮಹಾನಗರ ಪಾಲಿಕೆ ಸದಸ್ಯೆ ಭಾರತೀಯ ಜನತಾ ಪಕ್ಷದ ಬಿ.ಎನ್. ನಿರ್ಮಲಾರವರ ತಂದೆಯೇ ಸದರಿ ಫಾದರ್ ಆಫ್ ಕೌನ್ಸಿಲರ್, ಚೆಡ್ಡಿ ನರಸಿಂಹಯ್ಯ. ಈ ವಾರ್ಡಿಗೆ ಸಂಬಂಧಿಸಿದಂತೆ ನರಸಿಂಹಯ್ಯನ ವಿಷಯವೇ ಏಕೆ ಪ್ರಸ್ತುತವೆಂದರೆ, ಐದು ವರ್ಷದ ಹಿಂದೆ ಪಾಲಿಕೆಗೆ ಆಯ್ಕೆಯಾದ ಬಿ.ಎನ್. ನಿರ್ಮಲ, ಕೇವಲ ಒಂದೇ ವರ್ಷದಲ್ಲಿ ವಿವಾಹವಾಗಿ ಅಮೆರಿಕಾಗೆ ಗಂಡನೊಂದಿಗೆ ತೆರಳಿದವರು ಈವರೆಗೆ ಮತದಾರರಿಗೆ ದರುಶನ ಭಾಗ್ಯ ಕರುಣಿಸಿಲ್ಲ, ಇವರನ್ನು ಹುಡುಕಿಕೊಂಡು ಅಮೆರಿಕಾಗೆ ಹೋಗುವಷ್ಟು ಶಕ್ತಿ ಮತದಾರರಿಗಿಲ್ಲ, ಆಗಾಗ್ಗೆ ತವರಿಗೆ ಬಂದಾಗ ಪಾಲಿಕೆಗೆ ಹೋಗಿ ಒಂದು ಸಹಿ ಗುಜರಾಯಿಸಿ ತಮ್ಮ ಪಾಲಿಕೆ ಸದಸ್ಯತ್ವವನ್ನು ನವೀಕರಿಸಿ ಬರುವುದಷ್ಟೇ ಇವರ ಕೆಲಸ.


ಹೀಗಾಗಿ "ಫಾದರ್ ಆಫ್ ಕೌನ್ಸಿಲರ್" ಚೆಡ್ಡಿ ನರಸಿಂಹಯ್ಯ ಕ್ಷೇತ್ರದ ಸಮಸ್ತ ವ್ಯವಹಾರವನ್ನು ನಿಭಾಯಿಸುತ್ತಾರೆ. ಕುಣಿಗಲ್ ಮೂಲದವರಾದ ನರಸಿಂಹಯ್ಯನವರು ಬಹಳ ಕಷ್ಟಪಟ್ಟು ಮೇಲೆ ಬಂದವರು. ಸುಬ್ರಮಣ್ಯ ನಗರದಲ್ಲಿ ಮನೆಮನೆಗೆ ಹಾಲು ಹಾಕುತ್ತಾ, ಬಡಜನರ ಸೈಕಲ್ ರಿಪೇರಿ ಮಾಡುತ್ತಾ ಚಿರಪರಿಚಿತರಾದರು. 1989 ರಲ್ಲಿ ನಗರ ಪಾಲಿಕೆಗೆ ಭಾರತೀಯ ಜನತಾ ಪಕ್ಷಕ್ಕೆ ಈ ಕ್ಷೇತ್ರದಿಂದ ಅಭ್ಯರ್ಥಿಯೇ ದೊರಕದಿದ್ದಾಗ ಅಂದಿನ ಶಾಸಕ ಸುರೇಶ್‌ಕುಮಾರರ ಕಣ್ಣಿಗೆ ಬಿದ್ದವರು ಇದೇ ಚೆಡ್ಡಿ ನರಸಿಂಹಯ್ಯ. ಬಿಜೆಪಿಯಿಂದ ಸ್ಪರ್ಧಿಸಿದ್ದ ಚೆಡ್ಡಿಯ ವಿರುದ್ಧ ಆಗ, ಈಗಿನ ಮಾಜಿ ಮೇಯರ್ ಜೆ. ಹುಚ್ಚಪ್ಪ ಜೆಡಿಎಸ್‌ನಿಂದ ಸ್ಪರ್ಧಿಸಿದ್ದರು. ಚೆಡ್ಡಿ ನರಸಿಂಹಯ್ಯ ಹುಚ್ಚಪ್ಪನ ವಿರುದ್ಧ ಹೀನಾಯವಾಗಿ ಸೋತರು ಎಂಬುದು ಇತಿಹಾಸ ಬಿಡಿ.

ಆದರೆ ಈ ಚೆಡ್ಡಿ ನರಸಿಂಹಯ್ಯನ ಶಿಷ್ಯಗಣಗಳ ಬುದ್ಧಿವಂತಿಕೆ ನೋಡಿ. ಕೇವಲ ಬಿ.ಎಚ್. ನರಸಿಂಹಯ್ಯ ಎಂದು ಬ್ಯಾನರ್‌ಗಳಲ್ಲಿ ಬರೆದರೆ ನಮ್ಮ ಗುರುವಿನ ಹೆಸರು ಜನಸಾಮಾನ್ಯರಿಗೆ ಅರ್ಥವಾಗುತ್ತದೋ ಇಲ್ಲವೋ ಎಂದು ಭಾವಿಸಿ ಪ್ರತಿ ಬ್ಯಾನರಿಗೂ ಒಂದೊಂದು ಪಟಾಪಟಿ ಚೆಡ್ಡಿಯನ್ನು ಬಟ್ಟೆ ಪಿನ್ ಹಾಕಿ ಕಟ್ಟಿ ತಮ್ಮ ಬುದ್ಧಿವಂತಿಕೆ ಮೆರೆದಿದ್ದರು! ಜನ ಇದನ್ನು ನೋಡಿ ನಗಬಾರದ ಕಡೆಯಿಂದೆಲ್ಲಾ ನಕ್ಕರು. ಒಟ್ನಾರೆ ಈ ಪ್ರಕರಣವು ಸುಬ್ರಮಣ್ಯ ನಗರದ ಜನತೆಗೆ ಬಿಟ್ಟಿ ಮನರಂಜನೆ ನೀಡಿ ನರಸಿಂಹಯ್ಯನ ಚೆಡ್ಡಿ ಮತ್ತಷ್ಟು ಪ್ರಖ್ಯಾತಿ ಪಡೆಯಿತು.

ಕಳೆದ ಬಾರಿಯ ಮಹಾನಗರ ಪಾಲಿಕೆ ಚುನಾವಣೆಯಲ್ಲಿ ಯಾವಾಗ ವಾರ್ಡ್ ನಂಬರ್ 9 ಮಹಿಳಾ ಮೀಸಲು ಎಂದು ಘೋಷಣೆಯಾಯ್ತೊ, ಖುದ್ದು ಶಾಸಕ ಸುರೇಶ್‌ಕುಮಾರ್ ಕಾರ್ಯತಂತ್ರ ರೂಪಿಸಲು ಇಳಿದರು. ಸೀಟು ಚೆಡ್ಡಿಯ ಪುತ್ರಿ ಬಿ.ಎನ್. ನಿರ್ಮಲಾರವರಿಗೆ ಸಿಕ್ಕಿತು. ಜೆಡಿಎಸ್‌ನಿಂದ ಮಾಜಿ ಮೇಯರ್ ಹುಚ್ಚಪ್ಪನವರ ಪತ್ನಿ ಎಂ. ಅನಸೂಯ ಕಣದಲ್ಲಿದ್ದರು. ಆದರೆ ಇಲ್ಲೂ ಚೆಡ್ಡಿ ರಾಜಕೀಯ, ಜಾತಿ ರಾಜಕೀಯ ಆರಂಭವಾಯ್ತು. ಜಾತಿಯಲ್ಲಿ ಕುರುಬರಾದ ಹುಚ್ಚಪ್ಪನವರೊಂದಿಗೆ ಇದ್ದ ತ್ಯಾಗರಾಜ್ ಮತ್ತು ಲೋಕೇಶ್ ಎಂಬುವರನ್ನು ತಮ್ಮೆಡೆಗೆ ಸೆಳೆದುಕೊಂಡ ಚೆಡ್ಡಿ ಚತುರರು, ಲೋಕೇಶನ ಅಕ್ಕ ಮತ್ತು ತ್ಯಾಗರಾಜ ಪತ್ನಿಯನ್ನು ಪಕ್ಷೇತರರಾಗಿ ಕಣಕ್ಕಿಳಿಸಿ ಕುರುಬರ ಮತಗಳನ್ನು ಒಡೆದರು. ಹುಚ್ಚಪ್ಪನವರ ಪತ್ನಿ ಕೇವಲ 300 ಮತದ ಅಂತರದಲ್ಲಿ ಸೋತು ನಿರ್ಮಲ ಗೆದ್ದಿದ್ದರು.



ಅಲ್ಲಿಂದ ಆರಂಭವಾಯ್ತು "ಫಾದರ್ ಆಫ್ ಕೌನ್ಸಿಲರ್" ಕಾರುಬಾರು. ಬೆಳಗಾಗೆದ್ದರೆ ಪಾಲಿಕೆಯ ವಾರ್ಡ್ ಆಫೀಸಿಗೆ ಹೋಗಿ ಗತ್ತಿನಲ್ಲಿ ಜ್ಯೂನಿಯರ್ ಇಂಜಿನಿಯರ್ ಸೀಟಿನಲ್ಲಿ ಕೂರುವುದು ಚೆಡ್ಡಿ ನರಸಿಂಹಯ್ಯನ ಕಾಯಕ. ಅಲ್ಲಿ ಹೊಸದಾಗಿ ಮನೆ ಕಟ್ಟಲು ಪ್ಲಾನ್ ಮಂಜೂರಾತಿಗಾಗಿ ನೀಡಿರುವ ಅರ್ಜಿದಾರರ ವಿಳಾಸಗಳನ್ನು ಬರೆದುಕೊಂಡು ಅವರ ಮನೆಗಳ ಮೇಲೆ ದಾಳಿ ಮಾಡುವುದೇ ಇವರ ಕಸುಬು. ನಿರ್ಮಾಣ ಹಂತದಲ್ಲಿರುವ ಮನೆಗಳ ಮುಂದೆ ಏಕಾಏಕಿ ಪ್ರತ್ಯಕ್ಷವಾಗುವ ಚೆಡ್ಡಿಯ ಮಾತುಕತೆಯ ಒಂದು ದೃಶ್ಯವನ್ನು ನೋಡಿ.




ಇಂಥ ಮನೆಗಳ ಮಾಲೀಕರನ್ನು ಅಟಕಾಯಿಸಿಕೊಳ್ಳುವ ನರಸಿಂಹಯ್ಯ ತನ್ನನ್ನು ಪರಿಚಯಿಸಿಕೊಳ್ಳುವುದೇ ಮೊದಲು ಹೇಳಿದ ಹಾಗೆ "ಫಾದರ್ ಆಫ್ ಕೌನ್ಸಿಲರ್" ಎಂದು. ಅಪ್ಪಿತಪ್ಪಿ ಏನಾದರು ಮನೆಯ ಮಾಲೀಕ ಸಂಭಾಷಣೆಯನ್ನು ಇಂಗ್ಲಿಷ್‌ನಲ್ಲಿ ಮುಂದುವರಿಸಿಬಿಟ್ಟರೆ? ಎದೆ ಸೀಳಿದರೆ ನಾಲ್ಕು ಪದವೂ ಹೊರಡದ ಚೆಡ್ಡಿ ಅದೇ ಪದವನ್ನು ಮತ್ತಷ್ಟು ಗಟ್ಟಿಯಾಗಿ ಫಾದರ್... ಆಫ್... ಕೌನ್ಸಿಲರ್... ಎಂದು ಕಿರುಚಿ, ಗುರಾಯಿಸಿ ಬಿಡುತ್ತಾನೆ. ಅಸಲಿಗೆ ಇವರು ಬರುವುದೇ ಪುಡಿಗಾಸು ವಸೂಲಿಗಾಗಿ. ... ವಾರ್ಡ್ ನಂ. 9 ರಲ್ಲಿ ಆಗಬೇಕಾ... ಕೆಲಸಗಳೇನೂ ಅಂತಹ ಬಾಕಿ ಉ... ಎರಡು ಬಾರಿ ಪಾಲಿಕೆ ಸದಸ್ಯ... ಮೇಯರ್ ಆಗಿದ್ದ ಹುಚ್ಚಪ್ಪ ... ಕೆಲಸ ಮಾಡಿದ್ದಾರೆಂದು ಅಲ್ಲಿನ ... ಹೇಳುತ್ತಾರೆ. ಆದರೆ ಚೆಡ್ಡಿ ನರಸಿಂ... ಜೋಳಿಗೆ ತುಂಬಬೇಕಲ್ಲ, ... ಕ್ಕೊಂದಿಷ್ಟು ನಕಲಿ ಕಾಮಗಾರಿ... ನಡೆಸುತ್ತಿದ್ದಾನೆ.

ಪಾಲಿಕೆ ಭಾಷೆಯಲ್ಲಿ ... 'ಡೂಪ್ ವರ್ಕ್' ಎನ್ನುತ್ತಾರೆ ... ಯಲ್ಲಿರೊ ಚಪ್ಪಡಿಗಳನ್ನೇ ವಿನಾ... ಕೀಳುವುದು, ಮತ್ತದನ್ನೇ ಕೂರಿಸು... ಚೆನ್ನಾಗಿರುವ ಗೋಡೆಯ ಮೇಲೆ ... ಕೋಟ್ ಪೈಂಟ್ ಮಾಡಿ, ಮೂರು ಕೋಟ್ ಮಾಡಿರುವುದಾಗಿ ಹೇಳುವುದು ಇತ್ಯಾದಿ. ಇಂಥ ... ವರ್ಕ್‌ಗಳಿಗೆಂದೇ ಕಳೆದ ಐದು ವರ್ಷಗಳಿಂದ ... ಎಂಬ ಏಕೈಕ ಗುತ್ತಿಗೆದಾರನನ್ನು ಚೆಡ್ಡಿ ನರಸಿ... ಮಗ್ಗುಲಲ್ಲೇ ಇಟ್ಟುಕೊಂಡಿದ್ದಾನೆ. ಇವರ ... ಜಲಮಂಡಲಿ ಮತ್ತು ಕೆಇಬಿ... ಕೌಂಟರ್ ಹಾಗೂ ಹಾಪ್... ಗೆಂದು ಮೀಸಲಿಟ್ಟಿದ್ದ ಜಾ... ಖಾಸಗಿಯವರಿಗೆ ಮಾರಿದ ... ಚೆಡ್ಡಿ ನರಸಿಂಹಯ್ಯನಿಗೆ ದಕ್ಕ...

ಇಷ್ಟೆಲ್ಲಾ "ಸಾರ್ವಜನಿಕ ... ಮಾಡಿರುವ ಚೆಡ್ಡಿ ನರಸಿ... ನವರು, "ಮೇಯರ್ ಮುಂ... ಮಗಳು ಗೆಲ್ಲದೂ ಅಂದ್ರೆ ಸು... 35 ಲಕ್ಷ ರೂಪಾಯಿ ... ಮಾಡಿದೀನಿ ತತ್ತಾರ್ಲ" ಅಂತ... ಮತ್ತು ಎ.ಇ.ಗಳ ಹತ್ತಿರ, ... ಜನಿಕರ ಹತ್ತಿರ ಕಿತ್ತ ಹ... ಬಸವೇಶ್ವರ ನಗರದ ಸ... 'ಸತ್ಯನಾರಾಯಣ ಲೇಔಟ್' ನಿರ್ಮಿಸಿ, ಶ್ರೀಸ... ಯಣನ ಪಾರಾಯಣದಲ್ಲಿ ಮಗ್ನರಾಗಿದ್ದಾರೆ.

–ಎಂ.ಎಸ್. ಸ...



KAS ರಾಂಗ್ ರಿಸಲ್ಟ್

ಕರ್ನಾಟಕ ಲೋಕಸೇವಾ ಆಯೋಗದ ಅವಿವೇಕ ಹಾಗೂ ಅಸಂಬದ್ಧ ನಡವಳಿಕೆಗಳು ಮತ್ತೆ ಮುಂದುವರೆದಿವೆ.

ಈ ಬಾರಿಯ ಕೆಎಎಸ್ ಪರೀಕ್ಷಾ ಫಲಿತಾಂಶದ ಕೀ ಅನ್ಸರ್‌ಗಳೇ ಇದಕ್ಕೆ ತಾಜಾ ಉದಾಹರಣೆಯಾಗಿದೆ.

ಕಳೆದ ಸೆಪ್ಟೆಂಬರ್ 10 ನೇ ತಾರೀಖು ನಡೆದ 101 ಗೆಜೆಟೆಡ್ ಪ್ರೊಬೆಷನರಿ ಆಫೀಸರ್‌ಗಳ ಪ್ರಿಲಿಮಿನರಿ ಪರೀಕ್ಷೆಯ ರಿಜಲ್ಟ್ ಅದೇ ಸೆಪ್ಟೆಂಬರ್ ಕೊನೆಯ ವಾರದಲ್ಲಿ ಸರಿ ಉತ್ತರ ಸಹಿತ ಪ್ರಕಟವಾಗಿತ್ತು, ಪರೀಕ್ಷೆ ಬರೆದಿದ್ದ ಎಂಭತ್ತು ಸಾವಿರ ಜನರಲ್ಲಿ ಕೇವಲ ಎರಡು ಸಾವಿರ ಜನ ಈಗ ಮುಖ್ಯ ಪರೀಕ್ಷೆಗೆ ಅರ್ಹತೆ ಗಳಿಸಿದ್ದಾರೆ. ಆದರೆ ಜನರಲ್ ಸ್ಟಡೀಸ್, ಇತಿಹಾಸ, ಗ್ರಾಮೀಣಾಭಿವೃದ್ಧಿ, ಸಾರ್ವಜನಿಕ ಆಡಳಿತ ಮುಂತಾದ ವಿಷಯಗಳ ಪ್ರಶ್ನೆಗಳಿಗೆ ಕೆಪಿಎಸ್‌ಸಿ ಪ್ರಕಟಿಸಿರುವ ಸರಿ ಉತ್ತರ (Key answers)ಗಳಲ್ಲೇ ಡಜನ್‌ಗಟ್ಟಲೆ ತಪ್ಪುಗಳಾಗಿ ಹೋಗಿವೆ. ಕೆಲವು ಪ್ರಶ್ನೆ ಪತ್ರಿಕೆಗಳಲ್ಲಂತೂ ಕೊಟ್ಟಿದ್ದ ಸಿಲಬಸ್ ಬಿಟ್ಟು ಬೇರೆ ಯಾವುದೋ ಸಂಬಂಧವಿರದ ಪ್ರಶ್ನೆಗಳನ್ನೆಲ್ಲಾ ಕೇಳಲಾಗಿತ್ತು, ಅವನ್ನೆಲ್ಲಾ ಹೇಗೊ ಸಹಿಸಿಕೊಂಡಿದ್ದ ಅಭ್ಯರ್ಥಿಗಳು ಈಗ ತಪ್ಪು ಉತ್ತರಗಳನ್ನೇ ಸರಿ ಉತ್ತರ ಎಂದು ಮೂರ್ಖವಾದ ಮಾಡುತ್ತಿರುವ ಕೆಪಿಎಸ್‌ಸಿ ವಿರುದ್ಧ ತಿರುಗಿ ಬಿದ್ದಿದ್ದಾರೆ.

ಪ್ರಶ್ನೆಗೂ ಸಿಲಬಸ್‌ಗೂ ಸಂಬಂಧವಿಲ್ಲ

ಈ ಬಾರಿ ಇತಿಹಾಸ ಪರೀಕ್ಷೆ ಬರೆಯಲು ಕುಳಿತವರೆಲ್ಲಾ ಕಕ್ಕಾಬಿಕ್ಕಿಯಾಗುವಂತಾ ಪ್ರಶ್ನೆಗಳನ್ನು ಚೇರ್ಮನ್ ಡಾ. ಕೃಷ್ಣಾ ರೆಡ್ಡಿ ಮಾಡಿಸಿದ್ದರು.

ಕನ್ನಡಿಗ ಹಾಸನ ರಾಜಾರಾಯರು ಬರೆದಿರುವ 'ಕಾಂತಾಪುರ' ಇಂಗ್ಲಿಷ್ ಕಾದಂಬರಿಯ ಬಗ್ಗೆ ಅಂತಾದ್ದೊಂದು ಪ್ರಶ್ನೆ ಇತಿಹಾಸ ಪ್ರಶ್ನೆ ಪತ್ರಿಕೆಯಲ್ಲಿತ್ತು,

ಕಾಂತಾಪುರ ಐತಿಹಾಸಿಕ ಕಾದಂಬರಿಯಲ್ಲ, ಅದೇ ರೀತಿ ವಿವಾದಿತ ಇಂಗ್ಲಿಷ್ ಬರಹಗಾರ ಸಲ್ಮಾನ್ ರಷ್ದಿಯ ಕಾದಂಬರಿ ಬಗ್ಗೆಯೂ ಇನ್ನೊಂದು ಪ್ರಶ್ನೆ ಹಾಕಲಾಗಿತ್ತು,

ಕೆಪಿಎಸ್‌ಸಿಯೇ ಇಂತಾ ತಲಹರಟೆ ಮಾಡಿಬಿಟ್ಟರೆ ಪ್ರಾಚೀನ ಇತಿಹಾಸ, ಮಧ್ಯಕಾಲೀನ ಇತಿಹಾಸಗಳನ್ನಷ್ಟೇ ಓದಿದ ಹುಡುಗರ ಗತಿ ಏನಾಗಬೇಡ?

ಕೆಎಎಸ್‌ನಲ್ಲಿ ಒಂದೊಂದು ಪ್ರಶ್ನೆ-ಉತ್ತರಗಳು, ಅದರಿಂದ ಸಿಗುವ ಅಥವಾ ಕಳೆದುಕೊಳ್ಳುವ ಒಂದೊಂದು ಮಾರ್ಕ್ಸ್ ಬಹಳ ಮುಖ್ಯ. ಪರೀಕ್ಷೆ ಬರೆದವರ ಹಣೆಬರಹ ತೀರ್ಮಾನ ಆಗುವುದು ಇಂತಾ ಅತ್ಯಮೂಲ್ಯ ಒಂದು ಮಾರ್ಕುಗಳಿಂದಲೇ!

ಆದರೆ ಸಾವಿರಾರು ಜನರ ಭವಿಷ್ಯದ ಜೊತೆ ಚೆಲ್ಲಾಟ ಆಡುವುದನ್ನೇ ಚಾಳಿ ಮಾಡಿಕೊಂಡಿರುವ ಕೆಪಿಎಸ್‌ಸಿ ಇದನ್ನೆಲ್ಲಾ ಲೆಕ್ಕಿಸುತ್ತಿಲ್ಲ.

ಉತ್ತರಭೂಪರ ತಪ್ಪು ಉತ್ತರ

ಪರೀಕ್ಷೆಯಲ್ಲಿ ಇಷ್ಟೆಲ್ಲಾ ಯಡವಟ್ಟು ಮಾಡಿದ ಆಯೋಗ ಈಗ ಉತ್ತರಗಳನ್ನು ಪ್ರಕಟಿಸುವಾಗ ಇನ್ನಷ್ಟು ಹೊಸ ಯಡವಟ್ಟುಗಳನ್ನು ಮಾಡಿಬಿಟ್ಟಿದೆ.

ಗ್ರಾಮೀಣ ಅಭಿವೃದ್ಧಿ ವಿಷಯದಲ್ಲಿ ಕ್ರಾಫಿ... (craficard) ಕಮಿಟಿ ಶಿಫಾರಸ್ಸಿನಂತೆ ಸ್ಥಾ... ಹಣಕಾಸು ಸಂಸ್ಥೆ ಯಾವುದೆಂಬ ಪ್ರಶ್ನೆಗೆ ಕೆ... ವಿದ್ವಾಂಸರು 'ಸೆಬಿ' (SEBI) ಎಂದಿದ್ದಾರೆ. ಅದು ನಬಾರ್ಡ್ ಎಂದಾಗಬೇಕಿತ್ತು.

ಅದೇ ರೀತಿ ಇಂದಿರಾ ಆವಾಸ್ ವಸತಿ ಯೋ... ಕೇಂದ್ರ-ರಾಜ್ಯ ಸರ್ಕಾರಗಳ ನೆರವಿನ ಪಾಲೆಷ್ಟು ... ಪ್ರಶ್ನೆಗೆ 50:50 ಎನ್ನಲಾಗಿದೆ. ಆದರೆ ವಾಸ್... ಅದು 75:25 ಆಗಿದೆ.

ಸಾಮಾನ್ಯ ಜ್ಞಾನ ಪರೀಕ್ಷೆಯಲ್ಲಿ ಭಾರತ... ದ್ವಿಪಕ್ಷೀಯ ವಿನಿಮಯ ಒಪ್ಪಂದದಲ್ಲಿ ಸೇರ... ವಸ್ತು ಯಾವುದು ಎಂದು ಕೇಳಿ 'ಕಚ್ಚಾವ... ಎಂದು ಡಾ. ಕೃಷ್ಣಾ ಕಂಡು ಹಿಡಿದಿದ್ದಾರೆ. ಸೀಮೆಎಣ್ಣೆ ಎಂಬ ಆಯ್ಕೆ ಉತ್ತರ ಆಗಬೇಕಿತ್ತು, ಗಣಿಕಪ್ಪದ ಜನಾರ್ಧನ ರೆಡ್ಡಿ ಸಿಡಿ ಹಗರಣ ಕ... ಕಬ್ಬಿಣದ ಅದಿರು ಚೀನಾಗೆ ಹೋಗ... ವ್ಯವಹಾರವೇ ತಾನೇ.


ಕೆಪಿಎಸ್‌ಸಿ ಏನು ಎಚ್ಚರ ತಪ್ಪಿದೆ...

ಈ ಪಟ್ಟಿಯನ್ನು ಹೀಗೆ ಬೆಳೆಸುತ್ತಾ ಹ... ಸೋಷಿಯಾಲಜಿಯಲ್ಲಿ 14, ಸಾರ್ವಜನಿಕ ಆಡ... 8, ಗ್ರಾಮೀಣಾಭಿವೃದ್ಧಿಯೊಳಗೆ ಕನಿಷ್ಠ ಹತ್ತು ... ಉತ್ತರಗಳನ್ನು ಕೆಪಿಎಸ್‌ಸಿಯೇ ಸರಿ ಉತ್ತರ ... ನೀಡಿದೆ. ಇದರಿಂದಾಗಿ ಸರಿ ಉತ್ತರ ಬರೆದವರೇ ಕಳೆದುಕೊಂಡು ಫೇಲ್ ಆಗಿದ್ದಾರೆ.

ಇದರಿಂದ ರೊಚ್ಚಿಗೆದ್ದಿರುವ ಅಭ್ಯರ್ಥಿಗಳ... ಭಟನೆ, ಕೋರ್ಟು, ಕಚೇರಿ ಎಂದು ಹ... ಮೊದಲೇ ಚೇರ್ಮನ್ ಕೃಷ್ಣಾ ತಮ್ಮ ... ಒಪ್ಪಿಕೊಂಡು ರಿಸಲ್ಟ್ ಸರಿಪಡಿಸಬೇಕಿದೆ.

ಹೀಗೆ ಮಾಡುವುದು ಬಿಟ್ಟು ದೂರು ತಂ... ಧಮಕಿ ಹಾಕುವುದು, 'ಸಾ.ಶಿ. ಮರುಳಯ್ಯ...


ಆಗಿರೊ ಕೆಲ್ಸಕ್ಕೂ ಕಲ್ಲು



ಈ ಚಿಡ್ಡಿ ನರಸಿಂಹಯ್ಯ ಯಾವುದೇ ಅಭಿವೃದ್ಧಿ ಕೆಲಸ ಮಾಡ್ದೆ ಇದ್ರೂ ಪರ್ವಾಗಿಲ್ಲ, ಆಗಿರೋ ಕೆಲ್ಸಕ್ಕೂ ಕಲ್ಲು ಹಾಕ್ತಾನಲ್ಲಾ ಅನ್ನೋದೇ ದುರಂತ. ವಾರ್ಡ್ ನಂ. 9 ರ ವ್ಯಾಪ್ತಿಗೆ ಬರುವ ಮಿಲ್ಕ್ ಕಾಲೋನಿ ಸೇತುವೆಯ ಎಡ ಮತ್ತು ಬಲ ಭಾಗದ ಎಂಟು ಎಕರೆ ಪ್ರದೇಶವನ್ನು ಈ ಹಿಂದೆ ತುರು-ಕರುಪಾಳ್ಯ ಎಂದು ಕರೆಯುತ್ತಿದ್ದರು. ಜಮೀನು ನಮ್ಮದು ಎಂದು ಜೋಡಿದಾರ್ ಸೂರಿ ಮತ್ತು ಶ್ರೀನಿವಾಸ ರೆಡ್ಡಿ ಎಂಬುವರು ಪಾಲಿಕೆ ವಿರುದ್ಧ ನ್ಯಾಯಾಲಯದಲ್ಲಿ ದಾವೆ ಹೂಡಿದ್ದರು. ಅಂದಿನ ಮೇಯರ್ ಪ್ರೇಮ ಕಾರ್ಯಪ್ಪ, ಕೌನ್ಸಿಲರ್ ಜೆ. ಹುಚ್ಚಪ್ಪ ಮತ್ತು ಶಾಸಕ ಸುರೇಶ್‌ಕುಮಾರ್ ಸಿವಿಲ್ ಕೋರ್ಟ್ ಮತ್ತು ಹೈಕೋರ್ಟ್‌ನಲ್ಲಿ ಹೊಡೆದಾಡಿ ಆಸ್ತಿಯನ್ನು ಪಾಲಿಕೆಗೆ ಉಳಿಸಿದರು. ಇದೇ ಜಮೀನನ್ನು ಚಿಡ್ಡಿ ನರಸಿಂಹಯ್ಯ ಆಗ ಶ್ರೀನಿವಾಸ ರೆಡ್ಡಿ ಜೊತೆ ಸೇರಿ ಮಾರಲು ಹೊರಟಿದ್ದ.

ಜಮೀನು ಪಾಲಿಕೆಗೆ ಸೇರಿದ ನಂತರ ಅದಕ್ಕೆ ಸಂಗೊಳ್ಳಿ ರಾಯಣ್ಣ ಉದ್ಯಾನವೆಂದು ನಾಮಕರಣ ಮಾಡಿ, ವಾಕಿಂಗ್ ಟ್ರ್ಯಾಕ್ ನಿರ್ಮಿಸಿ, ಸ್ಟೇಡಿಯಂ ಮಾದರಿಯಲ್ಲಿ ಮೆಟ್ಟಿಲುಗಳನ್ನು ಕಟ್ಟಿದ ಕ್ರೆಡಿಟ್ಟು ಜೆ. ಹುಚ್ಚಪ್ಪನವರಿಗೆ ಸೇರಬೇಕು. ಇದರ ಶಂಕುಸ್ಥಾಪನೆ ಸಮಾರಂಭಕ್ಕೆ ಅಂದಿನ ಉಪಮುಖ್ಯಮಂತ್ರಿ ಸಿದ್ಧರಾಮಯ್ಯ, ಮೇಯರ್ ಪ್ರೇಮ ಕಾರ್ಯಪ್ಪ, ಬಿಜೆಪಿಯವರೇ ಆದ ಶಾಸಕ ಸುರೇಶ್ ಕುಮಾರ್, ವಿಧಾನ ಪರಿಷತ್ ಸದಸ್ಯ ರಾಮಚಂದ್ರಗೌಡ ಆಗಮಿಸಿದ್ದರು. ಆದರೆ ಯಾವಾಗ ಚಿಡ್ಡಿ ನರಸಿಂಹಯ್ಯನ ಪುತ್ರಿ ನಿರ್ಮಲ ಪಾಲಿಕೆಗೆ ಆಯ್ಕೆಯಾದರೊ, ಶಂಕುಸ್ಥಾಪನೆಯ ಕಲ್ಲೇ ಮಾಯವಾಗಿದೆ, ವಾಕಿಂಗ್ ಟ್ರ್ಯಾಕೇ ಮುಚ್ಚಿ ಹೋಗುತ್ತಿದೆ. ಮೆಟ್ಟಿಲುಗಳೇ ಮುರಿದು ಬೀಳುತ್ತಿವೆ.

ಇದೆಲ್ಲ ಹೋಗಲಿ ಎಂದರೆ, ಜೊಡಿದಾರ್ ರೆಡ್ಡಿಗಳು ಹೈಕೋರ್ಟ್ ಆದೇಶವನ್ನು ಪ್ರಶ್ನಿಸಿ ಸುಪ್ರೀಂ ಕೋರ್ಟಿಗೆ ಮೇಲ್ಮನವಿ ಸಲ್ಲಿಸಿದ್ದಾರೆ. "ಹೈಕೋರ್ಟಿನ ಆದೇಶದ ಪ್ರತಿ ನೀಡಿ" ಎಂದು ಮೇಲಿಂದ ಸೂಚನೆ ಬಂದಿದ್ದರೂ ಅದನ್ನು ಈವರೆಗೆ ಸಲ್ಲಿಸಿಲ್ಲ. ಏಕೆಂದರೆ ಪಾಲಿಕೆ ಸದಸ್ಯೆ ಅಮೆರಿಕದಲ್ಲಿದ್ದಾರೆ, ಮತ್ತವರ ಫಾದರ್‌ಗೆ ಇದ್ಯಾವುದೂ ಬೇಕಿಲ್ಲ.



ಗೊತ್ತು', ಚಿತಾವಣೆ ಮಾಡೋರನ್ನು ಸುಮ್ನೆ ಬಿಡಲ್ಲ...", ಮುಂತಾಗಿ ಅಸಂಬದ್ಧವಾಗಿ ಚೀರಿಕೊಂಡರೆ ಏನು ಪ್ರಯೋಜನ?

ಡಾ. ಕೃಷ್ಣ ಕೆಪಿಎಸ್‌ಸಿ ಚೇರ್ಮನ್ ಆದ ಮೇಲಂತೂ ಆಯೋಗ ನಡೆಸಿರುವ ಒಂದು ಪರೀಕ್ಷೆಯೂ ನೆಟ್ಟಗೆ ನಡೆದಿಲ್ಲ. ಜೂನ್‌ನಲ್ಲಿ ಆದ ಎಸ್‌ಡಿಎ ಪ್ರಶ್ನಪತ್ರಿಕೆಯ ಮುಖಪುಟದಲ್ಲೇ ಎಎಫ್‌ಡಿಎ ಎಂದು ಮುದ್ರಿಸಿ ಗೊಂದಲ ಮಾಡಿದ್ದರು. ಆಮೇಲೆ ಪ್ರಥಮ ದರ್ಜೆ ಸಹಾಯಕರ ನೇಮಕಾತಿ ಮಾಡುವಾಗ ಮೀಸಲು ನೀತಿ ಉಲ್ಲಂಘನೆ, ಕೌನ್ಸಿಲಿಂಗ್ ನಿರಾಕರಣೆ ಎಲ್ಲಾ ನಡೆದಿತ್ತು. ಈಗ ನಾನ್ನೂರು ಚಿಲ್ಲರೆ ಜೂನಿಯರ್ ಕಾಲೇಜ್ ಲೆಕ್ಚರರ್‌ಗಳ ನೇಮಕಾತಿ ಪ್ರಕ್ರಿಯೆ ಚಾಲೂ ಆಗಿದೆ. ಆದರೆ ಇದಕ್ಕೆ ಯಾವುದೇ ಸ್ಪರ್ಧಾತ್ಮಕ ಪರೀಕ್ಷೆ ನಡೆಸದೆ ನೇರ ಸಂದರ್ಶನ ಮಾಡಿ ಆಯ್ಕೆ ಮಾಡಲು ಹೊರಟಿದ್ದಾರೆ. ಇದೆಲ್ಲಾ ಲಂಚದ ವ್ಯಾಪಾರ ಕುದುರಿಸುವ ಹುನ್ನಾರ ಮಾತ್ರ.

2005ರ ಕೆಎಎಸ್ ಇಂಟರ್‌ವ್ಯೂ ಅಂತೂ ಈಗಾಗಲೇ 'ತಾಳಿಭಾಗ್ಯ ಯೋಜನೆ' ಎಂದು ಹೆಸರಾಗಿ ಡಾ. ಕೃಷ್ಣ ನಗೆಪಾಟಲಾಗಿದ್ದಾರೆ.

ಇಂಟರ್‌ವ್ಯೂಗೆ ಬಂದ ಹುಡುಗರನ್ನು 'ನೀನು ಇಂತಾ ಮಿನಿಸ್ಟರ್, ಇಂತಾ ಎಂಎಲ್‌ಎ ಮಗಳು, ನಾದಿನಿ, ತಂಗಿ... ಹೀಗೆ ಯಾರನ್ನಾದರೂ ಮದುವೆ ಆಗ್ತೀಯಾ' ಎಂದು ಮ್ಯಾರೇಜ್ ಬ್ರೋಕರ್‌ಗಳಂತೆ ಡೀಲು ಕುದುರಿಸಿ ಆಯ್ಕೆ ಮಾಡಲಾಗಿತ್ತು.

ಈಗ ಅರ್ಜೆಂಟಾಗಿ ಕೆಎಎಸ್ ಪರೀಕ್ಷೆ ನಡೆಸಿ ಅಷ್ಟೇ ಅರ್ಜೆಂಟಾಗಿ ರಿಸಲ್ಟ್ ಹಾಕಿದ್ದಾರೆ. ಅದರಲ್ಲೂ ಇಂತಾ ತಪ್ಪುಗಳು...!

ಕೆಪಿಎಸ್‌ಸಿ ಕಪಿಚೇಷ್ಟೆಗಳಿಗೆ ಶಿಕ್ಷೆ ಕೊಡುವವರ್ಯಾರು?

-ಬಿಳಿದಾಳೆ ಈಶ


ದತ್ತಯಾತ್ರೆ ಇಲ್ಲ ಅಂತ ಸೀಮೆಯೆಣ್ಣೆ ಸವಾಸಕ್ಕೋದಿರ!

"ನಿಜಕ್ಕೂ ಶರಣರೆಂದರೆ ನಿಜಲಿಂಗಪ್ಪನವರು ಮತ್ತು ಜೆ.ಎಚ್. ಪಟೇಲರು. ನಾನು ಅಂತಹ ಶರಣನಾಗಲಿಕ್ಕೆ ಸಾಧ್ಯವೇಯಿಲ್ಲ" ಎಂದು ನಮ್ಮ ಕನ್ನಡನಾಡಿನ ದಕ್ಷ ಗೃಹ ಮಂತ್ರಿ ಎಂ.ಪಿ. ಪ್ರಕಾಶ್ ಕಣ್ಣೀರು ಹಾಕಿದರಂತಲ್ಲಾ. ಇದರಿಂದ ಗಲಿಬಿಲಿಯಾದ ಅರೆಬರೆ ಶರಣರು "ನಾವು ಬಸವಣ್ಣ ಹೇಳಿದ್ದಕ್ಕೆಲ್ಲಾ ತಿಲಾಂಜಲಿ ಇಟ್ಟಿದ್ದರೂ ಶರಣರಾಗಿಯೇ ಉಳಿದಿದ್ದೇವೆ. ಆದರೆ ಈ ಪ್ರಕಾಶ್ ನಾನು ಶರಣನಲ್ಲ ಎನ್ನಲು ಕಾರಣವೇನು?" ಎಂದು ಗಾಢವಾಗಿ ಯೋಚಿಸುತ್ತಿರಬೇಕಾದರೆ, ಮುಂದುವರಿದ ಪ್ರಕಾಶ್, "ನಾನು ಅನ್ನಿಸಿದ್ದನ್ನು ಹೇಳುವುದಿಲ್ಲ, ತಪ್ಪು ಕಂಡಾಗ ಸರಿ ಎನ್ನುತ್ತೇನೆ. ಭ್ರಷ್ಟರನ್ನು ಪ್ರಾಮಾಣಿಕರು ಎನ್ನುತ್ತೇನೆ. ಸುಳ್ಳುಬುರುಕರನ್ನು ಸತ್ಯವಂತರು ಎನ್ನುತ್ತೇನೆ. ಒಟ್ಟಿನಲ್ಲಿ ನನ್ನ ಮನಸ್ಸಿನಾಳದ ವಿರುದ್ಧವೇ ನಾನು ಹೋರಾಡುತ್ತಿರುವುದರಿಂದ, ಸ್ಫಟಿಕದ ಸಲಾಕೆಯಂತೆ ನುಡಿಯಲಾಗುತ್ತಿಲ್ಲ. ನನ್ನ ಮಾತು ಮುತ್ತಿನ ಹಾರದಂತಿರುವುದಿಲ್ಲ. ನಾನು ಬಾಯಿಬಿಟ್ಟರೆ ಲಿಂಗ ಅಹುದೆನ್ನುವ ಬದಲು ಅಲ್ಲ ಅಲ್ಲ ಎನ್ನುತ್ತಿರುವುದರಿಂದ ನಾನು ಶರಣನಾಗಲಿಲ್ಲ" ಎಂದು ಹೇಳದೆ ಸುಮ್ಮನಾದರಂತಲ್ಲಾ, ಥೂತ್ತೇರಿ!



* * * * * * *

"ಚಿಕ್ಕಮಗಳೂರಿನ ದತ್ತಮಾಲೆ ಯಾತ್ರೆಯು ಬಹಳ ಹಿಂದಿನಿಂದಲೇ ಸರಾಗವಾಗಿ ನಡೆದುಕೊಂಡು ಬರುತ್ತಿದೆ. ಅದರ ಉದ್ಘಾಟಕರೇ ಶ್ರೀಮಾನ್ ಡಿ.ಬಿ. ಚಂದ್ರೇಗೌಡ" ಎಂದು ಸೀಮೆಎಣ್ಣೆ ಸೀಟಿ ರವಿ ಆಪಾದಿಸಿದ್ದಾರಂತಲ್ಲಾ. ಈ ಬಗ್ಗೆ ನಾವು ಚಂದ್ರೇಗೌಡರೇನು ಮಾಡಿದ್ದರು ಎಂದು ನಮ್ಮ ಹಳೆ ಪತ್ರಿಕೆಯನ್ನು ತಿರುವಿ ಹಾಕಿದಾಗ ಸಿಕ್ಕ ಮಾಹಿತಿಯಂತೆ, ಬಾಬಾಬುಡನ್ ಗಿರಿಯಲ್ಲೇನು ನಡೆದಿದೆ ಎಂದು ನೋಡಲೋಸ್ಕರ ಚಂದ್ರೇಗೌಡರು ಹೋಗಿದ್ದಾಗ, ಕಾಯಿಲೆಗಳ ಆಗರದಂತಿದ್ದ ಚಿಡ್ಡಿ ಪತ್ರಕರ್ತನೊಬ್ಬ "ಸಾರ್, ಒಂದು ನಿಮಿಷ" ಎಂದು ಚಂದ್ರೇಗೌಡರನ್ನು ಕರಿಸಿ ಒಂದು ಫೋಟೋ ಹೊಡೆದುಕೊಂಡು "ಜೈ ಭಜರಂಗದಳ" ಎಂದು ಕೂಗಿದ್ದನಂತಲ್ಲಾ. ಮರುದಿನ ಪತ್ರಿಕೆ ನೋಡಲಾಗಿ 'ದತ್ತ ಯಜ್ಞ ಕುಂಡದೆದುರು ಮಂತ್ರಿ ಡಿ.ಬಿ. ಚಂದ್ರೇಗೌಡ' ಎಂಬ ಲೇಖನ ಪ್ರಕಟವಾಗಿ, ಅಂದಿನಿಂದ ಚಂದ್ರೇಗೌಡರು ಎಲ್ಲೇ ಹೋದರು ಜನಿವಾರದ ಪತ್ರಕರ್ತರೆಂದರೆ ಜಾಪಾಳ ಮಾತ್ರೆ ತಿಂದವರಂತೆ ದೌಡಾಯಿಸುತ್ತಾರಂತಲ್ಲಾ, ಥೂತ್ತೇರಿ!!



* * * * * * *

ಈ ಚಂದ್ರೇಗೌಡರನ್ನು ಆದರ್ಶವಾಗಿರಿಸಿಕೊಂಡಿರುವ ಸೀಟಿ ರವಿ ಎಂಬ ಸೀಮೆಎಣ್ಣೆ ಗಿರಾಕಿಯನ್ನು ಈ ಸಮಯದಲ್ಲಿ ಮಾತನಾಡಿಸಿಬೇಕನಿಸತಲ್ಲಾ. ಆ ಕೂಡಲೇ ಫೋನ್ ಮಾಡಲಾಗಿ, ರವಿ ಸಿಕ್ಕೇಬಿಟ್ಟರು.

"ಹಲೋ ರವಿ, ನಾನು ಯಾಹೂ' ಒಂದಿಷ್ಟು ಮಾತಾಡಬೇಕು."

"ಏನ್ಹೇಳಿ ಯಾಹೂ? ಒಂಚೂರೂ ಬಿಡುವಿಲ್ಲ ಈಗ ಮಾತನಾಡಕ್ಕೆ."

"ದತ್ತಮಾಲೆ ಅಭಿಯಾನ ಹ್ಯಂಗೆ ನಡೆದಿದೆ?"

"ಅಲ್ರೀ ನಾವು ಈ ಸರ್ಕಾರದೊಳಗಿದ್ದೂ ದತ್ತ ಮಾಲೆ ಅಭಿಯಾನ ನಡೆಯೊಲ್ಲ ಅಂದ್ರೆ, ನಾವು ಶಾಸಕರಾಗಿ ಯಾಕಿರಬೇಕು?"

"ನಿಮ್ಮ ಪ್ರಶ್ನೆ ನಿಜ ಸಾರ್. ನಿಮ್ಮಂತವರು ಮತದಾರರತ್ರ ಮಾತನಾಡೊ ಅಂತ ವಿಷಯಗಳಿರಲಿಲ್ಲ. ಜನರ ವಿಶ್ವಾಸ ಗಳಸೋ ಅಂತ ಗುಣಗಳಿರಲಿಲ್ಲ. ದುಡ್ಡು ಕಾಸಿಗೂ ತುಂಬ ಪರದಾಡತಿದ್ರಿ. ಅಂತ ಸಮಯದಲ್ಲಿ ನಿಮಗೆ ಬಾಬಾ ಬುಡನ್‌ಗಿರಿ ಕಾಣುಸ್ತು. ಆ ಗಿರಿಗೆ ಜನಿವಾರ ತೊಡಿಸಿ ಯಾರಾದ್ರು ಪುರೋಹಿತನ್ನ ಪೂಜೆ ಮಾಡೋದಿಕ್ಕೆ ನೇಮಕ ಮಾಡೊ ಚಳುವಳಿಗೆ ನಿಮ್ಮನ್ನು ಶಾಸಕನನ್ನಾಗಿ ಮಾಡಿದೆವು. ಅಂತದ್ರಲ್ಲಿ ನೀವು ದತ್ತ ಮಾಲೆ ನಿಷೇದಕ್ಕೆ ಒಳಗಾದದು ಅಂದ್ರೆ ಚುನಾವಣೆಯಲ್ಲಿ ಸೋತಂಗೆ, ಅಲ್ವಾ?"

"ಅಂಗಲ್ಲ ಕಂಡ್ರಿ. ನಮ್ಮದೇ ಸರ್ಕಾರ ಇದ್ರು ನಾವು ದತ್ತಮಾಲೆ ಮಾಡಲಿಲ್ಲ ಅಂದ್ರೆ, ಸಾಮಾನ್ಯ ಮತದಾರ ನಮ್ಮ ಕೈಲಿ ಏನೂ ಆಗಲ್ಲ ಅನ್ಕೊಳಲ್ಲವೆ?"

"ಖಂಡಿತ ಸಾರ್. ನೋಡಿ, ಅದ್ವಾನಿ ಟೀಮು ರಾಮಮಂದಿರ ಕಟ್ತುತಿವಿ ಅಂತ ಕಾಸು ಮಾಡಿಕಂಡು ಚುನಾವಣೆ ಮುಗಿಸಿ ಡೆಲ್ಲಿ ಗದ್ದಿಗೆ ಮೇಲೆ ಐದೊರ್ಸ ಇದ್ರು. ಆದ್ರೂ ಅವರ ಕೈಲಿ ಮಂದಿರ ಕಟ್ಟಕ್ಕಾಗಲಿಲ್ಲ. ಈಗ ಕಟ್ಟತಿವಿ ಅಂತರೆ, ಜನ ನಗತಾಯಿದಾರೆ! ನಿಮ್ಮ ಕತೆನೂ ಅಂಗೆ ಆಗುತ್ತಲ್ಲವೆ?"

"ಅದಕ್ಕೆ ಕಂಡ್ರಿ ನಾವು ಹೋರಾಡ್ತಯಿರದು!"

"ನಿಮ್ಮ ಹೋರಾಟಕ್ಕೆ ನಿಮ್ಮ ಪಾರ್ಟಿ ಲೀಡರ್ ಬೆಂಬಲ ಹೇಗಿದೆ?"

"ಏನೇನು ಇಲ್ಲ ಕಂಡ್ರಿ. ಇಲ್ಲೆ ಡಿ.ಸಿ. ಶ್ರೀಕಂಠಪ್ಪ ಅಂತ ಎಂ.ಪಿ. ಇದಾರೆ, ಅವುರು ಇದುವರಿಗೂ ಬಾಯಿ ಬಿಟ್ಟಿಲ್ಲ. ಇನ್ನು ಎಡೂರಪ್ಪನ್ನ ನಾವು ಮೊದಲಿಂದ ನಂಬಿಲ್ಲ. ಸದಾನಂದಗೌಡ ಯಾವಾಗ ಏನು ಮಾತಾಡ್ತನೆ ಅನ್ನದೇ ನಮಗೆ ಸಮಸ್ಯೆ. ನಮಗೀಗ ಬೆಂಬಲ ಕೊಡ್ತಿರೋರು ಅಂದ್ರೆ ಭಜರಂಗದವರು, ಆರೆಸೆಸ್ಸಿನವರು."

"ದೇವೇಗೌಡರೇನಂತರೆ?"

"ದತ್ತಮಾಲೆ ಸಮಸ್ಯೆ ಹಿಂಗಾಗೋದಕ್ಕೆ ಅವರೇ ಕಾರಣ ಕಂಡ್ರಿ. ನಮ್ಮ ಸಮ್ಮಿಶ್ರ ಸರ್ಕಾರಕ್ಕೂ ಆ ಗೌಡರಿಗೂ ಯಾವ ಸಂಬಂಧನೂ ಇಲ್ಲ ಅಂತ ನಮ್ಮ ಪಾರ್ಟಿ ಅಧ್ಯಕ್ಷರೇ ಹೇಳಿ ಬಹಳ ದಿನ ಆಯ್ತು. ಆದ್ರು ದೇವೇಗೌಡರು ಈ ಸರ್ಕಾರದೊಳಕ್ಕೆ ಮೂಗು ತೂರಸೋದನ್ನ ಬಿಟ್ಟಿಲ್ಲ. ದತ್ತಮಾಲೆಗೂ, ಅವರಿಗೂ ಯಾವ ಸಂಬಂಧವೂ ಇಲ್ಲ!"

"ಹಾಗಂತಿರಾ?"

"ಹೌದು ಮತ್ತೆ? ಈ ಸಮ್ಮಿಶ್ರ ಸರ್ಕಾರನ ಅವುರನ್ನ ಕೇಳಿ ರಚನೆ ಮಾಡಲಿಲ್ಲ. ನಾವು ಈಗಲೂ ಯಾವುದಕ್ಕೂ ಅವರನ್ನ ಕೇಳಲ್ಲ. ಆದ್ರು ಬರೀ ಕಿಡಿಗೇಡಿ ಹೇಳಿಕೆ ಕೊಟ್ಟು ನಮಗೆ ತೊಂದ್ರೆ ಕೊಟ್ರೆ ನಾವು ಸುಮ್ಮನಿರಲ್ಲ."

"ಮತ್ತೆ ಸೀಮೆಎಣ್ಣೆ ಡಬ್ಬ ಹುಡುಕ್ತಿರಾ?"

"ಒಂದು ಸಾರಿ ಪ್ರಯೋಗನ ಮತ್ತೆ ಮಾಡಲ್ಲ."

"ಮಾಡಬಾರ್ದು ಸಾರ್. ಆಗೇನೊ ಪಾಪ ಒಳ್ಳೆ ಪೊಲೀಸ್‌ನೋರು ನಿಮ್ಮಿಂದ ಡಬ್ಬ ಕಸಗಂಡು ಜೀವ ಉಳಿಸಿದ್ರು. ಈಗ ಅಲ್ಲಿ ಬಂದಿರೊ ಪೊಲೀಸ್ ನೀವು ಸೀಮೆಎಣ್ಣೆ ಹುಯ್ಕಂಡೇಟಿಗೆ ಬೆಂಕಿಕಡ್ಡಿ ಗೀರತರೆ."

"ಅದ್ಕೆ ನಾನು ಮತ್ತೆ ಸೀಮೆಎಣ್ಣೆ ಸಹವಾಸಕ್ಕೋಗಲ್ಲ."

"ರಾಜೀನಾಮೆ ಕೊಡ್ತಿರ?"

"ರಾಜೀನಾಮೆ ಕೊಟ್ರೆ ಉಪಚುನಾವಣೆಲಿ ಮತ್ತೆ ಗೆದ್ದು ಬರಂಗೇಯಿರಲ್ಲ."

"ಯಾಕೆ ಗೆಲ್ಲಕ್ಕಾಗಲ್ಲ?"


"ದೇವೇಗೌಡ್ರು ನಮಗೆ ಟಿಕೆಟ್ ಸಿಗದಂಗೆ ಮಾಡ್ತರೆ."

"ಅವರು ದಳದ ಅಧ್ಯಕ್ಷರಲ್ಲವ?"

"ಇಲ್ಲ ಕಂಡ್ರಿ, ಅವುರೀಗ ಬಿಜೆಪಿದಳದ ಅಧ್ಯಕ್ಷರು!"

"ಥೂತ್ತೇರಿ!!!"

-ಯಾಹೂ



ರಾಜ್‌ಕುಮಾರ್‌ಗೆ ಧೋಖಾ!





ಸಮಾಧಿಯ ಮುಂದೊಂದು ಶೆಡ್



ರಾಜ್ ಕುಟುಂಬ ನಿರ್ಮಿಸಿದ ಅಮೃತಶಿಲೆಯ ಸಮಾಧಿ

ಎಂ.ಎಸ್. ಸತೀಶ್

"ವಚನಭ್ರಷ್ಟನಾದೆಯಲ್ಲ ಕುಮಾರ..... ಅಂದು ನನ್ನ ಆತ್ಮ ಬ್ರಹ್ಮಾಂಡದಲ್ಲಿ ಲೀನವಾದಾಗ ದುಃಖಿಸುತ್ತ ನಿಂತಿದ್ದ ನೀನು ಹೇಳಿದ್ದೇನು? ಡಾ. ರಾಜ್‌ಕುಮಾರ್‌ರವರಿಗೆ ಮೂವರು ಪುತ್ರರಲ್ಲ, ನಾಲ್ವರು. ಆ ನಾಲ್ಕನೆಯವನೇ ನಾನು. ಆ ಮಾತು ಇಂದು ಮರೆತು ಹೋಯಿತೆ?" ಆರು ತಿಂಗಳ ಹಿಂದೆ, ಐದು ಕೋಟಿ ಕನ್ನಡಿಗರನ್ನಗಲಿದ ನಟಸಾರ್ವಭೌಮ ಡಾ.ರಾಜ್‌ಕುಮಾರ್‌ರವರ ಆತ್ಮಸ್ವರ್ಗದಿಂದ, ಈ ರಾಜ್ಯದ ಮುಖ್ಯಮಂತ್ರಿ ಎಚ್.ಡಿ. ಕುಮಾರಸ್ವಾಮಿಯವರನ್ನು ಈ ರೀತಿ ಪ್ರಶ್ನಿಸುತ್ತಿರಬಹುದೇ?



ನಿಜ, ಐದು ದಶಕಗಳ ಕಾಲ ಕನ್ನಡ ಚಿತ್ರರಸಿಕರ ಹೃದಯ ಸಾಮ್ರಾಜ್ಯಾಧೀಶನಾಗಿ, ತಮ್ಮ ಅಭಿನಯ, ವಿನಯ, ಸರಳತೆ, ಮುಗ್ಧತೆ ಮತ್ತು ಪ್ರಾಮಾಣಿಕತೆಯಿಂದ ಕನ್ನಡಿಗರ ಮನಗೆದ್ದಿದ್ದ ಡಾ.ರಾಜ್‌ಕುಮಾರ್, ಈ ಲೋಕದ ವ್ಯಾಪಾರ ಮುಗಿಸಿದ ಕ್ಷಣದಿಂದ, ಎಚ್.ಡಿ. ಕುಮಾರಸ್ವಾಮಿ ಸರ್ಕಾರ, ಡಾ.ರಾಜ್ ಪಾರ್ಥಿವ ಶರೀರ ಮತ್ತು ಅವರ ಕುಟುಂಬಕ್ಕೆ ನೀಡಿದ ಮಾನಸಿಕ ಹಿಂಸೆ ಮತ್ತು ಡಾ.ರಾಜ್ ಶವಸಂಸ್ಕಾರದ ಸಂದರ್ಭದಲ್ಲಿ ತೋರಿದ ಸಂಪೂರ್ಣ ನಿರ್ಲಕ್ಷ್ಯ ಹಾಗೂ ಪರಿಸ್ಥಿತಿ ನಿರ್ವಹಿಸುವಲ್ಲಿ ತೋರಿದ ವೈಫಲ್ಯವನ್ನು ಇಡೀ ರಾಜ್ಯದ ಜನತೆ ಮರೆತಿಲ್ಲ.

ಅಂತಹ ಗಾಯ ಇನ್ನೂ ಹಸಿಯಾಗಿರುವಾಗಲೇ ಡಾ. ರಾಜ್ ಸಮಾಧಿ ಸ್ಥಳವನ್ನು ಸಂಪೂರ್ಣ ನಿರ್ಲಕ್ಷಿಸಿರುವ ಸರ್ಕಾರ, ಗಾಯದ ಮೇಲೆ ಬರೆ ಎಳೆದಂತೆ ಕೋಟ್ಯಂತರ ಅಭಿಮಾನಿಗಳ ಮತ್ತು ಡಾ.ರಾಜ್ ಕುಟುಂಬದ ವಯಕ್ತಿಕ ದುಃಖಕ್ಕೆ ಕಾರಣವಾಗಿದೆ. ಡಾ. ರಾಜ್ ನಿಧನದ ಸಂದರ್ಭದಲ್ಲಿ ನಟ ಸಾರ್ವಭೌಮರ ನೆನಪು ಚಿರಸ್ಥಾಯಿಯಾಗಿ ಉಳಿಯುವಂತೆ ಮಾಡಲು, ಅವರ ಹೆಸರಿನಲ್ಲೊಂದು ಉದ್ಯಾನವನ, ರಾಜ್ ಬಳಸಿದ ವಸ್ತುಗಳ ಸಂಗ್ರಹಾಲಯ, ಧ್ಯಾನಮಂದಿರ ಮತ್ತು ಗ್ರಂಥಾಲಯ ನಿರ್ಮಿಸುವುದಾಗಿ ಸರ್ಕಾರ ಘೋಷಿಸಿತು. ಸಧ್ಯಕ್ಕೆ ಇವೆಲ್ಲಾ ಕಾರ್ಯಗತವಾಗುವುದಿರಲಿ, ಸಮಾಧಿ ಇರುವ ಕಂಠೀರವ ಸ್ಟುಡಿಯೋ ಪ್ರದೇಶವೇ ಅನಾಥವಾಗಿ ಬಿಕೋ ಎನ್ನುತ್ತಿದೆ.

ವಚನ ಭ್ರಷ್ಟ ಕುಮಾರ!

ಮಾಗಡಿ ಮತ್ತು ಪೀಣ್ಯ ರಸ್ತೆಗಳಿಗೆ ಸಂಪರ್ಕವಾಗಿರುವ ರಿಂಗ್ ರಸ್ತೆಯಲ್ಲಿ ಕಂಠೀರವ ಸ್ಟುಡಿಯೋ ಜಮೀನಿನಲ್ಲಿ ಬರುವ ಡಾ. ರಾಜ್ ಸಮಾಧಿಯ ಸ್ಥಳ ಆರಂಭದಿಂದಲೂ ವಿವಾದಿತ ಪ್ರದೇಶವೆ. ಎಸ್.ಎಂ. ಕೃಷ್ಣ ಆಡಳಿತ ಅವಧಿಯಲ್ಲಿ ಸದರಿ ಜಾಗವನ್ನು ಖಾಸಗಿಯವರಿಗೆ ಮಾರಲು ಸಂಪುಟ ಸಭೆಯಲ್ಲಿ ನಿರ್ಧಾರವಾಗಿತ್ತು. ಆದರೆ ಅದಿನ್ನೂ ಜಾರಿಗೆ ಬಂದಿರಲಿಲ್ಲ. ಇದು ಕಾರ್ಯರೂಪಕ್ಕೆ ಬಾರದಿರಲಿ ಎಂಬ ಏಕೈಕ ರಾಜಕೀಯ ಉದ್ದೇಶದಿಂದ ಕುಮಾರಸ್ವಾಮಿ ಈ ಜಾಗವನ್ನು ಆಯ್ಕೆ ಮಾಡಿದರೆಂಬ ಆರೋಪವಿದೆ. ಈ ಆರೋಪವೇನೇ ಇರಲಿ, ಜಾಗವನ್ನು ನೀಡಿದ ಸರ್ಕಾರ, ಕನ್ನಡ ಸಂಸ್ಕೃತಿಯ ಪ್ರತಿನಿಧಿಯಂತಿದ್ದ ನಟಸಾರ್ವಭೌಮರ ಸಮಾಧಿಸ್ಥಳದ ವ್ಯವಸ್ಥೆಯ ಬಗ್ಗೆ ನೀಡಿದ ಭರವಸೆಗಳನ್ನು ಕಾರ್ಯರೂಪಕ್ಕೆ ತರಬೇಕಿತ್ತು. ಆದರೆ ಅಧಿಕಾರಕ್ಕೆ ಬಂದಾಗಿನಿಂದ ಕೇವಲ ಬಾಯಿ ಮಾತಿನಲ್ಲೇ ಕಾಲ ಕಳೆಯುತ್ತಿರುವ ಕುಮಾರಸ್ವಾಮಿ ಸರ್ಕಾರ ಡಾ. ರಾಜ್ ವಿಚಾರದಲ್ಲೂ ಇದೇ ತಪ್ಪೆಸಗಿ ಜನರ ಭಾವನೆಗಳನ್ನು ಕೆರಳಿಸಿದೆ.



ಗೇಟ್ ಇಲ್ಲದ ಪ್ರವೇಶ ದ್ವಾರ

ಇವತ್ತು ಡಾ. ರಾಜ್ ಸಮಾಧಿ ಸ್ಥಳದ ದರ್ಶನಕ್ಕೆ ಹೋಗುವ ಅಭಿಮಾನಿಗಳನ್ನು ಸ್ವಾಗತಿಸುವುದು ಮುರಿದು ಬಿದ್ದ ಸರ್ವೆ ಮರಗಳಿಂದ ಕಟ್ಟಿರುವ ತಡೆಗಳು, ಟೆಂಟ್ ಥಿಯೇಟರ್ ಎಂಬ ಭಾವನೆ ಬರುವಂತಹ ಹಳೆಯ ರಾಜ್ ಚಿತ್ರದ ಪೋಸ್ಟರ್ ಮತ್ತು ಕಟೌಟ್‌ಗಳು, ಗೇಟೇ ಇಲ್ಲದ ಪ್ರವೇಶದ್ವಾರ, ಕಾವಲುಗಾರನಿಗೊಂದು ಹರಕಲು ಜೋಪಡಿ. ರಾಜ್ ಕುಟುಂಬದವರೇನಾದರೂ ಇಲ್ಲಿ ಅಮೃತ ಶಿಲೆಯಲ್ಲಿ ಸಮಾಧಿಯನ್ನು ನಿರ್ಮಿಸದಿದ್ದರೆ ಯಾವತ್ತೋ ನಾಯಿ, ನರಿಗಳು ಸಮಾಧಿಯನ್ನು ಕೆದಕಿ ಬಿಡುತ್ತಿದ್ದವು. ಒಟ್ಟನಲ್ಲಿ ಸಮಾಧಿಯನ್ನು ನೋಡಿದರೆ ಭೂಗಳ್ಳರ್ಯಾರೋ ಜಮೀನು ಆಕ್ರಮಿಸಲು ರಾತ್ರಾನುರಾತ್ರಿ ನಿರ್ಮಿಸಿದ ದೇವಸ್ಥಾನದಂತೆ ಭಾಸವಾಗುತ್ತದೆ.

ಡಾ:ರಾಜ್ ತಮಿಳುನಾಡಿನಲ್ಲಿ ಹುಟ್ಟಬೇಕಿತ್ತು!

ಡಾ.ರಾಜ್ ಏನಾದರೂ ತಮಿಳುನಾಡಿನಲ್ಲೋ ಆಂಧ್ರಪ್ರದೇಶದಲ್ಲೋ ಹುಟ್ಟಿದಿದ್ದರೆ? ನಟಿ ಖುಷ್ಬೂ ಅದ್ಯಾವುದೋ ದೇವಿ ಪಾತ್ರ ಮಾಡಿದಳೆಂದು ಭಕ್ತಿಪರವಶರಾದ ತಮಿಳುನಾಡು ಚಿತ್ರ ಪ್ರೇಮಿಗಳು ಜೀವಂತವಿರುವಾಗಲೇ ಆಕೆಗೊಂದು ದೇವಸ್ಥಾನವನ್ನೇ ಕಟ್ಟಿ "ಖುಷ್ಬು ದೇವಿ" ಎಂದು ಆರಾಧಿಸಿ ದಾಖಲೆ ನಿರ್ಮಿಸಿದ್ದರು. ಇನ್ನು ಆಚಾರ-ವಿಚಾರದಲ್ಲೂ ದೇವರಂತಿದ್ದ ರಾಜ್‌ಕುಮಾರ್‌ರವರನ್ನು ಅದಿನ್ಯಾವ ರೀತಿ ಗೌರವಿಸುತ್ತಿದ್ದರೋ?

ಅದಿರಲಿ ಬಿಡಿ. ತಮಿಳುನಾಡಿನ ಮಾಜಿ ಮುಖ್ಯಮಂತ್ರಿ ಹಾಗೂ ಚಿತ್ರ ನಟ ಎಂ.ಜಿ.ಆರ್.ರವರ ಸಮಾಧಿ ಸ್ಥಳವನ್ನು ನಮ್ಮ ಮುಖ್ಯಮಂತ್ರಿ ಕುಮಾರಸ್ವಾಮಿ ಒಮ್ಮೆ ನೋಡಿ ಬರಬೇಕು. ಚೆನ್ನೈನ ಮರೀನಾ ಸಮುದ್ರ ಕಿನಾರೆಯ ಹತ್ತಿರದ ವಿಶಾಲ ಜಾಗದಲ್ಲಿ ಎಂ.ಜಿ.ಆರ್ ಸಮಾಧಿ ನಿರ್ಮಾಣವಾಗಿದೆ. ಸ್ವಲ್ಪ ದೂರದಲ್ಲಿ ಅಣ್ಣಾ ದೊರೈರವರ ಸಮಾಧಿ ಇದೆ. ಇದು ತಮಿಳುನಾಡಿನ ಜನರಿಗೆ ಒಂದು ಪುಣ್ಯ ಕ್ಷೇತ್ರವಿದ್ದಂತೆ.

ಆಂಧ್ರಪ್ರದೇಶದಲ್ಲೂ ಇದೇ ಗೌರವ. ಅಲ್ಲಿ ಎನ್.ಟಿ.ಆರ್.ಸಮಾಧಿಯನ್ನು ಸಚಿವಾಲಯದ ಪಕ್ಕದಲ್ಲೇ ವೈಭವವಾಗಿ ನಿರ್ಮಿಸಲಾಗಿದೆ. ಈ ನಿರ್ಮಾಣಕ್ಕಾಗಿ ಪ್ರಸಿದ್ಧ ಹುಸೇನ್ ಸಾಗರ ಸರೋವರದ ಸ್ವಲ್ಪ ಭಾಗವನ್ನೇ ಆಕ್ರಮಿಸಿಕೊಂಡು ಬಳಸಿಕೊಳ್ಳಲಾಯಿತು. ಅಲ್ಲಿ ಇಪ್ಪತ್ನಾಲ್ಕು ಗಂಟೆಯೂ ಜ್ಯೋತಿ ಉರಿಯುತ್ತಲೇ ಇರುತ್ತದೆ.

ನಮ್ಮವರೇನು ಕಮ್ಮಿ ಇಲ್ಲ. ಡಾ. ರಾಜ್ ನಿಧನರಾದಾಗ ವಿದೇಶ ಪ್ರವಾಸದಲ್ಲಿದ್ದ ಮೇಯರ್ ಮಮ್ತಾಜ್ ಬೇಗಂ "ನಾನೇನಾದ್ರೂ ಇದ್ದಿದ್ರೆ ಖಾಲಿ ಬಿದ್ದಿರೋ ಸೆಂಟ್ರಲ್ ಜೈಲ್ ಜಾಗಾನೇ ಸಮಾಧಿಗೆ ಕೊಡ್ತಿದ್ದೆ" ಅಂತ ಹೇಳಿ ನಗೆಪಾಟಲಿಗೆ ಈಡಾದ್ರು. ಇನ್ನಾರೋ ಕಬ್ಬನ್‌ಪಾರ್ಕ್ ಅಂದ್ರು. ಕಡೆಗೂ ಸರ್ಕಾರದ ಕಣ್ಣಿಗೆ ಬಿದ್ದಿದ್ದು ಕಂಠೀರವ ಸ್ಟುಡಿಯೋದ ವಿವಾದಿತ ಜಾಗ. ಬೇರೆ ಆಯಕಟ್ಟಿನ ಜಾಗವೆಲ್ಲ ಇವರಿಗೇ ಬೇಕಲ್ಲ!

ಈ ಮಧ್ಯೆ ಸಮಾಧಿ ಸ್ಥಳಕ್ಕೆ ಪ್ರವೇಶ ಎಲ್ಲಿಂದ ಎಂಬುದು ಈವರೆಗೆ ಇತ್ಯರ್ಥವಾಗಿಲ್ಲ. ಈಗಿರುವ ಪ್ರವೇಶ ರಿಂಗ್‌ರಸ್ತೆಯ ಪಕ್ಕದಲ್ಲಿ ಹಾದು ಹೋಗುವ ಸರ್ವೀಸ್ ರಸ್ತೆಯಿಂದ. ಆದರೆ ಪ್ರವೇಶ ಮುಖ್ಯರಸ್ತೆಯಿಂದಿರಲಿ ಎಂಬುದು ಅಭಿಮಾನಿಗಳ ಅಭಿಪ್ರಾಯ. ಸ್ಟುಡಿಯೋದೊಳಗಿನಿಂದ ಪ್ರವೇಶ ನೀಡಿದರೆ ಜನರ ಓಡಾಟದಿಂದ ಚಿತ್ರೀಕರಣಕ್ಕೆ ಅಡಚಣೆ ಉಂಟಾಗುತ್ತದೆಂದು ಸ್ಟುಡಿಯೋ ಆಡಳಿತ ವರ್ಗದ ತಕರಾರು. ಸರ್ವೀಸ್ ರಸ್ತೆಯ ಡಿವೈಡರ್ ಒಡೆದು ಮುಖ್ಯ ಮೂಲಕ (ರಿಂಗ್ ರಸ್ತೆ) ಸಂಪರ್ಕ ನೀಡಿದರೆ ಸಂಚಾರಕ್ಕೆ ಅಡಚಣೆಯಾಗುತ್ತದೆ ಎಂಬುದು ಟ್ರಾಫಿಕ್ ಪೊಲೀಸ್ ರೂಲ್ಸ್. ಒಟ್ಟಾಗಿ ಬದುಕಿರುವ ತನಕ ಯಾರಿಗೂ ತೊಂದರೆ ಮಾಡದಿದ್ದ ಹಿರಿಯ ಚೇತನಕ್ಕೆ ಈಗ ಇಂತಹ ಸಂಕಟ.

ಇನ್ನು ವಸ್ತು ಸಂಗ್ರಹಾಲಯ, ಉದ್ಯಾನವನ, ಧ್ಯಾನಮಂದಿರ ಮತ್ತು ಗ್ರಂಥಾಲಯ ಇವನ್ನು ಮಾಡುವುದಾಗಿ ಮುಖ್ಯಮಂತ್ರಿ ಕುಮಾರಸ್ವಾಮಿ ಏನೋ ಅತ್ಯುತ್ಸಾಹದಿಂದ ಘೋಷಿಸಿದ್ದರು. ಅವರ ಸಚಿವಾಲಯದ ಅಧಿಕಾರಿಗಳು ಅಷ್ಟೇ ನಿಯತ್ತಾಗಿ ಅದನ್ನು ಟಿಪ್ಪಣಿ ಮಾಡಿಕೊಂಡರು. ಆದರೆ ಈ ಟಿಪ್ಪಣಿಯನ್ನು ಯಾರಿಗೆ ಕಳುಹಿಸಬೇಕು? ಇದು ಆದೇಶವೇ? ಚರ್ಚೆಗೆ ಬೇಕಾದ ವಿಷಯವೇ? ಎಂದು ಅರ್ಥವಾಗದೆ ಅದು ಮುಖ್ಯಮಂತ್ರಿಗಳ ಸಚಿವಾಲಯದಲ್ಲೇ ಧೂಳು ತಿನ್ನುತ್ತಾ ಕೂತಿದೆ.

ವಸ್ತು ಸಂಗ್ರಹಾಲಯ. ಇದು ಪ್ರಾಚ್ಯವಸ್ತು ಇಲಾಖೆಯ ಜವಾಬ್ದಾರಿಯೇ? ಅಥವಾ ವಸ್ತು ಪ್ರದರ್ಶನ ಪ್ರಾಧಿಕಾರಕ್ಕೆ ಸೇರಬೇಕೆ? ಎಂಬುದು ಗೊಂದಲಕ್ಕೆ ಕಾರಣವಾಗಿದೆಯಂತೆ. ಉದ್ಯಾನವನವೇನೋ ಸಹಜವಾಗಿ ತೋಟಗಾರಿಕೆ ಇಲಾಖೆಗೆ ವಹಿಸಬಹುದು. ಆದರೆ

(12ನೇ ಪುಟಕ್ಕೆ)

ರಾಜ್ ಸೌಜನ್ಯವೂ, ಮುಖ್ಯಮಂತ್ರಿ ಚರ್ಮವೂ!

ರಾಘವೇಂದ್ರ ರಾಜ್‌ಕುಮಾರ್ ತೀರಾ ಸಂಕೋಚದಿಂದ ಮಾತನಾಡಿದರು. "ಸಮಾಧಿ ಸ್ಥಳವನ್ನು ಅಭಿವೃದ್ಧಿ ಮಾಡ್ತೀವಿ ಅಂತ ಸರ್ಕಾರವೇ ಬಹಿರಂಗವಾಗಿ ಹೇಳಿದೆ. ಈಗ ಅವ್ರು ಬೇರೆ ಬೇರೆ ವಿಷಯಗಳಲ್ಲಿ ಬಿಜಿ ಆಗಿರಬಹುದು. ಸರ್ಕಾರ ಅಂದ ಮೇಲೆ ಹಲವಾರು ಸಮಸ್ಯೆ ಇರುತ್ತೆ ನಮ್ದು ಒಂದೇನಾ?" ಅಂತ ಬಹಳ ಸೌಜನ್ಯದಿಂದ 'ಲಂಕೇಶ್' ಜೊತೆ ಮಾತನಾಡಲಾರಂಭಿಸಿದ ರಾಘವೇಂದ್ರರ ಮಾತಿನಲ್ಲೂ ವಿಷಾದವಿದ್ದಿದ್ದು ಸ್ಪಷ್ಟವಾಗಿತ್ತು.



"ಇನ್ನೂ ಯಾಕೆ ಮಾಡಿಲ್ಲ? ಯಾಕೆ ತಡ ಆಗ್ತಿದೆ? ಅಂತ ನಾವು ಮೂವರೇ ಅಣ್ಣ, ತಮ್ಮ ಹೋಗಿ ಕೇಳೋದು ಅಷ್ಟು ಚೆನ್ನಾಗಿರೋಲ್ಲ. ಇದೇನಪ್ಪ ಈ ರಾಜ್ಯದಲ್ಲಿ ಬೇರೆ ಸಮಸ್ಯೆ ಇಲ್ಲವ? ಅನ್ನೋ ಭಾವನೆ ಸರ್ಕಾರದವರಿಗೆ ಬರಬಾರದು. ನಮಗೂ ದುಃಖ ಇದೆ. ನಾವೇ ಏನಾದ್ರೂ ಮಾಡೋಣ ಅಂದ್ರೆ, ಸಮಾಧಿ ಇರೋ ಸ್ಥಳ ಸರ್ಕಾರಕ್ಕೆ ಸೇರಿದ್ದು. ಸರ್ಕಾರ ಆಗೋಲ್ಲ ಅಂತ ಹೇಳಬಿಟ್ರೆ ನಾವೇನಾದ್ರೂ ಮಾಡ್‌ಬಹುದು, ಆದರೆ, ಒಂದ್ ಹೋಗಿ ಮತ್ತೊಂದು ಆಗ್‌ಬಾರ್ದು.

"ಅಪ್ಪಾಜಿ ಯಾವಾಗ್ಲೂ ಶಾಂತಿಯಿಂದ ಇರ್ಬೇಕು, ಗಲಾಟೆ ಆಗ್ಬಾರ್ದು ಅಂತ ಅಂತಿದ್ರು. ಅಂತದ್ರಲ್ಲಿ, ನಾವು ಯಾವ್ದೇ ಆತುರದ ನಿರ್ಧಾರಕ್ಕೆ ಬರಬಾರ್ದು ಅಲ್ವಾ? ಜನ ನಮ್ಮನ್ನೇ ಕೇಳ್ತಾರೆ, ಏನು ಅಪ್ಪಾಜಿಯವರ ಸಮಾಧಿ ಈ ಸ್ಥಿತೀಲಿ ಇದ್ಯಲ್ಲ ಅಂತ. ಆದ್ರೆ ಏನ್ ಮಾಡೋದು? ಪರಿಸ್ಥಿತಿ ಈ ತರ ಇದೆ. ಅಪ್ಪಾಜಿ ಸಮಾಧಿ ಸ್ಥಳದ ಬಗ್ಗೆ ನಮ್ಮ ಕುಟುಂಬದವರು ಮಾತ್ರವೆ ತೀರ್ಮಾನ ಕೈಗೊಂಡರೆ ಸಾಲದು. ಸರ್ಕಾರದ ಪ್ರತಿನಿಧಿಗಳು, ಅಭಿಮಾನಿಗಳು, ಪತ್ರಕರ್ತರು ಇವರೆಲ್ಲ ಸೇರಿ ಒಂದು ಸಮಿತಿ ಮಾಡಿ ಏನಾದರೂ ನಿರ್ಧಾರ ಕೈಗೊಳ್ಳಬೇಕು."

ಇದು ರಾಘವೇಂದ್ರ ರಾಜ್‌ಕುಮಾರ್ ಮತ್ತು ರಾಜ್ ಕುಟುಂಬದ ಸೌಜನ್ಯ. ಆದರೆ ರಾಜ್ ಸಮಾಧಿ ಸ್ಥಳದ ಸ್ಥಿತಿ-ಗತಿಯ ಬಗ್ಗೆ ಡಾ. ರಾಜ್ ಇಂಟರ್‌ನ್ಯಾಷನಲ್ ಹೋಟೆಲ್ ಉದ್ಘಾಟನೆಯ ದಿನದಂದು ಬಹಿರಂಗರಾಗಿ ಅಸಮಾಧಾನ ವ್ಯಕ್ತವಾಗಿದ್ದರೂ, ಅದಕ್ಕೆ ಪ್ರತಿಕ್ರಿಯೆ ವ್ಯಕ್ತಪಡಿಸದ, ಸ್ಪಂದಿಸದ ಚರ್ಮ ನಮ್ಮ ಮುಖ್ಯಮಂತ್ರಿಗಳದು.

ಗುಪ್ತಾ ಮಾರ್ಕೆಟ್ ಗುಪ್ತ ಕತೆ!



ಕೊನೆಗೂ ಬೆಂಗಳೂರಿನ ಮೆಜೆಸ್ಟಿಕ್ ಪ್ರದೇಶದಲ್ಲಿನ ಅತ್ಯಂತ ಹಳೆಯ ಹಾಗು ಜನಜನಿತವಾದ ಭೂಗುರುತು (land mark)ವೆನಿಸಿದ್ದ ಗುಪ್ತಾ ಮಾರ್ಕೆಟ್ ಸಮುಚ್ಚಯ ಮಾರಾಟವಾಗಿದೆ....

ಎರಡು ಸಮುದಾಯಗಳ ಐಯ್ಯಂಗಾರ್ ಕುಟುಂಬಗಳ ಮಾಲೀಕತ್ವದಲ್ಲಿದ್ದರೂ ದಶಕಗಳಿಂದ ನೂರಾರು ಬಿಡಿ, ಮಾರವಾಡಿ ಮತ್ತಿತರ ವ್ಯಾಪಾರಿ ಗುಂಪುಗಳ ಕಪಿಮುಷ್ಟಿಯಲ್ಲಿ ಸಿಲುಕಿ ಶಿಥಿಲಗೊಂಡಿದ್ದ ಗುಪ್ತಾ ಮಾರ್ಕೆಟ್ ಕಟ್ಟಡದ ಪರಭಾರೆ ಪ್ರಕ್ರಿಯೆ ಕಳೆದ ಮಾರ್ಚ್ 16,2006 ರಂದು ಸಾಂಗೋಪಾಂಗವಾಗಿ ನೆರವೇರಿದೆ.

ಸುಮಾರು 100 ಕೋಟಿಗೂ ಅಧಿಕ ಬೆಲೆಯುಳ್ಳದ್ದೆಂದು ಅಂದಾಜು ಮಾಡಲಾದ, ರಾಜಧಾನಿಯ ಕೇಂದ್ರಸ್ಥಾನದಲ್ಲಿದ್ದ ಈ ಪುರಾತನ ಆಸ್ತಿ-ನಿವೇಶನಗಳೀಗ 'ದೊಡ್ಡವರ' ಪಾಲಾಗಿಬಿಟ್ಟಿವೆ.

ಪ್ರಸಕ್ತ ವರ್ಷಾರಂಭದ ಮೊದಲ ವಾರದಲ್ಲಿಯೇ ಅಂದರೆ ಜನವರಿ 4, 2006 ರ 'ಲಂಕೇಶ್' ಸಂಚಿಕೆಯಲ್ಲಿ 'ಗುಪ್ತಾ ಮಾರ್ಕೆಟ್ ಸ್ವಾಹಾ' ಎಂಬ ತನಿಖಾ ವರದಿಯ ಮೂಲಕ ಗೆಳೆಯ ರಾ. ಸೋಮನಾಥ್ ಸದರಿ ಬಹುಕೋಟಿ ರೂಪಾಯಿ ಆಸ್ತಿ ವಹಿವಾಟಿನ ಪೂರ್ವಭಾವಿ ಸೂಚನೆ ನೀಡಿದ್ದರಷ್ಟೇ....

ಆವತ್ತಿನ ಆ ಪ್ರಪ್ರಥಮ ಸ್ಕೂಪ್ ವರದಿಯ ನಂತರದ ಘಟನಾವಳಿಗಳ ಸಮಗ್ರ ದಾಖಲೆಗಳ ಸಮೇತ ಇದೀಗ ನಾವು ಗುಪ್ತಾ ಮಾರ್ಕೆಟ್ ಪರಭಾರೆ ವೃತ್ತಾಂತವನ್ನು ಮುಂದಿಡುತ್ತಿದ್ದೇವೆ....

ಇತ್ತೀಚಿನ ಹಲವಾರು ಸರಣಿ ವಹಿವಾಟುಗಳ ತರವೇ ಈ ಗುಪ್ತಾ ಮಾರ್ಕೆಟ್ ಆಸ್ತಿಯ ಅಸಲೀ ಖರೀದಿದಾರರು ಇನ್ನಾರೂ ಅಲ್ಲ ಸ್ವತಃ ಮುಖ್ಯಮಂತ್ರಿ ಕುಮಾರಣ್ಣನವರೇ ಎಂಬ ದಟ್ಟ ವದಂತಿಗಳ ನಡುವೆಯೆ ದಿನಾಂಕ 16.3.2006 ರಂದು ಅಧಿಕೃತವಾಗಿ ಆಸ್ತಿ ಖರೀದಿಸಿ ನೊಂದಣಿ ಮಾಡಿಸಿರುವುದು ಮೇ. ಸಿ.ಬಿ. ಅಸೋಸಿಯೇಟ್ಸ್ ಎಂಬ ಪಾರ್ಟನರ್‌ಶಿಪ್ ಸಂಸ್ಥೆ....!

ಮೆ. ಸಿ.ಬಿ. ಅಸೋಸಿಯೇಟ್ಸ್: ಬೇನಾಮಿ ಕಂಪನಿಯೇ?

ಪ್ರಸ್ತುತ ವರದಿಯಲ್ಲಿ ನಿರೂಪಿಸಲ್ಪಟ್ಟಿರುವುದು ಗುಪ್ತಾ ಮಾರ್ಕೆಟ್ ಸಮುಚ್ಚಯದ ಶೇ. 45 ರಷ್ಟು ಭಾಗದ ಒಡೆಯರಾದ ಸಿ.ಎಲ್. ಸೀತಾರಾಂ ಮತ್ತವರ ಕುಟುಂಬದೊಂದಿಗೆ 18 ಕೋಟಿ ರೂಪಾಯಿಗಳಿಗೆ ಮಾಡಿಕೊಳ್ಳಲಾದ ವಿಕ್ರಯದ ಕುತೂಹಲಕರ ವಿವರಗಳು....

ಖರೀದಿದಾರ ಸಂಸ್ಥೆ ಮೆ. ಸಿ.ಬಿ. ಅಸೋಸಿಯೇಟ್ಸ್‌ನ ಪಾರ್ಟನರುಗಳೆಂದರೆ ಜಯನಗರ 4 ನೇ ಬ್ಲಾಕಿನ 13 ನೇ ಮೈನ್ ನಿವಾಸಿ ಕೆ. ಬಾಗೇಗೌಡ ಮತ್ತು ಮಲ್ಲೇಶ್ವರದ 6 ನೇ ಮೈನ್ 12-13 ನೇ ಕ್ರಾಸ್‌ನ ನಿವಾಸಿ ಆರ್. ಚಂದ್ರಪ್ಪ ಎಂಬಿಬ್ಬರು ಲೋಕಲ್ ಕುಬೇರರು(?)

ರಿಯಲ್ ಎಸ್ಟೇಟ್ ಹಾಗು ಡೆವಲಪ್‌ಮೆಂಟ್ ವ್ಯವಹಾರದಲ್ಲಿ 'ಸಾಕಷ್ಟು' ಸಂಪಾದಿಸಿರುವರೆನ್ನಲಾದ ಬಾಗೇಗೌಡ ಹಾಗು ಮಹಾನಗರ ಪಾಲಿಕೆ ಗುತ್ತಿಗೆದಾರರಾಗಿ ಮಿಂಚುತ್ತಿರುವ ಚಂದ್ರಪ್ಪ ಇವರಿಬ್ಬರೂ ಕರ್ನಾಟಕ ಹಾಲಿ ರಾಜವಂಶದ ಜತೆಗೆ ಹೊಂದಿರುವ ಆಪ್ತ ಸಂಬಂಧವೇ ಇಡೀ ವ್ಯವಹಾರದ ಬಗ್ಗೆ ಅಚ್ಚರಿಯ ಗುಮಾನಿ ಸಂಗತಿಗಳು ಹರಡಲು ಕಾರಣವಾಗಿತ್ತು....



ಬಾಗೇಗೌಡರು ಇತ್ತೀಚಿನ ವರ್ಷಗಳಲ್ಲಿ ಮೈಸೂರು ರಸ್ತೆಯಲ್ಲಿನ ಒಂದು ದೊಡ್ಡ ಲೇಔಟ್ ಅಭಿವೃದ್ಧಿಪಡಿಸುವಲ್ಲಿ ಕುಮಾರಣ್ಣನವರ ಜತೆ ಪಾಲುದಾರಿಕೆ ವಹಿವಾಟು ನಡೆಸಿದ್ದರೆಂಬುದೇ ಅತ್ಯಂತ ಪ್ರಮುಖ ಹಿನ್ನೆಲೆ ಮಾಹಿತಿ ಎನ್ನಿಸಿತ್ತು....

ಹಾಗೆಯೇ ಮಹಾನಗರ ಪಾಲಿಕೆ ಗುತ್ತೇದಾರ ಚಂದ್ರಪ್ಪ ಪದ್ಮನಾಭನಗರದ ಗೌಡರ ಆಸ್ಥಾನದಲ್ಲಿ ಅತ್ಯಂತ ವಿಧೇಯತೆಯಿಂದ ಓಡಾಡಿಕೊಂಡಿರುವುದೂ ಮೇಲಿನ ವದಂತಿಗಳಿಗೆ ಪುಷ್ಟಿ ನೀಡುವಂತಿತ್ತು.

ಕಳೆದ ಜನವರಿಯಲ್ಲಿ 'ಲಂಕೇಶ್'ನಲ್ಲಿ ಪ್ರಕಟಗೊಂಡ ವರದಿಯಲ್ಲೂ ಇಂತಹ ಸಂಬಂಧದ ಬಗ್ಗೆ ಸೂಚ್ಯವಾಗಿ ಉಲ್ಲೇಖಿಸಿದ್ದನ್ನು ಸ್ವತಃ ಕುಮಾರಸ್ವಾಮಿಯವರೇ (ಆಗಿನ್ನೂ ಅವರ 'ಕ್ಷಿಪ್ರಕ್ರಾಂತಿ' ಜರುಗಿರಲಿಲ್ಲ) ತೀವ್ರವಾಗಿ ಪ್ರತಿಭಟಿಸಿದ್ದರು...

ಈಗಲೂ ಅಷ್ಟೇ, ಜಗಜ್ಜಾಹೀರಾಗಿರುವ ಈ ಸಿ.ಬಿ. ಅಸೋಸಿಯೇಟ್ಸ್ ಮತ್ತು ತಮ್ಮ ನಡುವಿನ ಬಿಜಿನೆಸ್ ಸಂಬಂಧವನ್ನು ಮುಖ್ಯಮಂತ್ರಿ ಪದವಿಗೇರಿರುವ ಕುಮಾರಣ್ಣನೇ ಅನುಮಾನ ಕ್ಕಾಸ್ಪದವಿಲ್ಲದಂತೆ ನಿರಾಕರಿಸಬೇಕಿದೆ.

ಮತ್ತೆ ಕರ್ನಾಟಕ ಬ್ಯಾಂಕ್ ಸಾಲ, ದುವಾ ಅಸೋಸಿಯೇಟ್ಸ್ ರಾಯಭಾರ!

ಗುಪ್ತಾ ಮಾರ್ಕೆಟ್ ಕಟ್ಟಡವನ್ನು 16.3.2006 ರಂದು 18 ಕೋಟಿ 23 ಲಕ್ಷ ರೂಪಾಯಿಗಳಿಗೆ ಖರೀದಿಸಿರುವ ಬಾಗೇಗೌಡ-ಚಂದ್ರಪ್ಪಗಳ ಪಾರ್ಟನರ್‌ಶಿಪ್ ಸಂಸ್ಥೆ ಅದಕ್ಕೋಸ್ಕರ ಸ್ಟಾಂಪ್ ಡ್ಯೂಟಿ ತೆರಿಗೆ ರೂಪದಲ್ಲಿಯೇ (ಮುದ್ರಾಂಕ ಶುಲ್ಕ) 1 ಕೋಟಿ 63 ಲಕ್ಷ 34 ಸಾವಿರದ [illegible]

[illegible]

ಗುಪ್ತಾ ಕಟ್ಟಡದ [illegible] ಭಾಗದ [illegible] 18 ಕೋಟಿ ರೂಪಾಯಿಗಳ ಪೈಕಿ 12 ಕೋಟಿ ರೂಪಾಯಿಗಳನ್ನು ಕರ್ನಾಟಕ ಬ್ಯಾಂಕಿನ [illegible] ನಗರ ಶಾಖೆಯಿಂದ ಸಾಲವಾಗಿ ಮಂಜೂರು ಮಾಡಿಸಿಕೊಳ್ಳಲಾಗಿದೆ.

ಅಂದರೆ ಇತ್ತೀಚೆಗೆ ಬಯಲಿಗೆ ಬಂದಿರುವ ಕುಮಾರಸ್ವಾಮಿ ಮತ್ತಿತರ ದೇವೇಗೌಡ ಪರಿವಾರದ ಸದಸ್ಯರ ಆಸ್ತಿ ಖರೀದಿ ಇತಿಹಾಸದುದ್ದಕ್ಕೂ ಅದೇ ಕರ್ನಾಟಕ ಬ್ಯಾಂಕಿನ ವಿವಿಧ ಶಾಖೆಗಳಿಂದ ಯಥೇಚ್ಛವಾಗಿ ಸಾಲ ದೊರಕುತ್ತಿರುವುದೂ ಕಾಕತಾಳೀಯವಿದ್ದೀತೆ?

'ಲಂಕೇಶ್' ಮೂಲಕವೇ ಪ್ರಪ್ರಥಮವಾಗಿ ಬೆಳಕಿಗೆ ಬಂದ 'ಅರಿಶಿನ ಕುಂಕುಮಕ್ಕೆ 30 ಕೋಟಿ ಆಸ್ತಿ' (ವೈಟ್‌ಫೀಲ್ಡ್ ಹೈಟೆಕ್ ಕಾಂಪ್ಲೆಕ್ಸ್ ಖರೀದಿ) ವಹಿವಾಟಿನಲ್ಲೂ ಗೌಡರ ಕುಟುಂಬದ 6 ಮಂದಿ ಮಕ್ಕಳು-ಸೊಸೆಯಂದಿರಿಗೆ 33 ಕೋಟಿ ರೂಪಾಯಿನಷ್ಟು ಸಾಲ ಒದಗಿಸಿದ್ದೂ ಕರ್ನಾಟಕ ಬ್ಯಾಂಕಿನ ಮಿನರ್ವಾ ಸರ್ಕಲ್ ಶಾಖೆ!


ರವೀಂದ್ರ ರೇಶ್ಮೆ

ಗೌಡರ ಕುಟುಂಬದ ಆರ್ಥಿಕ ಚಟುವಟಿಕೆಗಳಿಗೆ ನಿರಂತರ ಆಪತ್ಬಾಂಧವನಂತಿರುವ ಕರ್ನಾಟಕ ಬ್ಯಾಂಕಿನ ಜತೆಗೆಯೆ ಗುಪ್ತಾ ಮಾರ್ಕೆಟ್ ಖರೀದಿಸಿರುವ ಸಿ.ಬಿ. ಅಸೋಸಿಯೇಟ್ಸ್‌ನ ಪಾಲುದಾರರಿಗೆ ಆಸರೆಯಾಗಿ ನಿಂತ ಮತ್ತೊಂದು ಹೆಸರು ಸದರಿ ವಿಕ್ರಯ ವಹಿವಾಟಿನ ಸೇಲ್ ಡೀಡ್ ಡ್ರಾಫ್ಟ್ ಮಾಡುವುದರಿಂದ ಹಿಡಿದು ಇಡೀ ಪ್ರಕ್ರಿಯೆಯ ಪೌರೋಹಿತ್ಯ ನಿರ್ವಹಿಸಿರುವ ಮೆ. ದುವಾ ಅಸೋಸಿಯೇಟ್ಸ್ ಎಂಬ ಕಾರ್ಪೊರೇಟ್ ಲಾಯರ್ ಕಂಪನಿ!!

ವಿವಾದಿತ ವೈಟ್‌ಫೀಲ್ಡ್ ಕಾಂಪ್ಲೆಕ್ಸ್ ಖರೀದಿ ವ್ಯವಹಾರವನ್ನು ಪ್ರಶ್ನಿಸಿ ಚೆನ್ನೈನ ಕೇಂದ್ರೀಯ ಕಂಪನಿ ಲಾ ಬೋರ್ಡಿನ ಎದುರು ನಡೆದಿರುವ ಕೇಸಿನಲ್ಲಿ ದೇವೇಗೌಡ ಕುಟುಂಬದ ಸದಸ್ಯರ ಪರ ಕಾನೂನು ಸಲಹೆಗಾರರಾಗಿ ಹಾಜರಾಗುತ್ತಿರುವವರೂ ಈ ದುವಾ ಅಸೋಸಿಯೇಟ್ಸ್‌ನ ಲಾಯರುಗಳೇ!!

ಹೀಗೆ ಕರ್ನಾಟಕ ಬ್ಯಾಂಕು ಮತ್ತು ದುವಾ ಅಸೋಸಿಯೇಟ್ಸ್‌ನ ಸಮಾನ ಸಹಭಾಗಿತ್ವವಿರುವ ಗುಪ್ತಾ ಮಾರ್ಕೆಟ್ ಪರಭಾರೆ ವಹಿವಾಟಿನಲ್ಲಿ ಸಹಜವಾಗಿಯೇ ಗೌಡರ ಕುಟುಂಬದ ಬೇನಾಮಿ ಆಸಕ್ತಿ ಇದ್ದೀತೆಂದು ಸಂಶಯಿಸುವಂತಾಗಿದೆ...

ಸೆಪ್ಟೆಂಬರ್ 12 ಕ್ಕೆ ಅಗ್ರಿಮೆಂಟು! ಮಾರ್ಚ್ 1 ಕ್ಕೆ ಪಾರ್ಟಿಶನ್ ಡೀಡು!! ಮಾರ್ಚ್ 16 ಕ್ಕೆ ಸೇಲ್‌ಡೀಡು!!!



ಗುಪ್ತಾ ಮಾರ್ಕೆಟ್ ಎಂದೇ ಪ್ರಸಿದ್ಧವಾಗಿದ್ದ ಕಟ್ಟಡ ಸಮುಚ್ಚಯವನ್ನು ಮಾರಾಟ ಮಾಡುವಾಗ ಅದರ ಒಂದು ಭಾಗದ ಮಾಲೀಕತ್ವವಿದ್ದದ್ದು ನರೋತ್ತಮ್ ಮತ್ತು ಪರಿವಾರದ ಹೆಸರಲ್ಲಿ... ಇನ್ನೊಂದು ಭಾಗದ ಮಾಲೀಕತ್ವವಿದ್ದದ್ದು ಸಿ.ಎಲ್. ಸೀತಾರಾಮ್ ಮತ್ತವರ ಪರಿವಾರದ ಹೆಸರಲ್ಲಿ...

ಇಲ್ಲಿ ಉಲ್ಲೇಖಿಸಲಾಗಿರುವ ವಹಿವಾಟು ಇಡೀ ಸ್ವತ್ತಿನ ಶೇ. 45 ರಷ್ಟಿದ್ದ ಸೀತಾರಾಂ ಕುಟುಂಬದ ಮಾಲೀಕತ್ವದಲ್ಲಿದ್ದ ಆಸ್ತಿಗೆ ಸಂಬಂಧಿಸಿದ್ದು....

ಒಟ್ಟು 29,135 ಚದರಡಿಗಳಷ್ಟು ವಿಸ್ತೀರ್ಣದ ನಿವೇಶನದಲ್ಲಿ ಎರಡು ಮಹಡಿಗಳಿದ್ದ ವ್ಯಾಪಾರಿ ಸಂಕೀರ್ಣದ ಕಟ್ಟಡವಿತ್ತು.... [illegible] ಸಂ. 1, 5 ನೇ ಮೈನ್, ಡಬ್ಲ್ಯೂ ಎಚ್. ಹನುಮಂತಪ್ಪ [illegible], ಗಾಂಧಿನಗರ ಬೆಂಗಳೂರು 9, ಎಂಬ ವಿಳಾಸದ ಈ ನಿವೇಶನಗಳನ್ನು 1907 ರಷ್ಟು ಹಿಂದೆಯೇ ದಿವಂಗತ ಸಿ.ವಿ. [illegible] ಐಯ್ಯಂಗಾರ್ (ಹಾಲಿ ಮಾಲೀಕ ಸಿ.ಎಲ್. ಸೀತಾರಾಂರವರ ತಾತ) ಎಂಬುವವರು ಪಟ್ಟಾಡಿ ಗೋವಿಂದಪ್ಪ [illegible]ವರಿಂದ ಖರೀದಿಸಿ ಖಾತಾ ಮಾಡಿಸಿಕೊಂಡಿದ್ದರಂತೆ. ([illegible] 937/1907-08, ಬುಕ್ ಸಂ. 1)

[illegible] ಸದರಿ ಆಸ್ತಿಯನ್ನು ಮಾರಾಟ ಮಾಡುವಾಗ ಇದನ್ನು [illegible]ಗಳಾಗಿ ವರ್ಗೀಕರಿಸಲಾಗಿತ್ತು. ಸಿ.ಎಲ್. ಸೀತಾರಾಂ [illegible] ಪುತ್ರ ನರೇಂದರ್, ಪುತ್ರಿ ಜ್ಯೋತಿ ಬಳಿಗಿರಿ, ಸೀತಾರಾಂರ [illegible] ಸಿ.ಎಲ್. ಶೇಷಾದ್ರಿ, ಮತ್ತವರ ಪುತ್ರಿಯರಾದ ಶಿಲ್ಪಾ [illegible] ಸ್ವಾತಿ ಮತ್ತು ಸೀತಾರಾಂರವರ ಅಕ್ಕಗೆ ವಿಜಯಾ ಶ್ರೀಧರ [illegible] ಅಕ್ಕಿಯ ಮಕ್ಕಳಾದ ಮಧುಸೂದನ ಮತ್ತು ಮೀರಾ... [illegible] ಆ ವಿವಿಧ ಭಾಗಗಳಿಗೆ ಮಾಲೀಕರೆಂದು ದಾಖಲಿಸ [illegible]

ಹಿಂದೂ ಜಾಯಿಂಟ್ ಫ್ಯಾಮಿಲಿ (ಅವಿಭಕ್ತ ಕುಟುಂಬ) ಎಂದೇ ತೋರಿಸಿಕೊಳ್ಳುತ್ತ ಬಂದಿದ್ದ ಈ ಸೀತಾರಾಂ ಕುಟುಂಬ ವರ್ಗ ಕಳೆದ ವರ್ಷದ ಉತ್ತರಾರ್ಧದಲ್ಲಿಯೇ ಅಂದರೆ ಸೆಪ್ಟೆಂಬರ್ 12, 2005 ರಂದೇ ಈ ಚಂದ್ರಪ್ಪ-ಬಾಗೇಗೌಡರ ಸಿ.ಬಿ. ಅಸೋಸಿಯೇಟ್ಸ್ ಸಂಸ್ಥೆಯ ಜತೆಗೆ ಸೇಲ್ ಅಗ್ರಿಮೆಂಟ್ ಮಾಡಿಕೊಳ್ಳುತ್ತದೆ.

ಈ ಸೇಲ್ ಅಗ್ರಿಮೆಂಟು (ಮಾರಾಟ ಒಪ್ಪಂದ) ಎಲ್ಲಿ, ಯಾರ ಮನೆಯಲ್ಲಿ, ಯಾವತ್ತು ಮತ್ತು ಎಷ್ಟೊತ್ತಿಗೆ ಜರುಗಿತೆಂಬುದು ಸ್ವತಃ ಕುಮಾರಸ್ವಾಮಿಯವರಿಗೇ ಚೆನ್ನಾಗಿ ಗೊತ್ತೆಂಬುದು ಅವರ ಕುಟುಂಬದ ಹಿತೈಷಿಗಳ ಅಂಬೋಣ!


ಮುಂದೆ ಇನ್ನೇನು ಸದರಿ ಆಸ್ತಿಯ ರಿಜಿಸ್ಟ್ರೇಷನ್ ದಿನಾಂಕ ಹತ್ತಿರವಾಗುತ್ತಿದ್ದಂತೆಯೇ ಮಾರ್ಚ್ 1, ಮಾರ್ಚ್ 8 ಹಾಗು ಮಾರ್ಚ್ 15 ರಂದು ಈ ಸೀತಾರಾಮರ ಅವಿಭಕ್ತ ಕುಟುಂಬ ಇದ್ದಕ್ಕಿದ್ದಂತೆಯೆ ವಿಭಜನೆಗೊಂಡು ಬೇರೆ ಬೇರೆ [illegible] ನೊಂದಾಯಿಸಲಾಗುತ್ತದೆ...

ಹಾಗೆಯೇ ನಿಗದಿತ ದಿನವಾದ ಮಾರ್ಚ್ 16 [illegible]

ಒಟ್ಟು ಮಾರಾಟ ಮೌಲ್ಯ 75 ಕೋಟಿ?!

ಗುಪ್ತಾ ಮಾರ್ಕೆಟ್ ಕಟ್ಟಡ ಸಮುಚ್ಚಯದ ಮಾರಾಟದಿಂದ ಫಲಾನುಭವಿಗಳಾದವರು ಕೇವಲ ಸೀತಾರಾಂ ಕುಟುಂಬವೊಂದೇ ಅಲ್ಲ... ಆದರ ಇನ್ನೊಂದು ಭಾಗದ (ಶೇ. 55) ಮಾಲೀಕರಾದ ನರೋತ್ತಮ್ ಮತ್ತವರ ಕುಟುಂಬಕ್ಕೆ ಸುಮಾರು 20 ಕೋಟಿ ರೂಪಾಯಿ ಸಂದಾಯವಾಯಿತಂತೆ. ಅಲ್ಲಿಗೆ ಆಸ್ತಿಯ ಮೂಲ ಮಾಲೀಕರಿಗೆ ನೀಡಲಾದ ಒಟ್ಟು ಮೊತ್ತವೇ 38 ಕೋಟಿ ರೂಪಾಯಿ.

ಇಡೀ ಕಟ್ಟಡದ ತುಂಬ ಹರಡಿಕೊಂಡಿದ್ದ ಲೀಸುದಾರರು ಮತ್ತು ಸಬ್ ಲೀಸುದಾರರ ಪೈಕಿ ಗಣ್ಯರೆನಿಸಿದ ಹಾಜಿ ಜಾನಾ, ಟಿಪ್-ಟಾಪ್, ಕಾಮತ್ ರೆಸ್ಟೋರೆಂಟ್, ಐಶ್ವರ್ಯ ರೆಸ್ಟೋರೆಂಟ್, ಸಪ್ನಾ ಬುಕ್ ಸ್ಟಾಲ್, ಗುಪ್ತಾ ಟೆಕ್ಸ್‌ಟೈಲ್ಸ್ ಮುಂತಾದವರಿಗೆ ತಲಾ ಎರಡೆರಡು ಕೋಟಿಗಳಂತೆ ಸುಮಾರು 15 ಕೋಟಿ 'ಪರಿಹಾರ ಧನ' ನೀಡಲಾಗಿರುವುದೂ ಬಹಿರಂಗ ರಹಸ್ಯವೇ... ಈ ಪೈಕಿ ಗುಪ್ತಾ ಟೆಕ್ಸ್‌ಟೈಲ್ಸ್‌ನವರೇ ಅಲ್ಲಿ ತುಂಗಾ ಕಾಂಪ್ಲೆಕ್ಸ್ ಮತ್ತು ಮಾರುತಿ ಕಾಂಪ್ಲೆಕ್ಸ್ ಎಂಬ ಉಪಸಂಕೀರ್ಣಗಳನ್ನು ನಿರ್ಮಿಸಿ ನೂರಾರು ಅಂಗಡಿಗಳನ್ನು ಸಬ್‌ಲೀಸ್ ನೀಡಿದ್ದರು... ಬರ್ಮಾ ಬಝಾರ್, ಹಿಂದೂಸ್ತಾನ್ ಲಾಜ್, ಸಿಟಿ ಮಾಲ್‌ಗಳ ನ್ನಾಕ್ರಮಿಸಿಕೊಂಡಿದ್ದ ಸುಮಾರು 100 ಮಂದಿ ಬಾಡಿಗೆದಾರರನ್ನು ಖಾಲಿ ಮಾಡಿಸಲು ತಲಾ 15 ಲಕ್ಷದಂತೆ ಮತ್ತೊಂದು 15 ಕೋಟಿ ವಿತರಣೆಯಾಗಿದೆಯಂತೆ.




ಅಂದವಾಗಿ [illegible]


ಸಿದ್ಧು ವಿರುದ್ಧ ಬಿಜೆಪಿ ವಿಜಯಶಂಕರ್!!

ಗೌಡರ ಲಾಸ್ಟ್ ತಂತ್ರ?

ಬೆಳಗಾವಿಯಲ್ಲಿ ವಿಧಾನ ಮಂಡಲ ಅಧಿವೇಶನ ನಡೆದ ನಂತರ ರಾಜ್ಯದ ಸಮ್ಮಿಶ್ರ ಸರ್ಕಾರದ ಆಡಳಿತ ಯಂತ್ರ ಇನ್ನು ಕೇಂದ್ರೀಕೃತವಾಗಿರುವುದು ಮೈಸೂರು ಜಿಲ್ಲೆಯ ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದಲ್ಲಿ. ರಾಜ್ಯದ ರಾಜಕೀಯ ಬೆಳವಣಿಗೆಯಲ್ಲಿ ಮಾಜಿ ಉಪಮುಖ್ಯ ಮಂತ್ರಿ ಸಿದ್ಧರಾಮಯ್ಯ ಜೆಡಿಎಸ್ ತೊರೆದು ಕಾಂಗ್ರೆಸ್ ಪಕ್ಷಕ್ಕೆ ಸೇರಿದಾಗ ಸಹಜವಾಗಿ ತಮ್ಮ ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡಿದರು. ರಾಜೀನಾಮೆಯಿಂದ ತೆರವಾಗಿರುವ ಆ ಸ್ಥಾನಕ್ಕೆ ನಡೆಯಲಿರುವ ಉಪಚುನಾವಣೆಯನ್ನು ಜೆಡಿಎಸ್ ಮತ್ತು ಕಾಂಗ್ರೆಸ್ ಎರಡೂ ಪಕ್ಷಗಳು ಪ್ರತಿಷ್ಠೆಯ ಸವಾಲಾಗಿ ಸ್ವೀಕರಿಸಿವೆ. ಮುಖ್ಯಮಂತ್ರಿ ಎಚ್.ಡಿ. ಕುಮಾರಸ್ವಾಮಿಯಂತೂ ಈ ಚುನಾವಣೆಯನ್ನು ತಮ್ಮ ವೈಯಕ್ತಿಕ ಸೋಲು-ಗೆಲುವಿನ ಪ್ರಶ್ನೆ ಎಂದು ಭಾವಿಸಿದಂತಿದೆ.



ಹೀಗಾಗಿ, ಕೇವಲ ಒಂದು ಉಪ ಚುನಾವಣೆಗಾಗಿ ಮುಖ್ಯಮಂತ್ರಿಗಳು ತಮ್ಮ ಅಧಿಕಾರವನ್ನು ಬಳಸಿಕೊಂಡು, ಸರ್ಕಾರಿ ಯಂತ್ರವನ್ನು ದುರುಪಯೋಗ ಪಡಿಸಿಕೊಂಡು, ರಾಜ್ಯದ ಇತರೇ ಆಗುಹೋಗುಗಳನ್ನು ಮರೆತು, ಭರವಸೆಗಳ ಮಹಾಪೂರವನ್ನೇ ಹರಿಸುತ್ತಾ ಚಾಮುಂಡೇಶ್ವರಿ ಕ್ಷೇತ್ರವೇ ತಮ್ಮ ರಾಜಧಾನಿ ಎಂಬಂತೆ ವರ್ತಿಸುತ್ತಿರುವುದು ಮಾತ್ರ ಕರ್ನಾಟಕದ ಇತಿಹಾಸದಲ್ಲಿ ಪ್ರಥಮ.



ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಲಿಂಗಾಯತರು ಮತ್ತು ಒಕ್ಕಲಿಗರನ್ನು ಏಕಕಾಲಕ್ಕೆ ಒಲಿಸಿಕೊಳ್ಳುವ ಯತ್ನದಲ್ಲಿರುವ ಕುಮಾರಸ್ವಾಮಿ, ಒಂದೆಡೆ ಒಕ್ಕಲಿಗರ ಮಾವಿನಹಳ್ಳಿ ಸಿದ್ದೇಗೌಡರೇ ಕ್ಯಾಂಡಿಡೇಟ್ ಎಂದು ಪಠಿಸುತ್ತಲೇ, ಮತ್ತೊಂದೆಡೆ, ಮಾಜಿ ಪೊಲೀಸ್ ಕಮಿಷನರ್ ರೇವಣ್ಣಸಿದ್ಧಯ್ಯ, ಗುತ್ತಿಗೆದಾರ ಶಿವಬಸಪ್ಪ ಮತ್ತು ಮಾಜಿ ಶಾಸಕ ಗುರುಸ್ವಾಮಿಯವರ ಹೆಸರನ್ನು ತೇಲಿಬಿಡುತ್ತಾ, 'ಸುತ್ತೂರು ಬುದ್ಧಿಯವರು ಹೇಳಿದರೆ ಸಾಕು ನಿಮಗೆ ಟಿಕೆಟ್' ಎಂದು ರೀಲು ಸುತ್ತುತ್ತಿದ್ದಾರೆ.



ಆದರೆ ಸಿದ್ಧರಾಮಯ್ಯನವರ ಪರವಾಗಿ ನಂಜನಗೂಡು ಬೆಂಕಿ ಮಹದೇವ ಸುತ್ತೂರು ಸ್ವಾಮಿಗಳ ಸುತ್ತ ಭದ್ರವಾದ ಕೋಟೆ ನಿರ್ಮಿಸಿ ಕಾವಲು ನಿಂತಿದ್ದಾರೆ. ಸದ್ಯಕ್ಕೆ ಈಗ ಸಿದ್ಧರಾಮಯ್ಯನವರಿಗೆ ಸಿದ್ಧರಾಮಯ್ಯನವರೇ ಎದುರಾಳಿ. ಜಾತಿ ಕಾರಣವನ್ನು ಮುಂದಿಟ್ಟುಕೊಂಡು ಕಾಂಗ್ರೆಸ್ಸಿನ ಡಿ. ಮಾದೇಗೌಡ ಹಾಗು ಗೋಪಾಲಗೌಡ ಆಸ್ಪತ್ರೆಯ ಮಾಜಿ ಸಮಾಜವಾದಿ ಡಾ. ವಿಷ್ಣುಮೂರ್ತಿ ಗುಪ್ತ ಸಭೆಗಳನ್ನು ನಡೆಸುತ್ತಿದ್ದಾರೆ. ನಾಯಕ ಜನಾಂಗದ ಮತಗಳನ್ನು ಸೆಳೆಯಲು ಜೆಡಿಎಸ್ ಶಾಸಕ ಚಿಕ್ಕಮಾದು ಸಾರಥ್ಯ ವಹಿಸಿದ್ದಾರೆ. ಈ ಜನಾಂಗದ ಮತಗಳಿಗೆ ಕುಟುಂಬ ಒಂದಕ್ಕೆ ತಲಾ ಐದು ಸಾವಿರ ವ್ಯಾಪರಕ್ಕೆಂದು ಸಾಲ ನೀಡಲಾಗುವುದೆಂದು ಮುಖ್ಯಮಂತ್ರಿ ಕುಮಾರಸ್ವಾಮಿ ಘೋಷಿಸಿದ್ದಾರೆ. ಈ ಯೋಜನೆಯಿಂದ ರಮ್ಮನಹಳ್ಳಿ, ಉದ್ಬೂರು, ಇಲವಾಲ ಮತ್ತು ರಾಮನಹಳ್ಳಿಯಲ್ಲಿರುವ ಸುಮಾರು 40 ಸಾವಿರ ನಾಯಕ ಮತಗಳನ್ನು ಬುಟ್ಟಿಗೆ ಹಾಕಿಕೊಳ್ಳುವ ತಂತ್ರ ಅವರದು. ಆದರೆ ಸಿದ್ಧರಾಮಯ್ಯನವರಿಗೆ ನಾಯಕ ಮತಗಳನ್ನು ಕೊಡಿಸಲೇಬೇಕೆಂಬ ಹಠದಿಂದ ಮಾಜಿ ಸಚಿವ ಸತೀಶ್ ಜಾರಕಿಹೊಳಿ ಇಲ್ಲೇ ಬೀಡು ಬಿಟ್ಟಿದ್ದಾರೆ.


ಮಂಗಳೂರು-ಉಡುಪಿ ಜಿಲ್ಲೆಗಳು ಕೋಮು ಘರ್ಷಣೆಯಿಂದ ತತ್ತರಿಸುತ್ತಿದೆ. ಮೈಸೂರು ಜಿಲ್ಲೆಯ ಎಚ್.ಡಿ. ಕೋಟೆ ತಾಲ್ಲೂಕಿನ ತಾರಕ ಜಲಾಶಯದ ಗೇಟ್ ಮುರಿದು ರೈತರು ಕೋಟ್ಯಂತರ ರೂಪಾಯಿ ಆಸ್ತಿ ಕಳೆದುಕೊಂಡು ನಿರ್ಗತಿಕರಾಗಿದ್ದಾರೆ. ಇಂಥ ಪ್ರದೇಶಕ್ಕೆ ಭೇಟಿ ನೀಡದ, ಚಿಂತಿಸದ ಮತ್ತು ಚರ್ಚಿಸದ ಮುಖ್ಯಮಂತ್ರಿ ಎಚ್.ಡಿ. ಕುಮಾರಸ್ವಾಮಿ, ಸರ್ಕಾರದ ಪ್ರಧಾನ ಕಾರ್ಯದರ್ಶಿ ಮಾಲತಿ ದಾಸ್‌ರವರನ್ನೇ ಮೈಸೂರಿಗೆ ಕರೆಸಿ ಜಿಲ್ಲೆಯ ಅಭಿವೃದ್ಧಿಯ ಬಗ್ಗೆ ಅದರಲ್ಲೂ ವಿಶೇಷವಾಗಿ ಚಾಮುಂಡೇಶ್ವರಿ ಕ್ಷೇತ್ರದ ಬಗ್ಗೆ ಚರ್ಚಿಸುವುದು ಪ್ರಜಾಪ್ರಭುತ್ವದ ಅಣಕವಲ್ಲವೆ?

ಚಾಮುಂಡೇಶ್ವರಿ ಕ್ಷೇತ್ರದಲ್ಲಿದ್ದ ಕುರುಬ ಜನಾಂಗದ ಅಧಿಕಾರಿಗಳನ್ನು ಹುಡುಕಿ, ಹುಡುಕಿ ವರ್ಗಾ ಮಾಡುತ್ತಿರುವ ಸಮ್ಮಿಶ್ರ ಸರ್ಕಾರದ ತಂತ್ರ ಈಗ ಬಹಿರಂಗವಾಗಿದೆ. ಆರಂಭದಿಂದಲೂ ಲಿಂಗಾಯತ ಮುಖಂಡರನ್ನು ತುಳಿಯುತ್ತಲೇ ಬಂದ ದೇವೇಗೌಡರ ಕುಟುಂಬ ಈಗ ಪದೇಪದೇ ಲಿಂಗಾಯತ ಮಠಗಳಿಗೆ ಎಡತಾಕುತ್ತಿರುವುದು ಜನರ ಕಣ್ಣಿಗೆ ನಾಟಕದಂತೆ ಕಾಣುತ್ತಿದೆ. ಹಾಗೊಂದು ಪಕ್ಷ ಜಾತ್ಯತೀತ ಜನತಾದಳಕ್ಕೆ ಸೂಕ್ತವಾದ ಅಭ್ಯರ್ಥಿ ದೊರೆಯದಿದ್ದ ಪಕ್ಷದಲ್ಲಿ, ಭಾರತೀಯ ಜನತಾ ಪಕ್ಷದ ಮೈಸೂರು ಲೋಕಸಭಾ ಸದಸ್ಯ ಸಿ.ಎಚ್. ವಿಜಯಶಂಕರ್‌ರವರನ್ನು ನಿಲ್ಲಿಸಬಹುದು. ಜಾತಿಯಲ್ಲಿ ಕುರುಬರಾದ ವಿಜಯ್‌ಶಂಕರ್‌ರವರನ್ನು ಸಿದ್ಧರಾಮಯ್ಯನವರ ವಿರುದ್ಧ ನಿಲ್ಲಿಸಿ, ಸಮ್ಮಿಶ್ರ ಸರ್ಕಾರದ ಸಂಬಂಧ, ಮಹತ್ವ ಮತ್ತು ಸಿದ್ಧಾಂತದ ಬಗ್ಗೆ ಎರಡನೇ ರೌಂಡ್ ಕೊರೆಯಬಹುದೆಂಬುದು ಗೌಡರ 'ಲಾಸ್ಟ್' ಐಡಿಯ.

(4ನೇ ಪುಟದಿಂದ)

ಭಟ್ ಸತ್ತಿದ್ದಾರೆ ಮತ್ತು ದನದ ಮಾಂಸ ಕೊಂಡೊಯ್ಯುತ್ತಿದ್ದ ಟೆಂಪೊ ಮಹಿಳೆಯೊಬ್ಬಳಿಗೆ ಡಿಕ್ಕಿ ಹೊಡೆದಿದೆ.

ಗುರುವಾರ ಸಂಜೆ 7.45 ರಲ್ಲಿ ಮಂಗಳೂರಿನ ಬಿಜಯದಲ್ಲಿ ಮೌಲ್ವಿ ಅಬ್ದುಲ್ ಗಫೂರ್‌ರನ್ನು ಇರಿದು ಕೊಲ್ಲಲಾಯಿತು. ಬೈಕಿನಲ್ಲಿ ಬಂದ ಒಂದು ಗುಂಪು ಮಸೀದಿ ಹತ್ತಿರವೇ ಗಫೂರ್‌ರನ್ನು ಕಡಿದಿದ್ದಾರೆ. ಬಜಾಲ್‌ನಲ್ಲಿ ಮುಸ್ಲಿಮರ ಮನೆಗಳಿಗೆ ನುಗ್ಗಿ ಲೂಟಿ ಮಾಡಿ ಬೆಂಕಿ ಹಚ್ಚಲಾಯಿತು. ಚಿಪ್ಪಿನಮೊಗರು ಎಂಬಲ್ಲಿ ಮಸೀದಿಗೇ ನುಗ್ಗಿ ಮೂವರು ಮುಸ್ಲಿಮರ ಮೇಲೆ ಹಲ್ಲೆ ಮಾಡಲಾಗಿದೆ. ಸೂರಿಂಜೆ ಎಂಬಲ್ಲಿ ಇನ್ನೂರು ಜನರ ಒಂದು ಗುಂಪು ಶಾಂತಿ ಸಭೆ ರಾಜಿಗೆಂದು ಮುಸ್ಲಿಮರನ್ನು ಕರೆದು ಮಾತಾಡಿ ನಂತರ ಮನೆಗಳಿಗೇ ನುಗ್ಗಿ ಹಲ್ಲೆ ಮಾಡಿದೆ. ಇದರಿಂದ ರೊಚ್ಚಿಗೆದ್ದ ಮುಸ್ಲಿಂ ಯುವಕರು ತಿರುಗಿಸಿ ಹೊಡೆದಿದ್ದಾರೆ. ಈ ಶಾಂತಿ ಸಭೆ ನಾಟಕ ನಂತರ ಗಲಭೆ ನಡೆಸುವ ಭಜರಂಗಿಗಳ ಷಡ್ಯಂತ್ರ ಅಡ್ಯಾರ, ಪೂಂಜಾರ್ ಕಟ್ಟೆಗಳಲ್ಲೂ ನಡೆದಿದೆ.



ಹತ್ಯೆಯಾದ ಅಬ್ದುಲ್ ಗಫೂರ್

ಇವೆಲ್ಲಾ ನಡೆಯುತ್ತಿದ್ದಾಗ ಒಂದೋ ಪೊಲೀಸರೇ ಹಾಜರಿರುತ್ತಿರಲಿಲ್ಲ, ಒಂದು ವೇಳೆ ಇದ್ದರೂ ಮೂಕ ಪ್ರೇಕ್ಷಕರಂತಿರುತ್ತಿದ್ದರು. ಐದನೇ ತಾರೀಖು ಶುಕ್ರವಾರ ಸಂಜೆ ಸುರತ್ಕಲ್‌ನಲ್ಲಿ ಮೊಯಿನುದ್ದೀನ್ ಎಂಬುವರ ಹತ್ಯೆಗೆ ಕೆಲವರು ಪ್ರಯತ್ನಿಸಿದ್ದಾರೆ. 1998 ರ ಗಲಭೆಗಳನ್ನೂ ಕಣ್ಣಾರೆ ಕಂಡಿದ್ದ ಮೊಯಿನುದ್ದೀನ್ ತೀರಾ ಇತ್ತೀಚೆಗೆ ಕೆಲ ಹಿಂದೂ ಗುಂಪಿನವರ ವಿರುದ್ಧ ಕೋರ್ಟ್‌ನಲ್ಲಿ ಸಾಕ್ಷಿ ಹೇಳಿ ಬಂದಿದ್ದರು. ಅವರ ಮೇಲೆ ಹಲ್ಲೆಯಾಗುವಾಗ 'ಏನೋ ಸಾಕ್ಷಿ ಹೇಳ್ತೀಯಾ' ಎಂದೇ ಬೆದರಿಸಿ ಮಾರಣಾಂತಿಕವಾಗಿ ಹಲ್ಲೆ ನಡೆಸಿದ್ದಾರೆ.

ಇನ್ನೂ ನೂರ್ ಮಚ್ಚಲಿ, ವೀರಸಾಗರ ಪಡೀಲ್, ಕಾವೂರ್, ಕುತ್ತಾರು, ತೊಕ್ಕೊಟ್ಟು, ಕುದರೋಳಿಗಳಲ್ಲೂ ಮುಸ್ಲಿಮರನ್ನು ಬೇಟೆಯಾಡಲಾಗಿದೆ.

ಭಜರಂಗಿ ಪೊಲೀಸರು

ಕಳೆದ ನಾಲ್ಕು ದಿನಗಳ ದೊಂಬಿಯಲ್ಲಿ ಎದ್ದು ಕಾಣುವ ಅಂಶವೆಂದರೆ ಪೊಲೀಸ್ ವ್ಯವಸ್ಥೆಯ ನಿಷ್ಕ್ರಿಯತೆ. ಇದು ಕೇವಲ ನಿಷ್ಕ್ರಿಯತೆಯ ಪ್ರಶ್ನೆಯಲ್ಲ, ಮಂಗಳೂರು ಕಂಟ್ರೋಲ್ ರೂಂ ಪೊಲೀಸರನ್ನು ಬಿಟ್ಟರೆ ಉಳಿದಂತೆ ಬಹುತೇಕ ಲೋಕಲ್ ಪೊಲೀಸರು ಮುಸ್ಲಿಮರ ವಿರುದ್ಧ ಹಿಂದೂ ಫ್ಯಾಸಿಸ್ಟ್ ಗುಂಪುಗಳ ಪರ ನಿಲುವು ತೆಗೆದುಕೊಂಡಿದ್ದು ಎದ್ದು ಕಾಣುತ್ತಿತ್ತು.

ಸುರತ್ಕಲ್‌ನ ಮುಸ್ಲಿಮರ ಮೊಬೈಲ್ ಫೋನ್ ಅಂಗಡಿ ಲೂಟಿ ಮಾಡುತ್ತಿದ್ದ ಗುಂಪನ್ನು ಚೆದರಿಸುವ ಬದಲು ಅಲ್ಲಿದ್ದ ನೂರು ಮಂದಿ ಪೊಲೀಸರು ಮುಸ್ಲಿಮರಿದ್ದ ಏರಿಯಾದಲ್ಲಿ ಕಾವಲು ನಿಂತು ಯಾರೂ ಹೊರಬರದಂತೆ ನೋಡಿಕೊಂಡು ಲೂಟಿ ಸರಾಗವಾಗಿ ನಡೆಯುವಂತೆ ಮಾಡಿದ್ದಾರೆ. ಉಲ್ಲಾಳದಲ್ಲೂ ಚೆಡ್ಡಿಗಳ ಪರವಾಗೇ ಇದ್ದ ಪೊಲೀಸರು ನಂತರ ಇದನ್ನು ಪ್ರತಿಭಟಿಸಿದ ಮುಸ್ಲಿಂ ಯುವಕರು ಕಲ್ಲು ಹೊಡೆದರೆಂದು ಅಟ್ಟಿಸಿಕೊಂಡು ಹೋಗಿ ಮಸೀದಿಗೂ ನುಗ್ಗಿ ಟಿಯರ್ ಗ್ಯಾಸ್ ಹಾರಿಸಿದ್ದಾರೆ.

ಉಲ್ಲಾಳ ಸಮೀಪದ ಕೊಂಚಿಕ್ರಾಸ್‌ನಲ್ಲಿ ಕೆಲ ಪೊಲೀಸರೇ ಮುಖಕ್ಕೆ ಕಪ್ಪು ಬಟ್ಟೆ ಸುತ್ತಿಕೊಂಡು ಭಜರಂಗದಳದವರ ಜೊತೆ ಸೇರಿ ಮುಸ್ಲಿಮರ ಮೇಲೆ ಹಲ್ಲೆ ಮಾಡಿಬಿಟ್ಟರು. ಅಷ್ಟೇ ಅಲ್ಲ, ಬಂಟ್ವಾಳದ ಶಂಭೂರಿನಿಂದ ಬರುತ್ತಿದ್ದ ಭಜರಂಗದಳ ಕಾರ್ಯ... ಪೊಲೀಸ್ ವ್ಯಾನ್‌ನಲ್ಲೇ ಕರೆದೊಯ್ದು ಗಲಭೆ ... ಉಲ್ಲಾಳ ಕ್ರಾಸಿಗೆ ಒಯ್ದು ಬಿಟ್ಟು ಬಂದಿದ್ದಾರೆ ಗೃಹ... ಪ್ರಕಾಶರ ಪೊಲೀಸರು.

ಮಂಗಳೂರಿನ ಬಂದರ್‌ನಲ್ಲಂತೂ ... ಸಾವಿರದಷ್ಟು ಗುಂಪು ಸೇರಿದ್ದ ಹಿಂದೂತ್ವವಾದಿಗ... ಚೆದುರಿಸಲು ಹೋಗದೇ ಮತ್ತೊಂದು ತುದಿ... ತುದಿಯಲ್ಲಿ ಗುಂಪಾಗಿ ನಿಂತಿದ್ದ ಮುಸ್ಲಿಮರ ... ಮಾತ್ರ ಲಾಠಿ ಚಾರ್ಜ್ ಮಾಡಿಬಿಟ್ಟರು.

ಒಟ್ಟಾರೆ ಕರಾವಳಿ ಪೊಲೀಸರು ಕಾನೂನು-... ಪಾಲನೆ ನಿರ್ಲಕ್ಷಿಸಿ, ಸಂವಿಧಾನದ ಆಶಯಗಳನ್ನು ... ಮಾಡಿಕೊಂಡು ಭಜರಂಗಿಗಳ ಬಾಲಬಡು... ವರ್ತಿಸಿದ್ದು ಒಂದು ಹೊಸ ಅಪಾಯ... ಬೆಳವಣಿಗೆಯಾಗಿದೆ. ಸಚಿವ ನಾಗರಾಜ ಶೆ... ಶಿಕ್ಷಣ ಸಂಸ್ಥೆಗೆ ಸೇರಿದ ವ್ಯಾನೊಂದರಲ್ಲಿ ಮಾ... ಆಯುಧಗಳು ಸಿಕ್ಕರೂ ಬಿಟ್ಟುಕಳಿಸಿದ್ದೂ ... ಪೊಲೀಸರೇ.

ಬಂಟ್ವಾಳದ ಎಸ್‌ಐ ... ಗ್ರಾಮಾಂತರದ ಸುದರ್ಶನ್, ಪೇದೆಗ... ಭರತ್, ಹರೀಶ್ ಗೌಡ, ಉದಯಕುಮ... ಸೋಗ್ಲೆ ಪೀಟರ್, ಜಯ, ಜಗ್ಗ ಹೆಗಡೆ ಇ... ಪ್ರಮುಖರು.

ಈ ಗಲಭೆಗಳು ಸ್ಫೋಟಗೊಂಡಾಗ ಜಿಲ್ಲೆ... ಸಾಕಷ್ಟು ಪೊಲೀಸ್ ಬಲ ಇರಲಿಲ್ಲ ಎಂಬುದು ... ಸತ್ಯವಾದರೆ ಇದ್ದ ಪೊಲೀಸರೂ ನಿಷ್ಕ್ರಿಯ... ಬಿಟ್ಟಿದ್ದರೆಂಬುದು ಇನ್ನೊಂದು ಕಹಿ ಸತ್ಯವಾಗಿದೆ.

ಗಲಭೆಗಳು ಶುರುವಾದ ಎರಡನೇ ... ಶಿವಮೊಗ್ಗಾದಿಂದ ಮೂರು ಪ್ಲೆಟೂನ್, ಶಿಗ್ಗಾಂವ್... ಏಳು ಹಾಗೂ ಗುಲ್ಬಾರ್ಗದಿಂದ ಐದು ಪ್ಲೆಟ... ಪೊಲೀಸರನ್ನು ಕರೆಸಲಾಯಿತು. ಇವೆಲ್ಲಾ ಸೇರಿದ... ಒಂದು ಸಾವಿರ ಪೊಲೀಸರಾಗುವುದಿಲ್ಲ, ಗಲಭೆ ... ವ್ಯಾಪಕವಾಗಿ ಕರಾವಳಿಯಾದ್ಯಕ್ಕೂ ಹರಡಿ ಹೋಗಿ...

ಹಾಲಿ ಕೋ-ಜಾ ಸರ್ಕಾರದ ಮುಖ್ಯಮಂತ್ರಿ ಹಾ... ಗೃಹಮಂತ್ರಿ ಜಾತ್ಯತೀತ ದಳದವರೇ ಆಗಿದ್ದಾರೆ. ... ದೇವೇಗೌಡ ಕೃಪಾಪೋಷಿತ ನಾಟಕ ಮಂಡಳಿ ... ಜಾತ್ಯತೀತತೆ ಇವರ ಸ್ಲೋಗನ್ ಅಷ್ಟೇ. ಆದರೆ ... ಬುಡನ್‌ಗಿರಿಯ ವಿಚಾರದಲ್ಲಿ ದೇವೇಗೌಡರ ಪಕ್ಷ ... ಪರಿವಾರದ ಪರವಾಗಿ ತೆಗೆದುಕೊಂಡಿರುವ ನಿಲುವು, ... ಮದ್ರಸಾಗಳ ಬಗ್ಗೆ ಕುಮಾರಸ್ವಾಮಿ ನೀಡಿದ್ದ ಹೇ... ಹಾಗೂ ಈಗಿನ ಕರಾವಳಿ ಗಲಭೆಗಳಲ್ಲಿ ಭಜರಂ... ಅಟ್ಟಹಾಸಕ್ಕೆ ನೇರ ಬೆಂಬಲ ನೀಡುತ್ತಿರುವ ದೇವೇಗೌ... ಪಕ್ಷ ಮುಂದೆ ಯಾವ ಹಾದಿ ಹಿಡಿಯಲಿದೆ ಎಂಬ... ಸ್ಪಷ್ಟವಾಗಿದೆ. ಕೋಮುವಾದಿಗಳೊಂದಿಗೆ ಅಪವಿತ್ರ ... ಮೂಲಕ ಅಧಿಕಾರ ಹಿಡಿದಿರುವ ದೇವೇಗೌಡರಿಗ... ಅಧಿಕಾರದ ಮೂಲಕ ಕರ್ನಾಟಕವನ್ನು ... ಮಾಡುತ್ತಿರುವ ಕುಮಾರಸ್ವಾಮಿಗೆ ಈಗ ಬೇಕಿರು... ಮುಸ್ಲಿಮರ ರಕ್ತ.

ಕರಾವಳಿಯ ನಿಲ್ಲದ ಗಲಭೆಗಳೇ ಇದಕ್ಕೆ ಸಾ...

ಕರ್ನಾಟಕದ ಪ್ರಗತಿಪರರು, ದಲಿತ ಹಿಂದು... ಎಚ್ಚೆತ್ತ ಜನ ಹಾಗೂ ಮುಸಲ್ಮಾನರು ಈ ... ಬೆಳವಣಿಗೆಗಳ್ನು ನಿರ್ಲಕ್ಷಿಸುವಂತಿಲ್ಲ.

ಮನೆ ಸುಟ್ಟು ಬೆಂಕಿ ಊರನ್ನು ಸುಡದಿರುತ್ತದೆ...

ರಾಜ್‌ಕುಮಾರ್‌ಗೆ ಧೋಖಾ!

(10ನೇ ಪುಟದಿಂದ)

ಅವರು ಜವಾಬ್ದಾರಿ ಹೊರಲು ಸಿದ್ಧರಿಲ್ಲ, ಕಂಠೀರವ ಸ್ಟುಡಿಯೋ ವಾರ್ತಾ ಇಲಾಖೆ ಉಸ್ತುವಾರಿಯಲ್ಲಿರುವುದರಿಂದ ಅವರಿಗೇ ಉಸ್ತುವಾರಿ ಕೊಡಿ ಎಂದು ಹೇಳಿದ್ದಾರಂತೆ. ಇನ್ನು ಧ್ಯಾನಮಂದಿರ. ಇದು ಯಾವುದೇ ಇಲಾಖೆಯ ವ್ಯಾಪ್ತಿ ಮತ್ತು ಪರಿಧಿಗೆ ಬಾರದ ವಿಷಯವಾದುದರಿಂದ ಏನು ಮಾಡಬೇಕೆಂದು ಯಾವುದೇ ಅಧಿಕಾರಿಗೆ ತೋಚಿಲ್ಲ, ಗ್ರಂಥಾಲಯಕ್ಕೇನೋ ಒಂದು ಇಲಾಖೆ ಇದೆ. ಆದರೆ ಅದರಲ್ಲಿ ಯಾವ ಗ್ರಂಥ, ಎಷ್ಟು ಸಂಖ್ಯೆ ಯಾವುದೂ ತೀರ್ಮಾನವಾಗಿಲ್ಲ, ಅಸಲಿಗೆ ಈ ಯೋಜನೆಗಳಿಗೆಲ್ಲಾ ಜಾಗ ಯಾವುದು ಎಂಬುದು ದೊಡ್ಡ ಸಮಸ್ಯೆ. ಸಧ್ಯ! "ಈ ಸಮಸ್ಯೆಗಳಿಗೆಲ್ಲ ನಾನು ಡಾ.ರಾಜ್ ಮನೆಯಲ್ಲಿ ಮಲಗುವುದೇ ಪರಿಹಾರ" ಎಂದು ಕುಮಾರಸ್ವಾಮಿ ಹೇಳದಿದ್ದರೆ ಅದೃಷ್ಟ.

ಅಕ್ಟೋಬರ್ 30ರ ಒಳಗಾಗಿ ರಾಜ್ ಸಮಾಧಿ ಸ್ಥಳದ ಬಗ್ಗೆ ಸರ್ಕಾರ ಸೂಕ್ತ ನಿರ್ಧಾರ ಕೈಗೊಳ್ಳದಿದ್ದಲ್ಲಿ ರಾಜಾಜಿನಗರ ಬಂದ್ ಆಚರಿಸಿ ಉಗ್ರ ಪ್ರತಿಭಟನೆ ನಡೆಸಲಾಗುವುದೆಂದು ಕಾಂಗ್ರೆಸ್ ಮುಖಂಡ ಆರ್.ವಿ. ಹರೀಶ್, ರಾಜಾಜಿನಗರದ ಸಾಂಸ್ಕೃತಿಕ ಮತ್ತು ಕ್ರೀಡಾ ಸಂಘದ ರಾಜಶೇಖರ್ ಮತ್ತು ಆನಂದ್ ಸರ್ಕಾರಕ್ಕೆ ಪತ್ರ ಬರೆದು ಎಚ್ಚರಿಸಿದ್ದಾರೆ. ಇವರೊಂದಿಗೆ ಇದೇ ಬಡಾವಣೆಯ ಇನ್ನೂ ಇಪ್ಪತ್ಮೂರು ಕನ್ನಡ ಪರ ಸಂಘಟನೆಗಳು ದನಿಗೂಡಿಸಿವೆ.

ಇದೇ ಸಂದರ್ಭದಲ್ಲಿ ಅಕ್ಟೋಬರ್ 28ರ ಒಳಗಾಗಿ ಡಾ.ರಾಜ್ ಪುತ್ಥಳಿಯನ್ನು ಅನಾವರಣಗೊಳಿಸುವುದಾಗಿ ಮಹಾನಗರ ಪಾಲಿಕೆಯ ಆಡಳಿತ ಪಕ್ಷದ ನಾಯಕ ರವೀಂದ್ರ ಹೇಳಿದ್ದಾರೆ. ಆದರೆ ಅವರು ಪುತ್ಥಳಿ ಅನಾವರಣಕ್ಕೆ ಆಯ್ಕೆ ಮಾಡಿಕೊಂಡಿರುವ ಜಾಗ ರವೀಂದ್ರ ಕಲಾಕ್ಷೇತ್ರ ಮತ್ತು ಟೌನ್ ಹಾಲ್ ನಡುವಿನ ಆವರಣ, ಕನ್ನಡ ಸಂಸ್ಕೃತಿ ಇಲಾಖೆಯ ಸ್ವತ್ತೆಂಬ ತಗಾದೆ ಎದ್ದಿದೆ.

ಈ ಬೆಳವಣಿಗೆಯಿಂದ ರಾಜ್ ಅಭಿಮಾನಿಗಳಷ್ಟೇ ಅಲ್ಲ ರಾಜ್ ಕುಟುಂಬವೂ ಬೇಸತ್ತಿರುವುದು ಸ್ಪಷ್ಟ. ಆದರೆ ಅವರಿಗಿದು ಬಿಸಿ ತುಪ್ಪ, ಒಂದೆಡೆ ಸರ್ಕಾರ ರಾಜ್ ಸಮಾಧಿ ಸ್ಥಳಕ್ಕೆ ಸೂಕ್ತ ಗೌರವ ನಿರ್ಮಿಸುವ ಜವಾಬ್ದಾರಿ ಹೊತ್ತಿದೆ. ಆದರೆ ಅ... ಕೆಲಸ ನಿಂತಿದೆ. ಈ ಕೆಲಸವನ್ನು ರಾಜ್ ಕುಟುಂ... ಮುಂದುವರಿಸಲು ಅದು ಸರ್ಕಾರಿ ಜಾಗ ಎಂಬ ತಾ... ಸಮಸ್ಯೆ ಅಡ್ಡಿಯಾಗಿದೆ. ಏಕೆಂದರೆ ಸದರಿ ಜಾಗ ಡಾ.ರಾ... ಸಮಾಧಿ ಸ್ಥಳಕ್ಕೆ ಮಂಜೂರಾಗಿರುವ ಬಗ್ಗೆ ಈವರೆಗೆ ಗೆ... ಪ್ರಕಟಣೆ ಹೊರಡಿಸಿ ಅದು ಅಧಿಕೃತಗೊಂಡಿಲ್ಲ. ... ಸಂದರ್ಭದಲ್ಲಿ ರಾಜ್ ಕುಟುಂಬ ಮತ್ತು ಅಭಿಮಾನಿ... ಏನು ಮಾಡಬೇಕು? ಮುಖ್ಯಮಂತ್ರಿ ಕುಮಾರಸ್ವಾಮಿ... ಉತ್ತರಿಸಬೇಕು?

ಕುಮಾರಣ್ಣನ ನಾಟಕದ ಮತ್ತೊಂದು ದೃಶ್ಯ

ಪತ್ರಿಕೆ ಮುದ್ರಣಕ್ಕೆ ಹೋಗುವ ವೇಳೆಗೆ (ಭಾನುವಾರ ಅಕ್ಟೋಬರ್ 8) ಮುಖ್ಯಮಂತ್ರಿ ಎಚ್.ಡಿ. ಕುಮಾರಸ್ವಾಮಿ ಪತ್ನಿ ಸಮೇತರಾಗಿ ಡಾ. ರಾಜ್‌ಕುಮಾರ್‌ರವರ ಮನೆಗೆ ಭೇಟಿ ನೀಡಿ ಬಂದ ಸುದ್ದಿ ತಲುಪಿದೆ. ಕುಮಾರಸ್ವಾಮಿ ದಂಪತಿಗಳು ಶ್ರೀಮತಿ ಪಾರ್ವತಮ್ಮ ರಾಜ್‌ಕುಮಾರ್‌ರಾದಿಯಾಗಿ ಅವರ ಕುಟುಂಬದ ಸದಸ್ಯರನ್ನೆಲ್ಲಾ ಭೇಟಿಯಾಗಿದ್ದಾರೆ. ಇದೊಂದು ಸೌಜನ್ಯದ ಭೇಟಿಯೇ... ಡಾ. ರಾಜ್‌ಕುಮಾರ್ ಇಂಟರ್‌ನ್ಯಾಷನಲ್ ಹೋಟೆಲ್ ಉದ್ಘಾಟನಾ ಸಮಾರಂಭಕ್ಕೂ ಗೈರುಹಾಜರಾದ ಬಗ್ಗೆ ವಿಷಾದ ಅಥವಾ ಕ್ಷಮಾಪಣೆಯೆ ಅರ್ಥವಾಗಿಲ್ಲ.

ಆದರೆ ಮತ್ತೆ ಅದೇ ಹಳೇ ಪ್ಲೇಟನ್ನು ತಿರುವಿದ್ದಾರೆ. ಸಮಾಧಿ ಸ್ಥಳವನ್ನು ಶೀಘ್ರದಲ್ಲೇ ಅಭಿವೃದ್ಧಿಗೊಳಿಸುತ್ತೇನೆ, ಈ ಜವಾಬ್ದಾರಿಯನ್ನು ಡಾ. ರಾಜ್ ಕುಟುಂಬ ಸಂಪೂರ್ಣವಾಗಿ ನನಗೆ ವಹಿಸಿದೆ ಎಂದು ಅದೇ "ಹಾಡಿದ್ದೇ ಹಾಡು ಕಿಸಬಾಯಿ ದಾಸ" ಎಂಬಂತೆ ಮಾತನಾಡಿದ್ದಾರೆ. ಡಾ. ರಾಜ್ ವಿಧಿವಶರಾಗಿ ಆರು ತಿಂಗಳಾಯಿ... ಅಂತಹ ಮೇರು ಪುರುಷನ ಸಮಾಧಿ ಸ್ಥಳವನ್ನು ನಿರ್ಮಿಸಲು ಕಾಲ ... ಅದಕ್ಕೊಂದು ಸ್ಪಷ್ಟವಾದ ಯೋಜನೆಯನ್ನು ಮುಖ್ಯಮಂತ್ರಿಗಳು ಈ ಸಂದರ್ಭ... ಡಾ. ರಾಜ್ ಕುಟುಂಬದೊಂದಿಗೆ ಚರ್ಚಿಸಿಲ್ಲ.

ಎಲ್ಲಕ್ಕಿಂತ ಹೆಚ್ಚಾಗಿ "ಕೆಲವರು ಪ್ರಚಾರಕ್ಕಾಗಿ ಡಾ. ರಾಜ್‌ರವರ ಸಮಾಧಿ ಸ್ಥಳವನ್ನು ಅಭಿವೃದ್ಧಿಪಡಿಸುವುದಾಗಿ ಹೇಳಿಕೊಂಡಿದ್ದರು. ಅವರು ... ಮಾಡುತ್ತಾರೆಂದು ನಾವು ಇದುವರೆಗೂ ಕಾದು ನೋಡಬೇಕಾಯ್ತು. ಅದಕ್ಕೆ ವಿಳಂಬವಾಯ್ತು" ಎಂದು ಹಸಿ ಸುಳ್ಳನ್ನು ಹೇಳಿದರು. ಮುಖ್ಯಮಂತ್ರಿ ಕುಮಾರಸ್ವಾಮಿಯವರ ಡಾ. ರಾಜ್ ಕುಟುಂಬದ ಭೇಟಿ ಅವರ ರಾಜಕೀಯ ನಾಟಕದ ಮತ್ತೊಂದು ದೃಶ್ಯವೇ ಹೊರತು ಮತ್ತೇನೂ ಅಲ್ಲ.



ಚಿತ್ರದುರ್ಗ ಜಿ.ಪಂ. ಸದಸ್ಯ ವೆಂಕಟೇಶ್
ಪರಸ್ತ್ರೀ ಸಂಗ, ಪ್ರಾಣ ಭಂಗ

ಬಿಬಿಎಚ್ ಮೈನ್ಸ್‌ನ ಪ್ರಧಾನ ವ್ಯವಸ್ಥಾಪಕ, ಕಬೀರಾನಂದಾಶ್ರಮದ ಆಡಳಿತಾಧಿಕಾರಿ, ಜಿಲ್ಲಾ ಪಂಚಾಯ್ತಿ ಸದಸ್ಯ ಎಚ್. ವೆಂಕಟೇಶ್ ನೇಣು ಹಾಕಿಕೊಂಡು ಬರ್ಭರ ಅಂತ್ಯ ಕಂಡಿದ್ದಾರೆ. ಚಿತ್ರದುರ್ಗದ ಮಟ್ಟಿಗೆ ಇದೊಂದು ನಂಬಲಾಗದ, ಆಘಾತಕಾರಿ ವಿದ್ಯಮಾನವಾಗಿದೆ. ವೆಂಕಟೇಶ್ ಸಾವಿಗೀಡಾಗಿ ಒಂದು ವಾರ ಕಳೆಯುತ್ತಾ ಬಂದರೂ ಆತನ ಸಾವಿಗೆ ಕಾರಣವಾಗಿವೆಯೆನ್ನಲಾದ ಗಾಸಿಪ್‌ಗಳ ಚರ್ಚೆ ನಡೆಯುತ್ತಲೇ ಇದೆ. ಸಾರ್ವಜನಿಕವಾಗಿ ಇಮೇಜನ್ನು ಕಾಯ್ದುಕೊಂಡಿದ್ದ ವೆಂಕಟೇಶ್‌ಗೆ ಯಾರೊಂದಿಗೂ ಶತ್ರುತ್ವವೆಂಬುದೇ ಇರಲಿಲ್ಲ, ಆತನನ್ನು ಆತ್ಮಹತ್ಯೆಗೆ ದೂಡುವಂತಾ ರಾಜಕೀಯ ಬಿಕ್ಕಟ್ಟುಗಳಾಗಲೀ, ಆರ್ಥಿಕ ಸಂಕಷ್ಟಗಳಾಗಲೀ ಇರಲಿಲ್ಲ, ಹಾಗಾದರೆ ವೆಂಕಟೇಶ್ ನೇಣಿಗೆ ಕೊರಳೊಡ್ಡುವಂತಾ ಕಾರಣಗಳಾದರೂ ಏನಿದ್ದವು? ಇವತ್ತು ದುರ್ಗದ ರಾಜಕೀಯ ವಲಯಗಳಲ್ಲಿ ವೆಂಕಟೇಶ್ ಸಾವಿಗೆ ಕಾರಣವಾಗಿವೆಯೆಂಬ ಅಂಶಗಳಲ್ಲಿ ಆತನ ಹೆಣ್ಣು ಬಾಕತನವೇ ಮೇಲಿಂದ ಮೇಲೆ ಪ್ರಸ್ತಾಪಿಸಲ್ಪಡುತ್ತಿದೆ.

ಸದ್ದಿಲ್ಲದ ಬೆಳವಣಿಗೆ

ದೊಡ್ಡ ಸಿದ್ಧವನಹಳ್ಳಿಯ ಸಾಧಾರಣ ರೈತ ಕುಟುಂಬದ ಹಿನ್ನೆಲೆಯ ವೆಂಕಟೇಶ್ ಕೋಟ್ಯಂತರ ರೂಗಳ ಆಸ್ತಿಯ ಒಡೆಯನಾಗಿ ಬೆಳೆದದ್ದು, ರಾಜಕೀಯವಾಗಿ ಪ್ರಭಾವಿಯಾಗಿದ್ದು ಸೋಜಿಗದ ಸಂಗತಿಯೇ. ಬಿಬಿಎಚ್ ಮೈನ್ಸ್‌ನಲ್ಲಿ ಕೆಳಹಂತದ ನೌಕರನಾಗಿ ಎಂಟ್ರಿ ಪಡೆದು ಅದೇ ಕಂಪನಿಯ ಜನರಲ್ ಮ್ಯಾನೇಜರ್ ಹುದ್ದೆಯನ್ನಲಂಕರಿಸುವವರೆಗಿನ ಬೆಳವಣಿಗೆಯೆಲ್ಲಾ ಸದ್ದಿಲ್ಲದೇ ನಡೆದದ್ದು. ವೆಂಕಟೇಶ್ ಈ ಸ್ಥಾನಕ್ಕೆ ಬರಲು ಬೇಕಾದ ವಾಮ ಮಾರ್ಗಗಳನ್ನೆಲ್ಲಾ ಅನುಸರಿಸಿ ಕಂಪನಿಯ ಧಣಿಗಳನ್ನು ಸಂಪ್ರೀತಗೊಳಿಸಿದ್ದ. ಮೊದಲೆಲ್ಲಾ ಗಣಿ ಉದ್ಯಮದ ವಹಿವಾಟೆಂಬುದು ಈಗಿರುವ ರೀತಿಯಲ್ಲಿ ಕಣ್ಣು ಕುಕ್ಕುವಂತಹುದಾಗಿರಲಿಲ್ಲ, ಜಿಲ್ಲೆಯ ಯಾವ ರಾಜಕೀಯ ನಾಯಕನಿಗೂ, ವ್ಯಾಪಾರೋದ್ಯಮಿಗೂ ಗಣಿ ಉದ್ಯಮದ ಆಳ-ಅಗಲಗಳಾಗಲೀ, ಅದರ ವಹಿವಾಟಿನ, ಆದಾಯದ ಅಗಾಧತೆಯ ತಿಳುವಳಿಕೆಯಾಗಲೀ ಇರಲಿಲ್ಲ. ಹಾಗಾಗಿ ವೆಂಕಟೇಶ್ ದಾರಿಗೆ ಅಡ್ಡಗಾಲು ಹಾಕುವವರೇ ಇರಲಿಲ್ಲ. ಈತ ಮ್ಯಾನೇಜ್ ಮಾಡುತ್ತಿದ್ದ ಮೂಗುಬೊಟ್ಟಿನ ಲಿಂಕುಗಳು ವೆಂಕಟೇಶ್ ಮ್ಯಾನೇಜರ್ ಗಿರಿಯನ್ನು ಅಬಾಧಿತವಾಗಿ ಮುಂದುವರಿಸಿದ್ದವು.

ವೆಂಕಟೇಶ್ ಜೊತೆಗೆ ಚಂದ್ರಪ್ಪನೆಂಬ ಇನ್ನೊಬ್ಬ ಐನಾತಿಯೂ ಕೂಡಿಕೊಂಡು ಗಣಿ ದಂಧೆಯಲ್ಲಿ ಭರ್ಜರಿ ಭೋಜನಕ್ಕೆ ಶುರುವಿಟ್ಟುಕೊಂಡರು. ಕಳೆದ ಏಳೆಂಟು ವರ್ಷಗಳಿಂದ ಭೀಮಸಮುದ್ರದ ಸುತ್ತಲಿನ ರೈತರ ಜಮೀನುಗಳಿಗೆ ಬಿಡಿಗಾಸಿನ ರೂಪದ ಪರಿಹಾರ ಕೊಟ್ಟು ನೂರಾರು ಕೋಟಿ ರೂ. ಮೌಲ್ಯದ ಅದಿರನ್ನು ದೋಚಿದರು. ಅಸ್ತ್ರವಾಗಿ ಬಳಸಿಕೊಂಡು ಎಂಎಲ್‌ಎ, ಎಂಪಿ, ಜಿಲ್ಲಾ ಪಂಚಾಯ್ತಿ, ತಾಲ್ಲೂಕು ಪಂಚಾಯ್ತಿ, ಸಂಘ ಸಂಸ್ಥೆಗಳ ಮುಖಂಡರುಗಳಿಗೆಲ್ಲಾ ಕೊಡುಗೈ ದೊರೆಯಂತೆ ಗಣಿ ದಂಧೆಯಿಂದ ಹರಿದುಬರುತ್ತಿದ್ದ ಬಿಟ್ಟಿ ಹಣವನ್ನು ದಾನ ಮಾಡಿದ ವೆಂಕಟೇಶ್ ತನ್ನ ನಯನಾಜೂಕಿನ ನಡವಳಿಕೆಗಳಿಂದ ತನ್ನ ಬಗ್ಗೆ ವಿರೋಧ ಮಾಡುವಂತವರನ್ನೂ ತಣ್ಣಗೆ ಮಾಡುವ ಕಲೆ ಸಿದ್ಧಿಸಿಕೊಂಡಿದ್ದ, ತನ್ನ ಸಾರ್ವಜನಿಕ ಬದುಕಿನಲ್ಲಿ ಕಾಂಟ್ರೊವರ್ಸಿ, ಕನ್‌ಫ್ರಂಟೇಷನ್ ಎಂಬ ಪದಗಳಿಗೆ ಜಾಗವೇ ಇಲ್ಲದಂತೆ ನೋಡಿಕೊಂಡು ಪ್ರತಿಯೊಂದನ್ನೂ ನೈಸು.... ನೈಸಾಗಿಯೇ ನಿರ್ವಹಿಸುತ್ತಿದ್ದ, ತಾನೊಂದು ರಾಜಕೀಯ ಪಕ್ಷದಲ್ಲಿ ಸಕ್ರಿಯವಾಗಿದ್ದಾಗಲೂ ಉಳಿದ ರಾಜಕೀಯ ಪಕ್ಷಗಳ ನಾಯಕರ ಜೊತೆಗೂ ದೋಸ್ತಿ ಕುದುರಿಸಿಕೊಂಡು ಇಡೀ ಮೈನ್ಸು ದಂಧೆಯನ್ನು ವಿವಾದಾತೀತವಾಗಿ ನಿರಾತಂಕವಾಗಿ ಮುನ್ನಡೆಸುವ ತಂತ್ರಗಾರಿಕೆಯನ್ನು ಚೆನ್ನಾಗಿ ಕರಗತ ಮಾಡಿಕೊಂಡಿದ್ದರು. ಹೀಗೆ ತನ್ನ ಚಾಣಾಕ್ಷತೆಯಿಂದ ನಡೆಸುತ್ತಿದ್ದ ಮೈನ್ಸು ದಂಧೆಯಿಂದಲೇ ಕೋಟ್ಯಾಧೀಶನಾಗಿದ್ದ ವೆಂಕಟೇಶ್ ಚಿತ್ರದುರ್ಗ ಜಿಲ್ಲೆಯ ಘಟಾನುಘಟಿಗಳಿಗೇ ಆರ್ಥಿಕವಾಗಿ, ರಾಜಕೀಯವಾಗಿ ಸೆಡ್ಡು ಹೊಡೆಯುವಷ್ಟು ಪ್ರಬಲವಾಗಿ ಬೆಳೆದಿದ್ದ.

ಮಠಮಾನ್ಯಗಳ ಸಖ್ಯ

ಸಾರ್ವಜನಿಕವಾಗಿ ಉತ್ತಮ ರಾಜಕೀಯ ಇಮೇಜನ್ನು ಬೆಳೆಸಿಕೊಳ್ಳುವ ಹಂಬಲವಿದ್ದ ವೆಂಕಟೇಶ್ ಮಠಮಾನ್ಯಗಳ ನೆರವು ಆಶ್ರಯ ಅತ್ಯಗತ್ಯವೆಂಬುದನ್ನು ಮನಗಂಡಿದ್ದ. ಕಬೀರಾನಂದ ಆಶ್ರಮದ ಸೆಕ್ರಟರಿಗಿರಿ ಆತನಿಗೆ ಇಂತಹದೊಂದು ಸರಳ ರಾಜಕೀಯ ತಂತ್ರಗಾರಿಕೆಯ ಪಾಠವನ್ನು ಕಲಿಸಿತ್ತು. ದಂಧೆಯಲ್ಲಿ ಗಳಿಸಿದ್ದ ಬಿಟ್ಟಿ ಹಣವನ್ನು ಆ ಮಠ ಈ ಮಠವೆಂಬ ತಾರತಮ್ಯವಿಲ್ಲದೆ ಬಹುತೇಕ ಮಠಗಳಿಗೆ ಕಾಣಿಕೆಯ ರೂಪದಲ್ಲಿ ಪೂರೈಸುತ್ತಿದ್ದ. ಆರ್ಥಿಕವಾಗಿ ದುರ್ಬಲವಾಗಿದ್ದ ಕಬೀರಾನಂದಾಶ್ರಮಕ್ಕೆ ಎಲ್ಲಾ ರೀತಿಯಲ್ಲೂ ಚೈತನ್ಯ ನೀಡಿದ್ದು ವೆಂಕಟೇಶ್ ಮೊಬಲೈಸು ಮಾಡುತ್ತಿದ್ದ ಹಣವೇ. ಚಿತ್ರದುರ್ಗದ ಶ್ರೀ ಮುರುಘರಾಜೇಂದ್ರ ಬೃಹನ್ಮಠದೊಂದಿಗೂ ತೋರಿಕೆಯ ಸಂಬಂಧ ಗಳಿಸಿಕೊಂಡಿದ್ದ ವೆಂಕಟೇಶ್, ನಿಜವಾದ ಅರ್ಥದಲ್ಲಿ ರಾಜಕೀಯ ಮತ್ತು ಗಣಿ ಉದ್ಯಮದ ಕಾರಣಕ್ಕೇ ಆಶ್ರಯಿಸಿದ್ದುದು ಸಿರಿಗೆರೆಯ ಬೃಹನ್ಮಠವನ್ನೇ. ಈ ಕಾರಣಕ್ಕಾಗಿಯೇ ವೆಂಕಟೇಶ್ ಕಳೆದ ಜಿಲ್ಲಾ ಪಂಚಾಯ್ತಿ ಚುನಾವಣೆಯಲ್ಲಿ ಸಿರಿಗೆರೆ ಕ್ಷೇತ್ರದಿಂದ ಅನಾಯಾಸವಾಗಿ ಗೆದ್ದರು. ರಾಜಕೀಯವಾಗಿಯೂ ಮಹತ್ವಾಕಾಂಕ್ಷೆಗಳನ್ನಿರಿಸಿಕೊಂಡಿದ್ದ ವೆಂಕಟೇಶ್ ಕಬೀರಾನಂದಾಶ್ರಮದ ಸೆಕ್ರೆಟರಿಗಿರಿಯ ಕಾರಣದಿಂದಾಗಿ ಆದಿಚುಂಚನಗಿರಿ ಮಠದ ಬಾಲಗಂಗಾಧರನಾಥ ಸ್ವಾಮಿಗಳೊಂದಿಗೂ ಸಖ್ಯ ಬೆಳೆಸಿದ್ದಲ್ಲದೇ ವಿಧಾನ ಪರಿಷತ್‌ನ್ನು ಪ್ರವೇಶಿಸುವ ಪ್ರಯತ್ನ ನಡೆಸುತ್ತಿದ್ದರು. ಚಿತ್ರದುರ್ಗದಲ್ಲಿ ನೆಲೆ ಕಂಡುಕೊಳ್ಳುತ್ತಿದ್ದ ಹಿಂದುಳಿದ ಜಾತಿಗಳ ಮಠಗಳ ನಿರ್ಮಾಣಕ್ಕಾಗಿ ಹಣಕಾಸು ನೆರವು ನೀಡುವ ಭರವಸೆಯನ್ನೂ ನೀಡಿದ್ದರು.

ಮಾಜಿ ಸಚಿವ ತಿಪ್ಪೇಸ್ವಾಮಿಯವರ ಅಧಿಕಾರವಧಿಯಲ್ಲಿ ಚಿತ್ರದುರ್ಗ ನಗರಾಭಿವೃದ್ಧಿ ಸದಸ್ಯನಾಗಿ ನಾಮ ನಿರ್ದೇಶನಗೊಂಡಿದ್ದ ವೆಂಕಟೇಶ್ ನಂತರ ರಾಜಕೀಯವಾಗಿ ಗಾಡ್‌ಫಾದರುಗಳನ್ನಾಗಿ ಆಯ್ಕೆ ಮಾಡಿಕೊಂಡಿದ್ದು ಭೀಮಸಮುದ್ರದ ಅಡಿಕೆ ಧಣಿಗಳನ್ನೇ. ಅದರಲ್ಲೂ ಬಿ.ಟಿ. ಚನ್ನಬಸಪ್ಪನ ಜೊತೆ ಗಳಸ್ಯ-ಕಂಠಸ್ಯ ಸಂಬಂಧ ಕುದುರಿಸಿಕೊಂಡಿದ್ದ. ಬಿ.ಟಿ.ಸಿ. ಕೆಲ ಹಣಕಾಸು ವ್ಯವಹಾರಗಳು ಹಾಗೂ ಮೋಜು ಮಜಾ ಸಂಬಂಧಿ ಕಾರಣಗಳಿಗಾಗಿ ವೆಂಕಟೇಶ್‌ರನ್ನು ಬಹಳ ಹಚ್ಚಿಕೊಂಡಿದ್ದರೆಂಬ ರೂಮರುಗಳು ಪುಂಖಾನು ಪುಂಖವಾಗಿ ಹರಿದಾಡಿದ್ದವು.

ಮುಳುವಾದ ಹೆಣ್ಣು ಬಾಕತನ

ಸಾರ್ವಜನಿಕವಾಗಿ ಕೊಡುಗೈ ದೊರೆಯಾಗಿ, ಸಜ್ಜನನಂತೆ ತನ್ನನ್ನು ಪ್ರಕಟಪಡಿಸಿಕೊಂಡಿದ್ದ ವೆಂಕಟೇಶ್‌ಗೆ ಹೆಣ್ಣು ಬಾಕತನವೆಂಬ ದೌರ್ಬಲ್ಯ ಹೆಗಲೇರಿತ್ತು. ಇಂತಾ ಹಿನ್ನೆಲೆಯ ಸಂಬಂಧದಿಂದಲೇ ಹೊಳಲ್ಕೆರೆ ರಸ್ತೆಯ ಬಿ.ಎಸ್.ವಿ.ಕೆ ಲೇಔಟ್‌ನಲ್ಲಿ ಜ್ಞಾನಭಾರತಿ ಶಾಲೆಯ ಸಮೀಪ ಒಬ್ಬಾಕೆಗೆ ಲಕ್ಷಾಂತರ ರೂ. ಬೆಲೆ ಬಾಳುವ ಭವ್ಯ ಬಂಗಲೆಯನ್ನು ಕಟ್ಟಿಸಿಕೊಟ್ಟಿದ್ದ. ಜೊತೆಗೆ ಜಿಲ್ಲಾ ಪಂಚಾಯ್ತಿ ಸದಸ್ಯೆಯೊಬ್ಬಾಕೆಗೂ ಮನೆ ಕಟ್ಟಿಸಿ, ಆಕೆಯೊಂದಿಗೆ ಹೊತ್ತಲ್ಲದ ಹೊತ್ತಿನಲ್ಲಿ, ಕಾಣಬಾರದ ಸ್ಥಳದಲ್ಲಿ ಕಾಣ ಸಿಗುತ್ತಿದ್ದ. ಈ ಕಾರಣಕ್ಕಾಗಿ ವೆಂಕಟೇಶ್ ಮತ್ತು ಆತನ ಪತ್ನಿ ಶಾಂತಾಳ ನಡುವೆ ಆಗಾಗ್ಗೆ ಜಗಳ ನಡೆಯುತ್ತಿದ್ದು, ತೀರಾ ಇತ್ತೀಚೆಗೆ ಇವರಿಬ್ಬರ ಮಧ್ಯೆ ವಿರಸದ ಕಂದಕವೇ ನಿರ್ಮಾಣವಾಗಿತ್ತೆಂದು ಹತ್ತಿರದವರು ಹೇಳುತ್ತಾರೆ.

ಹೊರಗೆ ಅನೇಕ ಸಂಬಂಧಗಳಿದ್ದರೂ, ಕುಟುಂಬದ ಮಟ್ಟಿಗೆ ಪಕ್ಕಾ ಸಂಸಾರಿಯಂತಿದ್ದ ವೆಂಕಟೇಶ್, ಪತ್ನಿಯ ಈ ಮುನಿಸಿನಿಂದ ಮಾನಸಿಕವಾಗಿ ಕುಗ್ಗಿದ್ದನೆ? ಉಳ್ಳವರ ಇಂತಹ ತೆವಲುಗಳನ್ನು ಔದಾರ್ಯದಿಂದ, ವೈಭವೀಕರಿಸಿ ನೋಡುವವರು ಇಲ್ಲದಿಲ್ಲ, 'ವೆಂಕಟೇಶ್‌ಗೆ ವೀಕ್‌ನೆಸ್ ಇದ್ರೂ ಯಾರಿಗೂ ಅನ್ಯಾಯ ಮಾಡ್ಲಿಲ್ಲ, ಅವರಿಗೆಲ್ಲಾ ಒಳ್ಳೆ ವ್ಯವಸ್ಥೆ ಮಾಡಿಕೊಟ್ಟಿದ್ದಾನೆ' ಎಂಬ ಸಮರ್ಥನೆಗಳಿಗೇನೂ ಬರವಿಲ್ಲ, ಆದರೆ ಇಂತಹ ಸಂಬಂಧಗಳ ಹಿನ್ನೆಲೆಯೇ ಆತನನ್ನು ನೇಣು ಕುಣಿಕೆಯ ಹತ್ತಿರ ತಳ್ಳಿತು ಎಂಬುದೂ ಕೂಡಾ ವಿಪರ್ಯಾಸಕರ. ವೆಂಕಟೇಶ್‌ನ ಆರು ಜನ ಸಹೋದರರು ಕೂಡ ಇಂತದೇ ಅಸಹಜ ಸಾವುಗಳಿಗೆ ಬಲಿಯಾಗಿದ್ದಾರೆ. ಒಂದಿಬ್ಬರು ನೇಣು ಹಾಕಿಕೊಂಡಿದ್ದರೆ, ಒಂದಿಬ್ಬರು ವಿಷ ಕುಡಿದು ಸತ್ತಿದ್ದಾರೆನ್ನಲಾಗುತ್ತಿದೆ. ಆತನ ವೆಂಕಟೇಶನ ಕುಟುಂಬದವರಿಗೆ ಆತ್ಮಹತ್ಯೆ ಪ್ರವೃತ್ತಿ ಅನುವಂಶೀಯವೆ? ಈ ಸಾವುಗಳಿಂದ ಕಂಗೆಟ್ಟಿದ್ದ ವೆಂಕಟೇಶ ತಾನೂ ಸಾವಿಗೆ ಶರಣಾದನೆ?

ಚಿತ್ರದುರ್ಗದಲ್ಲಿ ಅತ್ಯಂತ ಅನಾಹುತಕಾರಿಯಾದ, ಅನೈತಿಕವಾದ, ವಾಮಮಾರ್ಗಗಳಿಂದ ರಾಜಕೀಯದಲ್ಲಿ ನೆಲೆಕಂಡುಕೊಳ್ಳುತ್ತಿರುವವರ ಮಧ್ಯೆ ಬೆಳೆಯುತ್ತಿದ್ದ ವೆಂಕಟೇಶ್‌ಗೆ ತನಗಿದ್ದ ದೌರ್ಬಲ್ಯದ ಹೊರತಾಗಿಯೂ ಜನರ ಕಷ್ಟಸುಖಗಳಿಗೆ ಸ್ಪಂದಿಸುವ ಮನಸ್ಸಿತ್ತೆಂಬುದನ್ನು ತಳ್ಳಿ ಹಾಕಲಾರದು. ಅಂತಹ ವೆಂಕಟೇಶ್‌ರನ್ನು ನೇಣು ಕುಣಿಕೆಯಿಂದ ಕೆಳಗಿಸಿದ ಮರುಕ್ಷಣದಿಂದಲೇ ಆತನ ವ್ಯಕ್ತಿತ್ವದ ಮರಣೋತ್ತರ ಮೌಲ್ಯಮಾಪನ ನಡೆದಿದೆ. ಇನ್ನು ಏನೊಂದು ಸಾರ್ವಜನಿಕ ಕಾಳಜಿಯಿಲ್ಲದ ಲೋಲುಪತೆಗೆ ಇಳಿದಿರುವ ರಾಜಕಾರಣಿಗಳ ಬಗ್ಗೆ ಜನ ಎಂತಹ ಅಭಿಪ್ರಾಯ ಹೊಂದಿರಬಹುದು? ಬಹುಶಃ ವೆಂಕಟೇಶ್ ಸಾವಿನ ಸುತ್ತ ನಡೆದಿರುವ ಚರ್ಚೆಗಳು ರಾಜಕಾರಣಿಗಳಿಗೆ ಒಳ್ಳೆಯ ಪಾಠವಾಗಬಹುದು.

-ವರದಿಗಾರ

ಆತ್ಮಹತ್ಯೆಗೆ ಇದೂ ಕಾರಣವೆ?


ಸಾಯುವ ಮುನ್ನ ವೆಂಕಟೇಶ್ ಒಂದು ಡೆತ್‌ನೋಟ್ ಬರೆದಿಟ್ಟಿದ್ದಾನೆ. "ನನಗೆ ತೀವ್ರವಾದ ಸಕ್ಕರೆ ಕಾಯಿಲೆ ಕಾಡುತ್ತಿದೆ. ಹುಲಿಯಂತೆ ಬದುಕಿದ ನಾನು ಈ ಕಾಯಿಲೆಯ ದೆಸೆಯಿಂದಾಗಿ ಇನ್ನೊಬ್ಬರ ಆಸರೆ, ಹಂಗಿನಲ್ಲಿ ಬದುಕಿರಲಾರೆ. ನನ್ನ ಮಕ್ಕಳನ್ನು ಚೆನ್ನಾಗಿ ಓದಿಸಿರಿ, ಅವರನ್ನ ಉತ್ತಮ ಪ್ರಜೆಗಳನ್ನಾಗಿ ರೂಪಿಸಿರಿ" ಇದಿಷ್ಟು ಪತ್ರದ ಸಾರಾಂಶ.

ಪತ್ರವನ್ನು ನೋಡಿದ ಯಾರಾದರೂ ಹೇಳಬಹುದು. ಸಾವಿಗೆ ಇದು ಕಾರಣರಲ್ಲ, ಸಕ್ಕರೆ ಕಾಯಿಲೆ ಗಂಜಿ ಆತ್ಮಹತ್ಯೆ ಮಾಡಿಕೊಂಡ ಪ್ರಕರಣ ಇದುವರೆಗೆ ಯಾರೂ ಕೇಳಿಲ್ಲ. ಸಾಯಲು ಇದೊಂದು ನೆಪ ಮಾತ್ರ. ಸಾಯುವುದೇ ಮೇಲು ಎಂದು ಸತಾಯಿಸುವಷ್ಟು ಭಯಂಕರವಲ್ಲ ಈ ಸಕ್ಕರೆ ಕಾಯಿಲೆ.

ಗುಲ್ಬರ್ಗಾದಲ್ಲೊಬ್ಬ ಪೊಲೀಸ್ ಜೇಮ್ಸ್ 'ಬಾಂಡ್'

ಹೆತ್ತವರು ಇವನಿಗೆ ಯಾವ ಗಳಿಗೆಯಲ್ಲಿ ಜೇಮ್ಸ್ ಮೆನಜಿಸ್ ಎಂದು ಹೆಸರಿಟ್ಟರೋ, ಈತ ಪೊಲೀಸ್ ಇಲಾಖೆ ಸೇರಿ ಖಾಕಿ ಬಟ್ಟೆ ತೊಡುತ್ತಿದ್ದಂತೆ ಜೇಮ್ಸ್ ಬಾಂಡ್ ರೀತಿ ಆಡಲು ಶುರು ವಿಟ್ಟುಕೊಂಡಿದ್ದಾನೆ. ಇದು ಗುಲ್ಬರ್ಗಾ ಶಹರದ ಅಶೋಕ ನಗರ ಪೊಲೀಸ್ ಠಾಣೆಯ ಸರ್ಕಲ್ ಇನ್ಸ್ ಪೆಕ್ಟರ್ ಜೇಮ್ಸ್ ಮೆನಜಿಸ್ ಎಂಬ ಖಾಕಿ ರೌಡಿಯ ಸಂಕ್ಷಿಪ್ತ ಪರಿಚಯ.

ಗುಲ್ಬರ್ಗಾ, ಬೀದರ್ ಮತ್ತು ರಾಯಚೂರು ಪೋಸ್ಟಿಂಗ್ಸ್ ಎಂದರೆ ಸರ್ಕಾರಿ ಅಧಿಕಾರಿಗಳು ಬೆಚ್ಚಿ ಬೀಳುತ್ತಾರೆ. ಅಂತಹದರಲ್ಲಿ ಈ ಜೇಮ್ಸ್ ಬಾಂಡ್‌ನನ್ನು ಇಂಥ ಗುಲ್ಬರ್ಗಾದಿಂದ ವರ್ಗಾಯಿಸಿದರೂ ರಿಬೌಂಡ್ ಆದ ಚೆಂಡಿನಂತೆ ಮತ್ತೆ ಗುಲ್ಬರ್ಗಾಕ್ಕೆ ಬಂದು ಬೀಳುತ್ತಾನೆ. ಏನಿದರ ಮರ್ಮ? ಈ ಒಂದೆ ಜೇಮ್ಸ್, ಚೌಕಿ ಪೊಲೀಸ್ ಠಾಣೆಯಲ್ಲಿ ಅಧಿಕಾರಿಯಾಗಿದ್ದ, ಹೇಳಿ ಕೇಳಿ ಚೌಕಿ ಪೊಲೀಸ್ ಠಾಣೆ ಎಂದರೆ ಆದಾಯಕ್ಕೆ ಮತ್ತೊಂದು ಹೆಸರು. ಇಲ್ಲಿ ತಿಗ್ಗಬಾರದ [illegible] ಕಡೆಯಿಂದೆಲ್ಲಾ ತಿಂದ ಜೇಮ್ಸ್‌ನನ್ನು ಟ್ರಾಫಿಕ್‌ಗೆ ಎತ್ತಂಗಡಿ ಮಾಡಲಾಯ್ತು. ಆದರೆ ಮೇಯಲು ಕೂತವನಿಗೆ ವ್ಯತ್ಯಾಸ ಕಾಣುವುದಿಲ್ಲ ಎಂದು ಅಲ್ಲೂ ಸಾಬೀತುಪಡಿಸಿದ ಜೇಮ್ಸ್‌ನನ್ನು ಮಡಿಕೇರಿಗೆ ವರ್ಗ ಮಾಡಲಾಯ್ತು. ಆದರೆ ಗುಲ್ಬರ್ಗಾದ ಆದಾಯದ ಮೂಲಗಳನ್ನು ಹುಡುಕಿ ಭದ್ರಪಡಿಸಿಕೊಂಡಿದ್ದ ಜೇಮ್ಸ್ ವರ್ಗ ರದ್ದುಪಡಿಸಿಕೊಂಡು ಶಾಶ್ವತವಾಗಿ ಗುಲ್ಬರ್ಗಾದಲ್ಲಿ ನೆಲೆಸಿದ್ದಾನೆ. ಮಂಗಳೂರಿನ ಮೂಲದ ಜೇಮ್ಸ್‌ಗೆ ಇಲ್ಲಿ ಆದಾಯದ ಮೂಲವಿರುವುದೂ ಮಂಗಳೂರು, ಶೆಟ್ಟರು, ರೈಗಳು ನಡೆಸುವ ಹೋಟೆಲ್, ಬಾರು ಮತ್ತು ಲಾಡ್ಜ್‌ಗಳಿಂದಲೇ. ನಗರದ ನಾಗಾರ್ಜುನ, ಕಪಿಲ ಮತ್ತು ಮಯೂರದಂತಹ ಕುಖ್ಯಾತ ಅಡ್ಡೆಗಳಿಂದ ಜೇಮ್ಸ್‌ಗೆ ಒಳ್ಳೆಯ ಆದಾಯವಿದೆ. ಅದೇ ರೀತಿ ಜೇಮ್ಸ್‌ನಿಂದ ಅಡ್ಡೆಗಳಿಗೆ ರಕ್ಷಣೆ ಇದೆ. ಇದೊಂದು ರೀತಿಯ ಕೊಡು-ಕೊಳ್ಳು ವ್ಯವಹಾರ.



ಇಂತಹ ವ್ಯಾಪಾರಸ್ಥ ಜೇಮ್ಸ್‌ನ ಪ್ರತಿಭೆ ಬೆಳಕಿಗೆ ಬಂದಿದ್ದು ಇಂದಿನ ಪಶುಸಂಗೋಪನ ಸಚಿವ ರೇವೂ ನಾಯ್ಕನ ಮಗನ ಸಾಂಸಾರಿಕ ಹಗರಣದಲ್ಲಿ, ಆಗಿನ್ನೂ ರೇವು ನಾಯಕ ಕೇವಲ ಶಾಸಕ. ಆತನ ಪುತ್ರ ಗಣೇಶ ನಾಯಕ, ಜಯಶ್ರೀ ಎಂಬಾಕೆಯನ್ನು ಪ್ರೀತಿಸಿ ವಿವಾಹ ವಾಗಿದ್ದ. ಅನಂತರ ಇವರಿಬ್ಬರ ನಡುವೆ ಸಂಬಂಧ ಸರಿಹೊಂದದೆ ಗಣೇಶ ನಾಯಕ, ಜೈಯಶ್ರೀಯನ್ನು ಬಿಟ್ಟುಬಿಟ್ಟ. ಹುಡುಗಿಯ ಮನೆಯವರು ಪೊಲೀಸರಿಗೆ ದೂರು ನೀಡಿದರು. ಆಗ ಚೌಕಿ ಪೊಲೀಸ್ ಠಾಣೆಯಲ್ಲಿ ಇನ್ಸ್‌ಪೆಕ್ಟರ್ ಆಗಿದ್ದ ಜೇಮ್ಸ್, ಗಣೇಶ್ ನಾಯಕನನ್ನು ಹಿಡಿದು ತಂದು ಠಾಣೆಯಲ್ಲಿ ಬಡಿದು ಕೇಸು ಜಡಿದು ಬಿಟ್ಟ. ಬಾಯಿಬಿಟ್ಟರೆ ಇನ್ನೆಲ್ಲಿ ಮರ್ಯಾದೆ ಹೋಗುತ್ತದೋ ಎಂದು ಅಂಜಿದ ಶಾಸಕರು ವಿಷಯವನ್ನು ದೊಡ್ಡದು ಮಾಡದೆ ಅಲ್ಲಿಗೆ ಬಿಟ್ಟರು.

ಇನ್ಸ್‌ಪೆಕ್ಟರ್ ಜೇಮ್ಸ್‌ಗೆ ಇದೇ ವರದಾನವಾಗಿ ಹೋಯ್ತು. "ಎಂಎಲ್‌ಎ ಮಗನ್ನೇ ಬಿಟ್ಟಿಲ್ಲಾ ನಾನು" ಅಂತಾ ಗಂಡಸ್ಸು ಅಂತ ಕೊಚ್ಚಿಕೊಂಡು ಕಂಡ ಕಂಡವರಿಗೆಲ್ಲಾ ಗೂಸ ಇಕ್ಕತೊಡಗಿದ. ಇತ್ತೀಚೆಗಂತು ಈ ಧೈಲಾಗಿಗೊಂದು ಪ್ರಮೋಶನ್ ಬಂದು. "ಮಿನಿಸ್ಟರ್ ಮಗನ್ನೇ ಬಿಟ್ಟಿಲ್ಲಾ ಚಚ್ಚಿದ್ದೀನಿ" ಎಂದು ಹೇಳಿ ಕೊಂಡು ಓಡಾಡುತ್ತಿದ್ದಾನೆ. ಪಾಪ ರೇವು ನಾಯ್ಕ ಬಾಯಿ ಬಿಟ್ಟು ಕೊಂಡು ನೋಡುತ್ತಿದ್ದಾರೆ. ಯಾಕೆಂದರೆ ಜಿಲ್ಲಾ ಉಸ್ತುವಾರಿ ಸಚಿವ ದರ್ಶನಾಪೂರ ಇನ್ಸ್‌ಪೆಕ್ಟರ್ ಜೇಮ್ಸ್‌ನ ಬಾಂಡ್ ಕೃತ್ಯಗಳನ್ನು ಕಂಡೂ ಕಾಣದಂತೆ ಕೂತಿದ್ದಾರೆ. ಇವರ ಹೆಸರು ಮಾತ್ರ ದರ್ಶನಾಪುರ, ಆದರೆ ಇಂತದ್ಯಾವುದೂ ಇವರಿಗೆ 'ದರ್ಶನ' ವಾಗುವುದೇ [illegible]

-ಶಿವ

ಕೋಲಾರ ಡಿಸಿಸಿ ಬ್ಯಾಂಕ್ ದಿವಾಳಿ

ಕೋಲಾರ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕು ಸಂಪೂರ್ಣ ದಿವಾಳಿಯಾಗಿ ಬಕ್ಕ ಬೋರಲು ಬಿದ್ದು ಹೋಗಿದೆ. ಕಳೆದ ಹತ್ತು ವರ್ಷದಿಂದ ಈ ಬ್ಯಾಂಕಿನ ಆಡಳಿತ ಚುಕ್ಕಾಣಿ ಹಿಡಿದಿದ್ದ ಅಧಿಕಾರಿಗಳು ಮತ್ತು ಚುನಾಯಿತ ಪ್ರತಿನಿಧಿಗಳು ಸೇರಿ ನಡೆಸಿದ ಪಂಕ್ತಿ ಭೋಜನದ ಫಲವೇ ಈ ದಿವಾಳಿಗೆ ಕಾರಣ. ಆದರೆ ಈ ಸತ್ಯವನ್ನು ಒಪ್ಪದ ಅಧಿಕಾರಿಗಳು ತಮ್ಮ ಅಂಗೈ ನಲ್ಲಿದ್ದ ಮೊಸರನ್ನು ಪಕ್ಕದಲ್ಲಿದ್ದ ರೈತರ ಬಾಯಿಗೆ ಒರೆಸಿ, ಸಾಲ ಪಡೆದ ರೈತರು ಸಾಲ ತೀರಿಸದಿದ್ದದ್ದೇ ದಿವಾಳಿ ಕಾರಣ ಎಂದು ರೈತರ ಮೇಲೆ ಗೂಬೆ ಕೂರಿಸುತ್ತಿದ್ದಾರೆ.

ಕೋಲಾರ ಜಿಲ್ಲೆಯ ರೈತಾಪಿಗಳ ಜೀವನಾಡಿ ಯಂತಿದ್ದ ಜಿಲ್ಲಾ ಸಹಕಾರ ಬ್ಯಾಂಕು ಈಗ 150 ಕೋಟಿ ನಷ್ಟದಿಂದ ತತ್ತರಿಸುತ್ತಿದೆ. ಸದಸ್ಯರು ಇಟ್ಟಿದ್ದ ಠೇವಣಿ ಹಣವನ್ನು ಹಿಂದಿರುಗಿಸಲಾರದ ಬ್ಯಾಂಕಿನವರು ತಾರಮಯ್ಯ ಎಂದು ಕೈಯಾಡಿಸು ತ್ತಿದ್ದಾರೆ. ಬ್ಯಾಂಕಿನ ಇಂದಿನ ಪರಿಸ್ಥಿತಿಯ ಸಂಪೂರ್ಣ ಕೀರ್ತಿ ಹಿಂದಿನ ವ್ಯವಸ್ಥಾಪಕ ನಿರ್ದೇಶಕರಾಗಿದ್ದ ನಜೀರ್ ಅಹಮದ್, ದೀಪಕ್‌ರಾಜ್, ರಾಜಣ್ಣ ಚನ್ನೇಗೌಡ ಮತ್ತು ಶಶಿಧರ್‌ರವರಿಗೆ ಸೇರಬೇಕು. ಇವರು ಉಂಡು, ಎಲೆ ಸಹಿತ ಬಾಚಿಕೊಂಡು ಹೋದ ಠೇವಣಿದಾರರ ಮೊತ್ತವೇ ಹತ್ತು ಕೋಟಿಗೂ ಮೀರಿದೆ. ಇನ್ನು ಬ್ಯಾಂಕಿನ ಇತರೇ ಸಿಬ್ಬಂದಿಗಳಾದ ಮುನಿರಾಜು, ವೆಂಕಟೇಶಗೌಡ, ಚಂದ್ರಪ್ಪ, ಕೃಷ್ಣೇಗೌಡ, ರೋಣೂರು ರಾಮಕೃಷ್ಣ ದ್ವಾರಸಂದ್ರ ನಾರಾಯಣಸ್ವಾಮಿ, ಮುಳಬಾಗಲು ಚಂದ್ರಪ್ಪ ಮತ್ತು ಶಿವಕುಮಾರ ತಮ್ಮ ಶಕ್ತ್ಯಾನುಸಾರ ನುಂಗಿ ಬ್ಯಾಂಕಿನ ದಿವಾಳಿಗೆ ತಮ್ಮ ಅಳಿಲು ಸೇವೆ ಸಲ್ಲಿಸಿದ್ದಾರೆ.



ದಿವಾಳಿ ಎದ್ದಿರುವ ಡಿಸಿಸಿ ಬ್ಯಾಂಕ್

ಇದರಲ್ಲಿ ಕೃಷಿಕರನ್ನು ಪ್ರತಿನಿಧಿಸುತ್ತಿದ್ದ ಬ್ಯಾಂಕಿನ ನಿರ್ದೇಶಕರುಗಳಾದ ಪಿ.ಬೈಯಣ್ಣ, ಪೀರಪ್ಪ ಮತ್ತು ಕರಿಯಪ್ಪ ಸಹ ಹಿಂದೆ ಬಿದ್ದಿಲ್ಲ. ಇವರ ಸ್ನೇಹಯಜ್ಞ ಬಯಲಿಗೆ ಬಂದಿದ್ದು ಸರ್ಕಾರ ರೈತರ ಕೃಷಿ ಸಾಲದ ಮೇಲಿನ ಬಡ್ಡಿ ಮನ್ನಾ ಮಾಡಿಸಿದ ಸಂದರ್ಭದಲ್ಲಿ. ಯಾವಾಗ ಬಡ್ಡಿ ಮನ್ನಾ ಘೋಷಣೆಯಾಯ್ತೊ ರೈತರು ಉತ್ಸಾಹದಿಂದ ಸಾಲ ಮರುಪಾವತಿ ಆರಂಭಿಸಿದರು. ಪ್ರಾಥಮಿಕ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕುಗಳಿಗೆ ರೈತರಿಂದ ಸಾಲದ ಅಸಲು ಹಣ ಹರಿದು ಬಂತು. ಆದರೆ, ಜಿಲ್ಲಾ ಸಹಕಾರ ಬ್ಯಾಂಕಿಗೆ ನಿಗದಿಯಾದಷ್ಟು ಸಾಲದ ಮರುಪಾವತಿಯಾಗಲೇ ಇಲ್ಲ. ಇದಕ್ಕೆ ಕಾರಣವೇನೆಂದು ಹುಡುಕುತ್ತಾ ಹೊರಟರೆ, ಹೂರಣ ಹೊರಬಂತು. ಬ್ಯಾಂಕಿನ ಆಡಳಿತ ಮಂಡಳಿ ಮತ್ತು ಅಧಿಕಾರಿಗಳಾದಿಯಾಗಿ ಬೋಗಸ್ ದಾಖಲೆ ಗಳು, ನಕಲಿ ಸಹಿ, ಹೆಬ್ಬೆಟ್ಟುಗಳನ್ನು ಸೃಷ್ಟಿಸಿ ಬೇನಾಮಿ ಹೆಸರುಗಳಲ್ಲಿ ಕೋಟ್ಯಂತರ ರೂಪಾಯಿ ಸಾಲ ಪಡೆದಿದ್ದರು.

ಬ್ಯಾಂಕಿನ ಅಧಿಕಾರಿಗಳಿಗೆ ಇದು ಗೊತ್ತಿದ್ದ ವಿಚಾರವೇ ಆಗಿದ್ದರಿಂದ, ಇದು ವಸೂಲಾಗದ ಸಾಲ ಎಂದು ಘೋಷಿಸಿ ತಣ್ಣಗೆ ಕೂತುಬಿಟ್ಟರು. ಇದೇ ಜಿಲ್ಲಾ ಸಹಕಾರ ಬ್ಯಾಂಕ್ ವ್ಯಾಪ್ತಿಗೆ ಬರುವ ತಟ್ನಹಳ್ಳಿ, ಚಿಕ್ಕ ಕುರುಗೋಡು, ಕದಿರಿಪುರ, ರೋಣೂರು ಮತ್ತು ಮೋತಕಪಲ್ಲಿ ಸೇರಿದಂತೆ ಮೂವತ್ತಕ್ಕೂ ಹೆಚ್ಚು ಸಹಕಾರ ಸಂಘಗಳಲ್ಲಿ ನಡೆದಿರುವ ಹಣ ದುರುಪಯೋಗ ಮೊತ್ತವೇ 90 ಕೋಟಿ ರೂಪಾಯಿಗೆ ಮೀರಿದೆ ಎಂದು ಆಡಿಟ್ ವರದಿಯ ಮೂಲಕ ಪತ್ತೆಯಾಗಿದೆ.

ಬಂಗಾರಪೇಟೆ ತಾಲ್ಲೂಕಿನ ತಟ್ನಹಳ್ಳಿ ಪ್ರಾಥಮಿಕ ವ್ಯವಸಾಯ ಸೇವಾ ಸಹಕಾರ ಸಂಘ ಜಿಲ್ಲಾ ಸಹಕಾರ ಬ್ಯಾಂಕಿನಿಂದ 2000-2001ರ ಸಾಲಿನಲ್ಲಿ ಬೆಳೆ ಸಾಲಕ್ಕಾಗಿ 80 ಲಕ್ಷ ರೂಪಾಯಿ ಪಡೆದಿತ್ತು, ಈ ಮೊತ್ತವು ಬೆಳೆಯುತ್ತಾ ಬಂದು ಈಗ 3 ಕೋಟಿ ರೂಪಾಯಿಗೆ ತಲುಪಿದೆ. ಈ ಮೊತ್ತವು ಸಂಪೂರ್ಣವಾಗಿ ದುರ್ವಿನಿಯೋಗವಾಗಿರುವ ಬಗ್ಗೆ ಜಿಲ್ಲಾ ಸಹಕಾರ ಬ್ಯಾಂಕಿನ ಆಡಳಿತ ವರ್ಗಕ್ಕೆ ಸ್ಪಷ್ಟ ಮಾಹಿತಿ ಇದ್ದರೂ ಈವರೆಗೆ ಯಾವ ಕ್ರಮವನ್ನೂ ಜರುಗಿಸಿಲ್ಲ.

ಆಧಾರವೇ ಇಲ್ಲದೆ ಸಾಲ, ಒಂದೇ ಆಸ್ತಿಯ ಮೇಲೆ ಎರಡೆರಡು ಸಾಲದ ಹಲವು ಪ್ರಕರಣಗಳು ಇಲ್ಲಿ ನಡೆದಿವೆ. ಇದೆಲ್ಲಾ ಗೊತ್ತಿದ್ದರೂ ಜಿಲ್ಲಾ ಸಹಕಾರ ಬ್ಯಾಂಕಿನ ಬಂಗಾರಪೇಟೆ ಮೇಲ್ವಿಚಾರಕ ಕೃಷ್ಣೇಗೌಡ, ಸ್.ಎಸ್.ಎನ್.ಕಾರ್ಯದರ್ಶಿ ವೆಂಕಟರಾಮ ರೆಡ್ಡಿ, ಕ್ಯಾಷಿಯರ್ ಚಂದ್ರಪ್ಪ, ವ್ಯವಸ್ಥಾಪಕ ವೆಂಕಟೇಶಗೌಡ, ಕೇಂದ್ರ ಕಚೇರಿಯ ಸಾಲ ವಿಭಾಗದ ಅಧೀಕ್ಷಕ ತಿಮ್ಮೇಗೌಡ ಇವರೆಲ್ಲರೂ ಬಾಯಿಮುಚ್ಚಿಕೊಂಡು ಕೂತಿರುವುದು, ಇವರೆಲ್ಲರೂ ನುಂಗಾಟದಲ್ಲಿ ಭಾಗಿಗಳಾಗಿ ರುವುದಕ್ಕೆ ಸಾಕ್ಷಿ.

ಹೀಗೆ ಬ್ಯಾಂಕನ್ನು ಸಂಪೂರ್ಣವಾಗಿ ಲೂಟಿ ಹೊಡೆದಿರುವ ಈ ದರೋಡೆಕೋರರ ವಿರುದ್ಧ ಸಿವಿಲ್ ಮತ್ತು ಕ್ರಿಮಿನಲ್ ಮೊಕದ್ದಮೆ ಹೂಡುವುದಾಗಿ ಸಹಕಾರ ಇಲಾಖೆಯ ತನಿಖಾಧಿಕಾರಿ ಇಜಾಜ್ ಅಹಮದ್ ಏನೋ ಹೇಳಿದ್ದಾರೆ. ಆದರೆ, ಬ್ಯಾಂಕಿನ ಮುಖ್ಯಸ್ಥರೇ ಈ ಬಗ್ಗೆ ಉತ್ಸಾಹ ತೋರಿಸುತ್ತಿಲ್ಲ.

-ವರದಿಗಾರ

ಕಳ್ಳರ ಪತ್ತೆಗೆ ದರೋಡೆಕೋರರ ಸಹಕಾರ!

ದಿವಾಳಿಯಾಗಿರುವ ಜಿಲ್ಲಾ ಸಹಕಾರ ಬ್ಯಾಂಕಿನ ಕಾಯಕಲ್ಪಕ್ಕೆ ವ್ಯವಸ್ಥಾಪಕ ನಿರ್ದೇಶಕಿಯಾಗಿ ಪೆಹರಾ ಬಾನು ಎಂಬುವರನ್ನು ನೂತನವಾಗಿ ನೇಮಿಸಲಾಗಿದೆ. ಬೆಂಗಳೂರಿನ ನಿವಾಸಿಯಾದ ಬಾನುರವರು ಅಲ್ಲಿಂದ ಕೋಲಾರಕ್ಕೆ ಪ್ರತಿದಿನ ಬಂದು ಹೋಗುವುದೇ ಒಂದು ಸಾಧನೆ. ಇದಕ್ಕೆ ಬ್ಯಾಂಕಿನ ಕಾರು ಬಳಕೆ, ಅದಕ್ಕೆ ಪೆಟ್ರೋಲು, ಮತ್ತದಕ್ಕೊಬ್ಬ ಡ್ರೈವರು.



ಪೆಹರಬಾನುರವರ ಈ ನಿತ್ಯ ಪ್ರವಾಸ, ಅದು ಸರ್ಕಾರಿ ವಾಹನದಲ್ಲಿ, ಸಾರ್ವಜನಿಕ ಟೀಕೆಗೆ ಒಳಗಾಗಿ, ಮುಖಂಡರು ಪತ್ರಿಕಾ ಹೇಳಿಕೆಗಳ ಮೂಲಕ ಟೀಕಿಸಲು ಆರಂಭಿಸಿದ ಮೇಲೆ, ಸದ್ಯಕ್ಕೆ ಕಾರು ಬೆಂಗಳೂರು-ಕೋಲಾರ ಅಪ್ ಅಂಡ್ ಡೌನ್ ಮಾಡುವುದು ನಿಂತಿದೆ.

ಇಂಥಾ ಪೆಹರಬಾನು ಮೇಡಂರವರು ಸೆಪ್ಟಂಬರ್ 29ರಂದು ಸರ್ಕಾರಿ ಬ್ಯಾಂಕಿನ ಸರ್ವ ಸದಸ್ಯರ ಸಭೆ ಕರೆದಿದ್ದರು. ಕೋರಂ ಇಲ್ಲದೇ ಇಡೀ ಸಭೆಯೇ ರದ್ದಾಯಿತು. ಆದರೆ, ಬ್ಯಾಂಕಿನ ಹಳೇ ಕಳ್ಳರ ತಲೆತಿರುಕ ಮಾತಿಗೆ ಕಿವಿಗೊಟ್ಟ ಮೇಡಂರವರು, ಜಿಲ್ಲೆಯ ಎಲ್ಲಾ ಷೇರುದಾರರು ಸಭೆಗೆ ಹಾಜರಾದಂತೆ ದಾಖಲೆಗಳನ್ನು ಸಿದ್ಧಪಡಿಸಲು ಸಜ್ಜಾಗಿರುವುದು ಮಾತ್ರ ಬ್ಯಾಂಕಿನ ಗತಿ ಮುಂದೇನಾಗುವುದು ಎಂಬುದರ ಪೂರ್ವ ಸೂಚನೆಯಂತಿದೆ.

ಬ್ಯಾಂಕ್ 'ದರೋಡೆ'ಯ ಪ್ರಮುಖರಾದ ಮುನಿರಾಜು, ಸಿ.ಎಸ್.ಚಂದ್ರಪ್ಪ, ಶಿವಕುಮಾರ್ ಮತ್ತು ಚಂದ್ರಪ್ಪನಂತಹವರಿಂದಲೇ ಸುತ್ತುವರಿದಿರುವ ಮೇಡಂ, ಅವರ ಸಲಹೆ, ಸಹಕಾರಗಳಿಂದಲೇ ಕೆಲಸ ಮಾಡುತ್ತಿರುವುದು ಬಹಿರಂಗ ಸತ್ಯ. ಇಂತಹವರ ಸಹವಾಸದಲ್ಲಿದ್ದುಕೊಂಡು ಬ್ಯಾಂಕನ್ನು ಸರಿ ಮಾಡುತ್ತೇನೆಂದು ಹೇಳುತ್ತಿರುವುದು ಭಾರೀ ಹಾಸ್ಯ.

ಕ್ರೆಡಿಟ್ ಕಾರ್ಡ್ ಏಜಂಟನ ಆತ್ಮಹತ್ಯೆ ಬಿ.ವಿ.ಬಿ. ಲೆಕ್ಚರರ್ ಕಟಗಿ ಕಾರಣನೆ?

ಕ್ರೆಡಿಟ್ ಕಾರ್ಡ್ ಏಜಂಟ್ ಬಸವರಾಜ ಚಕ್ರಸಾಲಿ ಆಗಸ್ಟ್ 8 ರಂದು ಆತ್ಮಹತ್ಯೆಗೆ ಶರಣಾಗಿದ್ದ. ಈಗ 2 ತಿಂಗಳ ನಂತರ ಆ ಸಾವಿಗೆ ಬಿ.ವಿ.ಬಿ. ಇಂಜಿನಿಯರಿಂಗ್ ಕಾಲೇಜಿನ ಲೆಕ್ಚರರ್ ರಾಜಕುಮಾರ ಕಟಗಿ ಕಾರಣರೆಂದು ದೂರೊಂದು ಧುತ್ತೆಂದು ದಾಖಲಾಗಿದೆ. ಆತ್ಮಹತ್ಯೆ ಮಾಡಿಕೊಂಡ ಬಸವರಾಜ ಚಕ್ರಸಾಲಿ ತನ್ನ ಮೊಬೈಲ್ ಫೋನಿನಲ್ಲಿ ರೆಕಾರ್ಡ್ ಮಾಡಿದ್ದ ಎನ್ನಲಾದ ಮಾತುಗಳೇ ಈ ದೂರು ದಾಖಲಾಗಲು ಕಾರಣವಾಗಿವೆ. ಬಸವರಾಜನ ತಂದೆ ಶಂಕ್ರಪ್ಪ ಚಕ್ರಸಾಲಿ ಮೊಬೈಲ್‌ನಲ್ಲಿನ ಮಗನ ಮಾತುಗಳನ್ನು ಸಿ.ಡಿ. ಮಾಡಿಸಿ ಪೊಲೀಸರಿಗೆ ನೀಡಿದ್ದಾರೆ.

ಅಸಲಿಗೆ ಬಸವರಾಜ ವಿಸು ದಾಖಲಿಸಿದ್ದ? ರಾಜಕುಮಾರ ಕಟಗಿ ಅವರಿಂದ ಚಕ್ರಸಾಲಿಯ ಮೇಲೆ ಒತ್ತಡವಿತ್ತೊ? ಅಥವಾ ಮಗನ ಸಾವಿನ 2 ತಿಂಗಳ ನಂತರ ಆತನ ತಂದೆ ಶಂಕ್ರಪ್ಪ ಚಕ್ರಸಾಲಿ ಈ ಬಲೆ ಹೆಣೆದರೆ? ಹೀಗೆ ಪ್ರಶ್ನೆಗಳನ್ನಿಟ್ಟುಕೊಂಡು ಹೊರಟರೆ ಮೃತ ಬಸವರಾಜ ಚಕ್ರಸಾಲಿ ಕ್ರೆಡಿಟ್ ಕಾರ್ಡ್ ವಂಚನೆಯಲ್ಲಿ ಪಾಲ್ಗೊಂಡು ಸಂಕಷ್ಟಕ್ಕೆ ಸಿಲುಕಿದ್ದ ಎಂಬುದು ತಿಳಿಯುತ್ತದೆ.


ಬಸವರಾಜನ ತಂದೆ ಶಂಕ್ರಪ್ಪ ಸಿ.ಡಿ. ಹಿಡಿದು ಪತ್ರಕರ್ತರ ಅನುಕಂಪ ಗಿಟ್ಟಿಸುವಲ್ಲಿ ಯಶಸ್ವಿಯಾಗಿದ್ದಾರೆ. ತನ್ನ ಮಗನಿಂದಲೇ ಮೋಸ ಹೋಗಿದ್ದ ರಾಜಕುಮಾರ ಕಟಗಿ ಅವರಿಂದಲೇ 2 ಲಕ್ಷ ರೂಪಾಯಿ ಕೀಳಲು ಶಂಕ್ರಪ್ಪ ಹೆಣೆದಿರುವ ತಂತ್ರ ಇದಾಗಿದೆ.

ಭಾರತೀಯ ಸ್ಟೇಟ್ ಬ್ಯಾಂಕಿನ ಕ್ರೆಡಿಟ್ ಕಾರ್ಡ್ ಏಜಂಟನಾಗಿದ್ದ ಬಸವರಾಜ ಚಕ್ರಸಾಲಿ ಜನರನ್ನು ಪೀಡಿಸಿ, ಪೀಡಿಸಿ ಕಾರ್ಡ್‌ಗಳನ್ನು ಮಾಡಿಸುತ್ತಿದ್ದ. ಈತನ ಹಣದ [illegible] ನಡೆ[illegible] ಮಾಡುತ್ತಾ ತನ್ನ ಸುತ್ತ ತಾನೇ ಮರಣ ಕೋಟೆ ನಿರ್ಮಿಸಿಕೊಂಡ.


ಬೀದರ ಮೂಲದ ರಾಜಕುಮಾರ ಕಟಗಿ ಧಾರವಾಡ ಕೃಷಿ ವಿ.ವಿ.ಯಲ್ಲಿ ಎಂ.ಎಸ್ಸಿ. (ಬಯೋ ಟೆಕ್ನಾಲಜಿ)ಯಲ್ಲಿ ರ್‍ಯಾಂಕ್ ಗಳಿಸಿ ಹುಬ್ಬಳ್ಳಿಯ ಬಿ.ವಿ.ಬಿ. ಇಂಜಿನಿಯರಿಂಗ್ ಕಾಲೇಜಿನಲ್ಲಿ ಬಯೋಟೆಕ್ನಾಲಜಿ ಬೋಧಿಸುತ್ತಿದ್ದಾರೆ. ಬಸವರಾಜ ಹುಬ್ಬಳ್ಳಿ-ಧಾರವಾಡದ ಒಂದಿಷ್ಟು ಲೆಕ್ಚರರ್‌ಗಳನ್ನು ಕಾಡಿ ಬೇಡಿ ಕ್ರೆಡಿಟ್ ಕಾರ್ಡ್ ಮಾಡಿಸಿದ್ದ. ಹಾಗೆ ಬಸವರಾಜನಿಂದ ಕಟಗಿ ಸಹ ಕ್ರೆಡಿಟ್ ಕಾರ್ಡ್ ಪಡೆದಿದ್ದರು. ಕ್ರೆಡಿಟ್ ಕಾರ್ಡ್ ಮಾಡಿಸಿದ ಕೆಲವೇ ದಿನಗಳಲ್ಲಿ ರಾಜಕುಮಾರ ಕಟಗಿಯವರಿಗೆ ಬ್ಯಾಂಕಿನಿಂದ ನೋಟಿಸ್!

ನೀವು ತೆಗೆದುಕೊಂಡಿರುವ 25 ಸಾವಿರ ರೂ. ಸಾಲ ತುಂಬಿ ಎಂದು ನೋಟಿಸ್ ಬಂದಿತ್ತು! ಆದರೆ ರಾಜಕುಮಾರ ಕಟಗಿಯವರು ಸಾಲ ಪಡೆದಿರಲೇ ಇಲ್ಲ! ಅಲ್ಲಿ ಏಜಂಟ್ ಬಸವರಾಜ ತನ್ನ ಕೈ ಚಳಕ ತೋರಿಸಿದ್ದ.

ಧಾರವಾಡ



ಶಂಕ್ರಪ್ಪ



ಬಸವರಾಜ್

ಕಟಗಿಯವರು ಬ್ಯಾಂಕಿಗೆ ಸಮಜಾಯಿಷಿ ನೀಡಿ ಸುಧಾರಿಸಿಕೊಳ್ಳುವ ಮುನ್ನವೇ ಬಸವರಾಜ ಮತ್ತೊಮ್ಮೆ ದುಡ್ಡು ಎಗರಿಸಿಯಾಗಿತ್ತು.

ಬ್ಯಾಂಕಿನವರು ವಿಚಾರಣೆ ನಡೆಸಿದಾಗ ಚಕ್ರಸಾಲಿ ಕ್ರೆಡಿಟ್ ಕಾರ್ಡ್ ವಂಚನೆ ಮಾಡಿದ್ದು ಬಯಲಾಗಿ ಕೆಲಸದಿಂದ ಅಮಾನತುಗೊಂಡಿದ್ದ.

ಮೊಬೈಲ್ ಮೂಲಕ ಕಟಗಿಯವರು ಚಕ್ರಸಾಲಿಗೆ ಎಸ್.ಎಂ.ಎಸ್. ಮಾಡಿ ಸಣ್ಣಗೆ ಗದರಿಸಿದ್ದರು.

ಈ ಮೊದಲು ಸ್ವಲ್ಪ ಸಲುಗೆ ಬೆಳೆದಿದ್ದರಿಂದ ಕಟಗಿಯವರಿಂದ ಚಕ್ರಸಾಲಿ ಹಣದ ಸಹಾಯಧನವನ್ನು ಪಡೆದಿದ್ದ ಎನ್ನಲಾಗಿದೆ.

ಕಟಗಿಯವರು ಮೊಬೈಲ್‌ನಲ್ಲಿ ಹಣ ವಾಪಸ್ ಮಾಡಲು ಕೇಳಿರುವುದನ್ನೇ ಈಗ ಸಿ.ಡಿ. ಮಾಡಿ ಬಹುದೇ?

ಈಗ ಮಗನ ಸಾವಿಗೆ ಲೆಕ್ಚರರ್ ಕಟಗಿಯೇ ಕಾರಣ ಎಂದು ಹುಯಿಲೆಬ್ಬಿಸಿ 2 ಲಕ್ಷ ಕೇಳುತ್ತಿರುವ ಶಂಕ್ರಪ್ಪ ಸ್ವಲ್ಪ ಚಾಲಾಕಿ ಮನುಷ್ಯನೇ. ಕೆ.ಎಸ್.ಆರ್.ಟಿ.ಸಿ. ಡಿಪೋ ನಂ.1ರಲ್ಲಿ ಉದ್ಯೋಗಿಯಾಗಿರುವ ಶಂಕ್ರಪ್ಪನ ಬಗ್ಗೆ ಆತನ ಸಹದ್ಯೋಗಿಗಳೇ ಹಲವಾರು ಆರೋಪ ಮಾಡುತ್ತಾರೆ.

ದಿಢೀರ್ ಹಣ ಮಾಡುವ ಹಂಬಲದ ಶಂಕ್ರಪ್ಪ ಈ ಹಿಂದೆ ಸಂಪಂಗಿ ನೇತೃತ್ವದ ಕಾರ್ಮಿಕ ಸಂಘದ ನಾಯಕನಾಗಿ ಕೆಲಸ ಮಾಡಿದ್ದಾನೆ. ಕೆ.ಎಸ್.ಆರ್.ಟಿ.ಸಿ.ಯ ಭ್ರಷ್ಟ ಅಧಿಕಾರಿಗಳ ಚೇಲಾನಂತೆ ಓಡಾಡುತ್ತಾನೆ.


ಈಗ ಮಗನ ಆತ್ಮಹತ್ಯೆಗೆ ರಾಜಕುಮಾರ ಕಟಗಿ ಕಾರಣರೆಂದು ದೂರು ನೀಡಿದ್ದಾನೆ. ನಿಜಾಂಶ ಹೊರ ತರುವುದು ಪೊಲೀಸರ ಕರ್ತವ್ಯ.

-ವರದಿಗಾರ

ಎಪಿಎಂಸಿ: ಪ್ರಶಾಂತವಾಗಿ ನುಂಗುತ್ತಿರುವ ಶಿವನಗೌಡ!

...ಅಧ್ಯಕ್ಷ ಶಿವನಗೌಡ, ಆತನ ಮಗ ಪ್ರಶಾಂತ ಗೌಡ ಇಬ್ಬರೂ ತಿನ್ನುವುದರಲ್ಲಿ, ತಿಂದು ...ಗುಳುವುದರಲ್ಲಿ ದೇವೇಗೌಡ-ಕುಮಾರಸ್ವಾಮಿಯನ್ನು ...ತ್ತಾರೆ. ... ಆದರೆ ...ಜೆ.ಎಸ್. ಇವರು ಕಾಂಗ್ರೆಸ್.

ಈ ವರದಿಯ ಉದ್ದೇಶವಿಷ್ಟೇ-ಮೊನ್ನೆ ಜೂನ್‌ನಲ್ಲಿ ...ಣಗಳ ಹೆಸರಿನಲ್ಲಿ ಹಣದ ರಾಶಿ' ಎಂದು ಕೊಪ್ಪಳ ಎಪಿಎಂಸಿಯ ಅವ್ಯವಹಾರದ ವರದಿಯನ್ನು 'ಲಂಕೇಶ್' ಪ್ರಕಟಿಸಿತ್ತು. ಆಗ 'ಲಂಕೇಶ್' ಕಚೇರಿಗೆ ಬಾಂಬ್ ಹಾಕಿ ಬಿಡುವವರಂತೆ ಆರ್ಭಟಿಸಿದ್ದರು ಅಧ್ಯಕ್ಷರು ಮತ್ತು ಆತನ ಕುಮಾರ ಕಂಠೀರವ. ವರದಿ ಪ್ರಕಟವಾದ ನಂತರ ಜುಲೈ 7-8 ರಂದು ಬೆಂಗಳೂರಿನಿಂದ ಬಂದ ಇಲಾಖೆಯ ಸೂಪರಿಂಡೆಂಟಿಂಗ್ ಇಂಜಿನಿಯರ್ ಮೃತ್ಯುಂಜಯರವರು ಕಾಮಗಾರಿಗಳ ಕುರಿತು ತನಿಖೆ ನಡೆಸಿ ಕಪಾಳಕ್ಕೆ ಹೊಡೆದಂತೆ ನೀಡಿರುವ ವರದಿಯನ್ನು ಮುಂದಿಟ್ಟು ಏನೇನೋ ಕಥೆ ಹೊಸೆಯುತ್ತಿದ್ದಾನೆ ಅಧ್ಯಕ್ಷ ಶಿವನಗೌಡ. ಈತನ ಕಥಾ ಶೈಲಿ ನೋಡಿದರೆ ಈ ಸರ್ಕಾರವೇ ನವೆಂಬರ್ 1 ರ ಹೊತ್ತಿಗೆ ಒಂದು ಪ್ರಶಸ್ತಿಯನ್ನು ಈತನಿಗೆ ನೀಡಲೇಬೇಕು.


ಶಿವನಗೌಡ

ಜೂನ್‌ನಲ್ಲಿ ವರದಿ ಪ್ರಕಟಿಸುವಾಗ ಪತ್ರಿಕೆಗೆ ಸಿಕ್ಕ ಮಾಹಿತಿಯಂತೆ 33 ಕಣಗಳಲ್ಲಿ 12 ಕಣಗಳಿಗೆ ಕೆಲಸದ ಆದೇಶ ನೀಡಿದ್ದಿಲ್ಲ, ಅದರಲ್ಲಿ 18 ಕಣಗಳ ಕೆಲಸ ಅಧ್ಯಕ್ಷರ ಮಗ ಪ್ರಶಾಂತಗೌಡ, ಕಸ್ತೂರ ನಾಯಕ್ 3, ಸತೀಶ್ ರೆಡ್ಡಿ, ಶ್ರೀನಿವಾಸ ರಾವ್, ರಾಮಣ್ಣ ...ಲ್ಲನವರ್, ರಾಘವೇಂದ್ರ ನರಗುಂದ ತಲಾ ಒಂದೊಂದು ಕಾಮಗಾರಿ ಪಡೆದಿದ್ದರು. ಇವುಗಳಲ್ಲಿ ಕೃಷ್ಣರೆಡ್ಡಿ ಸೇರಿದಂತೆ ಅನೇಕ ಸದಸ್ಯರು ತರಾತುರಿಯಲ್ಲಿ ಕೆಲಸ ಮಾಡಿ ಅರ್ಧಂಬರ್ಧ ಬಿಲ್ ಎತ್ತಲು ಓಡಾಡುತ್ತಿದ್ದರು.

ತನ್ನ ಜಾತಿ ಬಾಂಧವ ಯಲಬುರ್ಗಾ ಶಾಸಕ ಬಸವರಾಜ ರಾಯರೆಡ್ಡಿಯ ಬೆಂಬಲದಲ್ಲೇ ಅಂಥಾ ದರ್ಬಾರ್ ನಡೆಸುತ್ತಿದ್ದಾನೆ ಅಧ್ಯಕ್ಷ ಶಿವನಗೌಡ. ಜೂನ್ ತಿಂಗಳಲ್ಲಿ ಇಲಾಖೆಯ ಗುಲ್ಬರ್ಗಾ ವಿಭಾಗದ ಎಇಇ 'ನಮ್ಮ ಗಮನಕ್ಕೆ ತಾರದೇ, ಅನುಮೋದನೆ ಪಡೆಯದೇ ಕಾಮಗಾರಿಗಳನ್ನು ಗುತ್ತೇದಾರರಿಗೆ ವಹಿಸಿ ಕಾರ್ಯಾದೇಶ ನೀಡಿರುವುದು ಕಂಡುಬಂದಿದ್ದು ನಮ್ಮ ಕಚೇರಿಯಿಂದ ಅನುಮೋದನೆ ಪಡೆದು ಕೆಲಸದ ಆದೇಶ ನೀಡಬೇಕಿತ್ತು. ಮತ್ತು ಒಂದೇ ಗುತ್ತೇದಾರರಿಗೆ (ಪ್ರಶಾಂತಗೌಡ) 29 ಕಾಮಗಾರಿಯ ಆದೇಶ ನೀಡಿದ್ದು ಸರಿ ಇಲ್ಲ, ಇನ್ನು ಮುಂದೆ ಅನುಮೋದನೆ ಆಗಲಾರದೆ ಕೆಲಸದ ಆದೇಶ ನೀಡಬಾರದು. ಕೊಟ್ಟರೆ, ನೀವೇ ಹೊಣೆಗಾರರು' ಅಂತ ತಾಕೀತು ಮಾಡಿಸಿದ್ದರು. ಇಷ್ಟಾದರೂ ಉಳಿದ 12 ಕಣಗಳ ಕೆಲಸದಲ್ಲಿ 9ನ್ನು ಮತ್ತೇ ಅಧ್ಯಕ್ಷರ ಮಗ ಪ್ರಶಾಂತನೆ ಪಡೆದು ಉಳಿದ ಮೂರನ್ನು ಪಂಪಾಪತಿ ಸಣ್ಣ ಲಿಂಗಪ್ಪ ಕಂಬುವವರಿಗೆ ನೀಡಲಾಗಿದೆ.

'ಲಂಕೇಶ್' ವರದಿ ಪ್ರಕಟಿಸಿದ ನಂತರ ಎಸ್.ಇ. ಮೃತ್ಯುಂಜಯರವರು ಐದು ಜನ ಅಧಿಕಾರಿಗಳ ತಂಡದೊಂದಿಗೆ ಕೊಪ್ಪಳ ತಾಲ್ಲೂಕಿಗೆ ಬಂದು ಕಾಮಗಾರಿ ಪೂರ್ಣವಾಗಿದ್ದ 19 ಸ್ಥಳಗಳಿಗೆ ಭೇಟಿ ನೀಡಿ- 'ಕಣಗಳು ಬಿರುಕು ಬಿಟ್ಟಿವೆ. ಕಳಪೆ ಕಾಮಗಾರಿ ಆಗಿವೆ. ಸರಿಯಾಗಿ ಕ್ಯೂರಿಂಗ್ ಮಾಡಿಲ್ಲ. 53 ಗ್ರೇಡ್ ಸಿಮೆಂಟ್ ಬದಲಿಗೆ 43 ಗ್ರೇಡ್ ಸಿಮೆಂಟ್ ಬಳಸಿ ಕಳಪೆ ವಸ್ತುಗಳನ್ನು ಬಳಸಿ ಕಟ್ಟಲಾಗಿದೆ. ಆದಕ್ಕೆ ಕಣಗಳ ಮೇಲ್ಭಾಗದ ಕಾಂಕ್ರೀಟ್ ಪದರು ತೆಗೆದು ಹಾಕಿ, ಉತ್ತಮ ಗುಣಮಟ್ಟದ ಕೆಲಸ ಮಾಡಬೇಕು. ಇದಕ್ಕೆ ಎಪಿಎಂಸಿ ಗುತ್ತೇದಾರರಿಗೆ ಹೆಚ್ಚಿನ ಹಣ ಬಿಡುಗಡೆ ಮಾಡಬಾರದು. ಈ ಮರು ಕೆಲಸವನ್ನು ಗುತ್ತೇದಾರರು ಮಾಡಿದ ಮೇಲೆ ಇಲಾಖೆಯ AEE ಪರಿಶೀಲಿಸಿ ಬಿಲ್ ನೀಡಬೇಕು.

ನಾವು ಬರೋದು ಗೊತ್ತಿದ್ದರೂ ಮಾಜಿ ಸೆಕ್ರೆಟರಿ (ಕೆಲಸಗಳು ಇವನ ಅವಧಿಯಲ್ಲಿ ನಡೆದದ್ದು) ಮಲ್ಲಿಕಾರ್ಜುನಯ್ಯ ಬಂದಿಲ್ಲ, ಅಡ್ವಾನ್ಸ್ ಆಗಿ ತಿಳಿಸಿದ್ದರೂ ಬಂದಿಲ್ಲ. ಈ ಎಲ್ಲ ಅವಘಡಗಳಿಗೆ ಕಾರಣನಾದ ಮಲ್ಲಿಕಾರ್ಜುನಯ್ಯ KAPM(R) Act 1966 and Rules 1968 ಪ್ರಕಾರ ಎಲ್ಲದಕ್ಕೂ ಜವಾಬ್ದಾರನಾಗುತ್ತಾನೆ' ಎಂದು ವರದಿ ನೀಡಿದ್ದಾರೆ.

ಹೀಗೆ ಮುಖದ ಮೇಲೆ ನೀರಿಳಿಯುವಂತೆ ವರದಿ ನೀಡಿದ್ದರೂ ಎಲ್ಲವನ್ನೂ ಶಿವನಗೌಡ ಕುಂಡಿ ಬುಡದಲ್ಲಿಟ್ಟುಕೊಂಡರೆ ಮಗ ಪ್ರಶಾಂತ ಗೌಡ ಸಚಿವ ದರ್ಶನಾಪುರ ಬಳಿ ತೆರಳಿ ಉಳಿದ ಬಿಲ್ ಬಿಡುಗಡೆ ಮಾಡಲು ಒತ್ತಡ ಹೇರುತ್ತಿದ್ದ. ವರದಿ ನೀಡಿ ಒಂದೂವರೆ ತಿಂಗಳ ನಂತರ ಕಾರ್ಯದರ್ಶಿ ಮೂಲಕ ಜಿಲ್ಲಾಧಿಕಾರಿಗೆ ವಿವರಣೆ ಕೊಡಿಸಿರುವ ಅಧ್ಯಕ್ಷ ಶಿವನಗೌಡ ಚಂದನೆಯ ಕಥೆ ಹೆಣೆದಿದ್ದಾನೆ. ಈತನ ಕಥಾಸಾಗರ ಹೀಗಿದೆ: 'ಮೇ 31, 2006 ರಂದು ಎಲ್ಲಾ 38 ಕಣಗಳಿಗೆ ತಾಂತ್ರಿಕ ಶಾಖೆಯಿಂದ ಕಾರ್ಯಾದೇಶ ಪಡೆಯಲಾಗಿದೆ' ಅಂದ್ರೆ ಏಪ್ರಿಲ್‌ನಲ್ಲಿ 'ಲಂಕೇಶ್'ಗೆ ಸಿಕ್ಕ ದಾಖಲೆ ಪ್ರಕಾರ 25 ಕಣಗಳ ಕಾಮಗಾರಿಗೆ ಮಂಜೂರಿ ಸಿಕ್ಕಿತ್ತು. ಆದಕ್ಕೆ ಬೆಂಗಳೂರಿನ ಇಲಾಖೆಯ ನಿರ್ದೇಶಕರು ಮಂಜೂರು ನೀಡಿದ್ದರು. ಹಾಗಿದ್ದರೆ ಜೂನ್‌ನಲ್ಲಿ ಗುಲ್ಬರ್ಗಾ ವಿಭಾಗೀಯ ಕಚೇರಿ ಉಗಿದಿದ್ದು ಯಾಕೆ?

ಅಪ್ಪನೇ ಅಧ್ಯಕ್ಷನಾಗಿರುವಾಗ, ಮಗನಿಗೆ ಅದರಲ್ಲೂ ಜಿಲ್ಲೆಯ ಹೊರಗಡೆ ಇರುವವನಿಗೆ ಸಾರಾಸಗಟು ಕೆಲಸ ನೀಡಿದ್ದು ಏಕೆ? ಅಧ್ಯಕ್ಷರ ಪ್ರಕಾರ ಪ್ರಶಾಂತ ಗೌಡ ಮೂಲತಃ ಕೊಪ್ಪಳ ಜಿಲ್ಲೆಯವರು. ಗುತ್ತೇದಾರನ ನೊಂದಣಿ ಗದಗ ಜಿಲ್ಲೆಯದು. ಇವರಿಗೆ 29 ಕಣಗಳ ಕಾಮಗಾರಿಯನ್ನು ಸಮಿತಿಯ ಸಭೆಯಲ್ಲಿ ನಿರ್ಣಯಿಸಿ ನೀಡಲಾಗಿದೆ ಎಂಬುದು ಅಪ್ಪನ ವಾದ. ಆದರೆ ಏಪ್ರಿಲ್‌ನಲ್ಲಿ 'ಲಂಕೇಶ್'ಗೆ ಸಿಕ್ಕ ದಾಖಲೆಗಳಲ್ಲಿ ಪ್ರಶಾಂತಗೌಡನಿಗೆ ನಿರ್ದೇಶಕರು, ಕೃಷಿ ಮಾರಾಟ ಇಲಾಖೆ ಬೆಂಗಳೂರು ಇವರು ಮಂಜೂರಾತಿ ನೀಡಿದ್ದು ಇದೆ. ನಂತರ ಜೂನ್‌ನಲ್ಲಿ ನಮ್ಮ ಗಮನಕ್ಕೆ ತಾರದೇ ಪ್ರಶಾಂತಗೌಡನಿಗೆ 29 ಗುತ್ತಿಗೆ ಕೆಲಸ ನೀಡಿದ್ದು ಸರಿಯಲ್ಲ, ಇನ್ನು ಮುಂದೆ ಹೀಗಾಗಬಾರದು ಅಂತ ಇಇ, ಎಪಿಎಂಸಿ ಗುಲ್ಬರ್ಗಾ ಡಿವಿಜನ್ ಜಾಡಿಸಿದರೆ, ಆಗಸ್ಟ್ 18 ರಂದು ಜಿಲ್ಲಾಧಿಕಾರಿಗೆ ನೀಡಿರುವ ವರದಿಯಲ್ಲಿ ಸಮಿತಿ ಸಭೆಯಲ್ಲಿ ನಿರ್ಣಯಿಸಿದಂತೆ ಪ್ರಶಾಂತಗೌಡನಿಗೆ ನೀಡಲಾಗಿದೆ ಎಂದು ಉತ್ತರ ಕೊಟ್ಟಿದ್ದಾರೆ. ಹಾಗಾದರೆ ಇಲ್ಲಿ ಕಾಮಗಾರಿಗೆ ಮಂಜೂರಾತಿ ನೀಡಲು ನಿಜವಾದ ಅಧಿಕಾರ ಇರುವುದು ಯಾರಿಗೆ?

ಕೊಪ್ಪಳ


ಎಪಿಎಂಸಿ ಕಛೇರಿ

ಅಧ್ಯಕ್ಷನ ಮಗನ ಹೆಸರಿನಲ್ಲಿ ಕೃಷ್ಣ ರೆಡ್ಡಿಗೆ, ಓರೇ ಕಾಸನಕಂಡಿ ಕೆಲಸವನ್ನು ಶ್ರೀನಿವಾಸರಾವ್ ಬದಲಿಗೆ ನಂಜುಂಡಸ್ವಾಮಿಗೆ ನೀಡಲಾಗಿದೆ. ರೈತ ಸಂಘದ ಕಾರ್ಯದರ್ಶಿ ಗಿದ್ದ ಸಿಂಗನಗೌಡ ಕಳಪೆ ಕೆಲಸ ಮಾಡಿದ್ದರೂ ಇವರಿಗೆ ಹೆದರಿ ಅದನ್ನು ಶ್ರೀನಿವಾಸರಾವ್ ಮಾಡಿದ್ದಾನೆ ಎಂದು ಹೇಳಿ ಅರ್ಧದಷ್ಟು ಕೆಲಸ ಮುಗಿದು ಬಿಲ್ ನೀಡಿದ್ದರೂ ಯಾವ ಬಿಲ್ಲು ನೀಡಿಲ್ಲ ಎಂದು ವಾದಿಸಿದ್ದಾರೆ.

'ಲಂಕೇಶ್' ವರದಿಯಲ್ಲಿ ಪ್ರಸ್ತಾಪಿಸಿದಂತೆ ಗಿಣಿಗೇರಿ ದನದ ಸಂತೆ ಕಾಂಪೌಂಡ್ ಮತ್ತು ಕೊಪ್ಪಳ ಎಪಿಎಂಸಿ ಮುಂದಿನ ಉದ್ಯಾನವನಕ್ಕೆ ಕಬ್ಬಿಣದ ಕಟಾಂಜನಕ್ಕೆ ತಲಾ 1 ಲಕ್ಷ ಬಿಲ್ ಹಾಕಿ ಅವ್ಯವಹಾರ ಮಾಡಲಾಗಿತ್ತು. ಆದರೆ ಅಧ್ಯಕ್ಷ ಕಣಗಳ ಕುರಿತು ಸುಳ್ಳನ್ನೇ ಸತ್ಯ ಎಂದು ವರದಿ ನೀಡುವ ಭರದಲ್ಲಿ ಗಿಣಿಗೇರಿ ದನದ ಸಂತೆಯ 100 ಮೀಟರ್‌ನ ಕಾಂಪೌಂಡಿಗೆ 1 ಲಕ್ಷ ಬಿಲ್‌ಗೆ 2 ಲಕ್ಷ 2 ಸಾವಿರ ವೆಚ್ಚವಾಗಿದೆ, ಉದ್ಯಾನವನದ 1 ಲಕ್ಷದ ಕೆಲಸಕ್ಕೆ 1 ಲಕ್ಷ 79 ಸಾವಿರ ವೆಚ್ಚ ಎಂದು ವರದಿ ನೀಡಿ ಸಿಕ್ಕಿ ಹಾಕಿಕೊಂಡಿದ್ದಾರೆ. ಟೆಂಡರ್ ಕರೆದದ್ದು ಒಂದು ರೇಟಾದರೆ ಇವರು ಪಾವತಿಸಿದ್ದು ಮತ್ತೊಂದು ರೇಟು.

ನಮ್ಮ ಕೈಯಲ್ಲಿ ಅಧಿಕಾರವಿದೆ, ನಾವು ಏನಾದರೂ ಮಾಡ್ತೇವೆ, ಎಷ್ಟಾದರೂ ತಿಂತೇವೆ ಎಂಬ ಮದದಲ್ಲಿ ಮೆರೆಯುತ್ತಿರುವ ಅಪ್ಪನ ಅಧಿಕಾರ-ಮಗನ ಗುತ್ತಿಗೆ ಎರಡೂ ನೋಡಿದರೆ ನಾಳೆ ದೇವೇಗೌಡ-ಕುಮಾರಸ್ವಾಮಿಯವರೇ ಇವರ ಬಳಿಗೆ ಟ್ರೈನಿಂಗ್‌ಗೆ ಬಂದರೂ ಆಶ್ಚರ್ಯವಿಲ್ಲ, ಆದಕ್ಕೂ ಮುನ್ನ ಲೋಕಾಯುಕ್ತರು ಈ ಕೆಲಸಗಳ ತನಿಖೆ ಆರಂಭಿಸಬೇಕಿದೆ. ಏಕೆಂದರೆ ಮಂತ್ರಿ ದರ್ಶನಾಪುರನ ದರ್ಶನವೇ ಇಲ್ಲ.

-ಹುಸೇನ್ ಪಾಷಾ

ಗ್ಯಾರಳ್ಳಿ ಹಂತಕರ ಬಂಧನವ್ವೋ, ಶರಣಾಗತಿಯೋ?

...ನಿರೀಕ್ಷಿಸಿದಂತೆ ಹಾಸನದ ಎಸ್.ವಿ.ಎಂ. ವಿದ್ಯಾ ಸಂಸ್ಥೆಯ ಮಾಲೀಕ ಹಾಗು ಬಡ್ಡಿ ಕುಳ ಗ್ಯಾರಳ್ಳಿ ತಮ್ಮಯ್ಯನ ಕೊಲೆ ಪ್ರಕರಣದ ಆರೋಪಿಗಳು ಪೊಲೀಸರಿಗೆ ಸಿಕ್ಕಿಬಿದ್ದಿದ್ದಾರೆ. ಹಾ.ರಾ. ನಾಗರಾಜನ ಕೊಲೆಯಾದಂದಿನಿಂದ ನಡೆಯುತ್ತಿರುವ ಘಟನೆಗಳು ಮತ್ತು ಅವು ಪಡೆಯುತ್ತಿರುವ ತಿರುವುಗಳನ್ನು ಸೂಕ್ಷ್ಮವಾಗಿ ಗಮನಿಸಿದರೆ, ತಮ್ಮಯ್ಯನ ಹಂತಕರನ್ನು ಪೊಲೀಸರು ಬಂಧಿಸಿದರು ...ಪೂರ್ವನಿಯೋಜಿತ ಬಂಧನದ ನಾಟಕ ನಡೆಯಿತೆಂದು ...ಹುದು.

ಗ್ಯಾರಳ್ಳಿ ತಮ್ಮಯ್ಯನ ಕೊಲೆಗೆ ಸಂಬಂಧಿಸಿದಂತೆ, ತಮ್ಮಯ್ಯನಿಂದ ಈ ಮೊದಲು ಕೊಲೆಯಾದ ಹಾ.ರಾ. ನಾಗರಾಜನ ಮಕ್ಕಳಾದ ಪ್ರಶಾಂತ್ ಮತ್ತು ಮಯೂರ್ ...ಜೊತೆ ನಾಗರಾಜ್ ಸಹೋದರ ವಾಸುವಿನ ಪುತ್ರ ...ಲ್, ಸೂರಿ ಮತ್ತು ರಂಗ ಉರುಫ್ ದಿನಿ, ಪಾಂಡವ...ದ ಆನಂದ ಎಂಬುವರನ್ನು ಬಂಧಿಸಿದ್ದು ...ವರನ್ನು ಅಕ್ಟೋಬರ್ 4ರಂದು ಹಾಸನದ ...ಯಾಲಯಕ್ಕೆ ಹಾಜರುಪಡಿಸಲಾಗಿದೆ. ಆದರೆ ... [illegible]

ಶರಣಾಗತಿಯಂತಹ ವಿಷಯಗಳಲ್ಲಿ ಒಬ್ಬರು ವಕೀಲರು, ಮತ್ತೊಬ್ಬ ನಗರಸಭಾ ಸದಸ್ಯರು, ಮತ್ತಿಬ್ಬರು ಪತ್ರಕರ್ತರು ಪ್ರಮುಖ ಪಾತ್ರ ವಹಿಸಿರುವುದಲ್ಲದೆ ಗ್ಯಾರಳ್ಳಿ ತಮ್ಮಯ್ಯನಿಂದ ಸಾಕಷ್ಟು ಕಮಿಷನ್ ಗಿಟ್ಟಿಸಿರುವ ವಿಷಯ ಈಗ ಹಾಸನದಲ್ಲಿ ಮನೆ ಮಾತಾಗಿದೆ. ಪೊಲೀಸರು ಈ ದಿಕ್ಕಿನಲ್ಲೂ ತನಿಖೆ ನಡೆಸುತ್ತಿದ್ದಾರೆ. 2005 ಸೆಪ್ಟೆಂಬರ್ 10 ರಂದು ಹಾ.ರಾ. ನಾಗರಾಜ್ ಕೊಲೆ ನಡೆದ ಸಂದರ್ಭದಲ್ಲಿ ಘಟನೆಯ ಪ್ರತ್ಯಕ್ಷದರ್ಶಿಗಳಾಗಿದ್ದವರು ಆತನ ಇಬ್ಬರು ಮಕ್ಕಳಾದ ಪ್ರಶಾಂತ್ ಮತ್ತು ಮಯೂರ್.



ಗ್ಯಾರಳ್ಳಿ ತಮ್ಮಯ್ಯ


ಆದರೆ "ರಕ್ತಸಂಬಂಧಿಗಳ ಸಾಕ್ಷಿ ನ್ಯಾಯಾಲಯದಲ್ಲಿ ನಿಲ್ಲುವುದಿಲ್ಲ, ನಿಮಗೆ ನ್ಯಾಯ ಬೇಕೆಂದಿದ್ದರೆ ಗ್ಯಾರಳ್ಳಿ ತಮ್ಮಯ್ಯನನ್ನು ಎತ್ತುವುದೇ ಸರಿಯಾದ ದಾರಿ" ಎಂಬ ವಿತಂಡವಾದ ಮಂಡಿಸಿ ದಾರಿ ತಪ್ಪಿಸಿದವರು ಒಬ್ಬ ವಕೀಲರು. ಆನಂತರ ಗ್ಯಾರಳ್ಳಿ ತಮ್ಮಯ್ಯನಿಂದ ಕಾಸೂ ಕಿತ್ತು ನಂತರ ಅವನನ್ನು ಕತ್ತರಿಸಿ ಬಿಡಿ ಎಂದು ಭಯಂಕರ ಸಲಹೆ ನೀಡಿ ಅದಕ್ಕೆ ಮಧ್ಯಸ್ಥಿಕೆ ವಹಿಸಿದವರೂ ಇದೇ ವಕೀಲರು. ಈ ಸಂದರ್ಭದಲ್ಲಿ ಇವರೊಂದಿಗೆ ಪತ್ರಕರ್ತರೊಬ್ಬರ ಸೇರ್ಪಡೆಯಾಗಿತ್ತು. ಇಂಥ ಮನೆಹಾಳ ಸಲಹೆಯನ್ನೇನು ಇವರು ಪುಕ್ಕಟೆಯಾಗಿ ಕೊಟ್ಟಿರಲಿಲ್ಲ. ಒಟ್ಟು ಹತ್ತು ಲಕ್ಷ ರೂಪಾಯಿಯನ್ನು ಗ್ಯಾರಳ್ಳಿ ತಮ್ಮಯ್ಯನಿಂದ ಸುಲಿದಿದ್ದರು.

ಈ ವಿಚಾರ ಇತ್ಯರ್ಥವಾಗಿ ತಮ್ಮಯ್ಯ ಮತ್ತು ಹಾ.ರಾ. ನಾಗರಾಜ್ ಮಕ್ಕಳ ನಡುವೆ ರಾಜಿ ಸಂಧಾನ ಏರ್ಪಾಟಾದಾಗಲೇ ತಮ್ಮಯ್ಯನನ್ನು ಕೊಲ್ಲುವ ಸಂಚು ರೂಪಿತವಾಗಿತ್ತು. ಆದರೆ ತಮ್ಮಯ್ಯ 27.50 ಲಕ್ಷ ರೂಪಾಯಿಗೆ ಚೆಕ್ ನೀಡಿ ಬ್ಯಾಂಕ್ ಮೂಲಕವೇ ಪಾವತಿ ಮಾಡುವುದಾಗಿ ಹೇಳಿದಾಗ ಮರ್ಡರ್ ಪೋಸ್ಟ್ ಪೋನ್ ಆಗಿದೆ. ಹೀಗೆ ಬಂದ ಹಣದಲ್ಲಿ ನಾಗರಾಜ್ ಪತ್ನಿ ಪಾರ್ವತಮ್ಮ ಬ್ಯಾಂಕ್‌ನಲ್ಲಿದ್ದ ಸಾಲವನ್ನು ತೀರಿಸಿದ್ದಾರೆ. ಉಳಿದ 6 ಲಕ್ಷ ರೂಪಾಯಿ ಅವರ ಬ್ಯಾಂಕ್ ಖಾತೆಯಲ್ಲೇ ಉಳಿದಿದೆ. ಇನ್ನೂ 1.5 ಲಕ್ಷ ರೂಪಾಯಿ ಗ್ಯಾರಳ್ಳಿ ತಮ್ಮಯ್ಯ ಮತ್ತು ಪಾರ್ವತಮ್ಮನ ಜಂಟಿ ಖಾತೆಯಲ್ಲಿದೆ. ಈಗಿನ ಮಯೂರ್ ಮತ್ತು ಪ್ರಶಾಂತ್ ಹಾಗೂ ಇನ್ನಿತರ ಹಂತಕರ ಬಂಧನ ಪ್ರಕರಣವೂ ಅಷ್ಟೆ. ಇದು ಬಂಧನವಲ್ಲ. ಅವರೆಲ್ಲಾ ಮಾಜಿ ನಗರಸಭಾ ಸದಸ್ಯರೊಬ್ಬರ ಮೂಲಕ ಶರಣಾಗಿದ್ದಾರೆ. ಹಾಸನ ಗ್ರಾಮಾಂತರ ಪೊಲೀಸ್ ಠಾಣೆಯ ಇನ್ಸ್‌ಪೆಕ್ಟರ್ ಎಚ್.ವೈ. ಜಗದೀಶ್‌ರವರೇ ಈ ಡೀಲಿನ ರೂವಾರಿ. ಗ್ಯಾರಳ್ಳಿ ತಮ್ಮಯ್ಯ ಕೊಲೆಯಾದಾಗ ಅವನ ಜೊತೆಗಿದ್ದ ಶಾಸಕ ಎಚ್.ಎಸ್. ಪ್ರಕಾಶ್ ಸೋದರ ಅನಿಲ್ ಮತ್ತು ಈರುಳ್ಳಿ ಗೋಪಾಲ ತಮ್ಮಯ್ಯನ ... ಬೀಳು ತ್ತಿದಂತೆ ಪರಾರಿಯಾಗಿದ್ದಾರೆ.

ಮೇಲಾಗಿ ಹಂತಕರು ಮುಖಕ್ಕೆ ... [illegible]

ಹಾಸನ


ಹಂತಕರ ತಂಡ: ಅನಿಲ, ಪ್ರಶಾಂತ, ಸೂರಿ ರಂಗ ಮಯೂರ್, ...



ತೋಬಾ ತೇಕ್ ಸಿಂಗ್

ದೇಶ ಹೋಳಾದ ಎರಡು ಮೂರು ವರ್ಷಗಳ ನಂತರ ಭಾರತ ಮತ್ತು ಪಾಕಿಸ್ತಾನ ಸರ್ಕಾರಗಳೆರಡೂ ನಾಗರಿಕ ಖೈದಿಗಳಂತೆಯೇ ಹುಚ್ಚರನ್ನೂ ಅದಲುಬದಲು ಮಾಡಿಕೊಳ್ಳುವ ನಿರ್ಧಾರ ಮಾಡಿದವು. ಪರಿಣಾಮವಾಗಿ ಭಾರತದಲ್ಲಿದ್ದ ಹುಚ್ಚಾಸ್ಪತ್ರೆಗಳ ಮುಸ್ಲಿಮ್ ರೋಗಿಗಳನ್ನು ಪಾಕಿಸ್ತಾನಕ್ಕೂ ಪಾಕಿಸ್ತಾನದಲ್ಲಿದ್ದ ಹಿಂದೂ ಮತ್ತು ಸಿಖ್ ಹುಚ್ಚರನ್ನು ಭಾರತಕ್ಕೂ ಹಸ್ತಾಂತರ ಮಾಡಬೇಕಿತ್ತು.

ದೇಶ ಹೋಳಾದ ಎರಡು ಮೂರು ವರ್ಷಗಳ ನಂತರ ಭಾರತ ಮತ್ತು ಪಾಕಿಸ್ತಾನ ಸರ್ಕಾರಗಳೆರಡೂ ನಾಗರಿಕ ಖೈದಿಗಳಂತೆಯೇ ಹುಚ್ಚರನ್ನೂ ಅದಲುಬದಲು ಮಾಡಿಕೊಳ್ಳುವ ನಿರ್ಧಾರ ಮಾಡಿದವು. ಪರಿಣಾಮವಾಗಿ ಭಾರತದಲ್ಲಿದ್ದ ಹುಚ್ಚಾಸ್ಪತ್ರೆಗಳ ಮುಸ್ಲಿಮ್ ರೋಗಿಗಳನ್ನು ಪಾಕಿಸ್ತಾನಕ್ಕೂ ಪಾಕಿಸ್ತಾನದಲ್ಲಿದ್ದ ಹಿಂದೂ ಮತ್ತು ಸಿಖ್ ಹುಚ್ಚರನ್ನು ಭಾರತಕ್ಕೂ ಹಸ್ತಾಂತರ ಮಾಡಬೇಕಿತ್ತು.

ಅದ್ಯಾವ ಸೀಮೆ ನಿರ್ಧಾರವೋ ಯಾರಿಗೆ ಗೊತ್ತು? ಅಂತೂ ಎರಡೂ ಕಡೆಯ ದೊಡ್ಡ ದೊಡ್ಡವರು ಕೂತು ಉನ್ನತ ಮಟ್ಟದ ಸಭೆಗಳನ್ನು ನಡೆಸಿ ಅದಲುಬದಲಿಗೆ ದಿನವೊಂದನ್ನು ಗೊತ್ತು ಮಾಡಿದರು. ವಿವರಗಳೆಲ್ಲವನ್ನೂ ಕೂಲಂಕಷವಾಗಿ ಚರ್ಚಿಸಲಾಯಿತು. ಭಾರತದಲ್ಲಿದ್ದ ಮುಸ್ಲಿಮ್ ಹುಚ್ಚರಿಗೆ ಭಾರತದಲ್ಲಿಯೇ ಬಂಧುಗಳೂ ಇದ್ದರೆ ಅಲ್ಲಿಯೇ ಬಿಡಬಹುದು. ಉಳಿದವರನ್ನು ಗಡಿಗೆ ಕರೆದುಕೊಂಡು ಹೋಗಿ ಹಸ್ತಾಂತರ ಮಾಡಬೇಕು. ಪಾಕಿಸ್ತಾನದಲ್ಲಿದ್ದ ಹಿಂದೂಗಳು ಮತ್ತು ಸಿಖ್ಖರು ಹೇಗೂ ಆಗಲೇ ಹೋಗಿಯಾಗಿತ್ತು. ಹಾಗಾಗಿ ಮುಸ್ಲಿಮರಲ್ಲದ ಖೈದಿಗಳನ್ನು ಇಲ್ಲಿಯೇ ಉಳಿಸಿಕೊಳ್ಳುವ ಪ್ರಶ್ನೆಯೇ ಬರಲಿಲ್ಲ. ಪೊಲೀಸ್ ಉಸ್ತುವಾರಿಯೊಂದಿಗೆ ಗಡಿಯ ಸೀಮೆಯಲ್ಲಿ ಈ ಕಾರ್ಯಕ್ರಮ ಏರ್ಪಾಟಾಯಿತು.

ಆ ಬದಿಯಲ್ಲಿ ಏನಾಯಿತೋ ಗೊತ್ತಿಲ್ಲ. ಇಲ್ಲಿ ಲಾಹೋರಿನ ಹುಚ್ಚಾಸ್ಪತ್ರೆಗೆ ಸುದ್ದಿ ಬಂದಾಗ ಅಲ್ಲಿಯ ನಿವಾಸಿಗಳೆಲ್ಲ ಬಿಸಿ ಬಿಸಿ ಚರ್ಚೆಯಲ್ಲಿ ಮುಳುಗಿ ತೇಲಿದರು. "ಜಮೀನ್ದಾರ್" ಪತ್ರಿಕೆಯನ್ನು ಕಳೆದ ಹನ್ನೆರಡು ವರ್ಷದಿಂದ ಓದುತ್ತಿದ್ದ ಮುಸ್ಲಿಮ್ ಹುಚ್ಚನಿಗೆ ಅವನ ಗೆಳೆಯನೊಬ್ಬ "ಮೌಲ್ವಿ ಸಾಹೇಬ್, ಈ ಪಾಕಿಸ್ತಾನ ಅಂತಾರಲ್ಲ, ಏನದು?" ಎಂದು ಕೇಳಿದ. ಅವನು ಸ್ವಲ್ಪ ಹೊತ್ತು ಗಾಢವಾಗಿ ಯೋಚಿಸಿ ನಂತರ "ಪಾಕಿಸ್ತಾನ ಅಂಥಕ್ಕಂಥಾದ್ದು ಭಾರತದಲ್ಲಿ ಹೆರೆಯುವ ಕತ್ತಿಗಳನ್ನು ತಯಾರಿಸುವ ಒಂದು ಊರು" ಅಂತ ಹೇಳಿದ.

ಪ್ರಶ್ನೆ ಕೇಳಿದ ಹುಚ್ಚನಿಗೆ ಈ ಉತ್ತರದಿಂದ ತೃಪ್ತಿಯಾಯಿತು.

ಒಬ್ಬ ಸಿಖ್ ಹುಚ್ಚ ಇನ್ನೊಬ್ಬ ಸಿಖ್ ಹುಚ್ಚನಿಗೆ "ಅಲ್ಲಾ ಸರ್ದಾರ್ಜೀ, ನಮ್ಮನ್ಯಾಕೆ ಭಾರತಕ್ಕೆ ಕಳಿಸ್ತಾರಂತೆ? ನಮಗೆ ಅವರ ಭಾಷೆ ಸಹ ಬರೋದಿಲ್ವೇ?" ಎಂದು ಕೇಳಿದ.

ಇನ್ನೊಬ್ಬ ನಗುತ್ತಾ "ನನಗೆ ಅವರ ಭಾಷೆ ಗೊತ್ತು. ಭಾರತೀಯರು ಅಂದರೆ ಠೇಂಕಾರದಿಂದ ಓಡಾಡುವ ಮಹಾ ಕೊಬ್ಬಿನ ಜನ" ಅಂತ ಮಾರುತ್ತರ ಕೊಟ್ಟ.

ಸ್ನಾನ ಮಾಡುತ್ತಿದ್ದ ಮುಸ್ಲಿಮ್ ಹುಚ್ಚನೊಬ್ಬ "ಪಾಕಿಸ್ತಾನ್ ಜಿಂದಾಬಾದ್" ಎಂದು ಎಷ್ಟು ಜೋರಾಗಿ ಕಿರುಚಿದನೆಂದರೆ ಧಡ್ಡನೆ ಕೆಳಗೆ ಬಿದ್ದು ಸಪಾಟಾಗಿ ಮಲಗಿಯೇ ಬಿಟ್ಟ!

ಅಲ್ಲಿ ಕೆಲವು ಹುಚ್ಚರಲ್ಲದ 'ಹುಚ್ಚ'ರೂ ಇದ್ದರು. ಕೊಲೆಗಿಲೆ ಮಾಡಿದ್ದ ಅವರನ್ನು ನೇಣುಗಂಬದ ಉರುಲಿನಿಂದ ತಪ್ಪಿಸಲು ಅವರ ಬಂಧುಗಳು ಹುಚ್ಚಾಸ್ಪತ್ರೆಯ ಅಧಿಕಾರಿಗಳಿಗೆ ಮಸ್ತಾಗಿ ಲಂಚ ತಿನ್ನಿಸಿ ಅಲ್ಲಿಗೆ ತಳ್ಳಿಸಿದ್ದರು. ಭಾರತ ಯಾಕೆ ಹೋಳಾಗಿದೆ ಮತ್ತು ಪಾಕಿಸ್ತಾನ ಎಂದರೇನು ಎಂದು ಅವರಿಗೆ ಅಷ್ಟೋ ಇಷ್ಟೋ ಅರ್ಥವಾಯಿತು, ಆದರೆ ಪೂರ್ತಿ ಗೊತ್ತಿರಲಿಲ್ಲ. ಸಮಾಚಾರ ಪತ್ರಿಕೆಗಳು ಅದರ ಬಗ್ಗೆ ಹೆಚ್ಚಿಗೆ ಮಾಹಿತಿ ಕೊಡಲಿಲ್ಲ. ಉಸ್ತುವಾರಿ ನೋಡಿಕೊಳ್ಳುತ್ತಿದ್ದ ಅನಕ್ಷರಸ್ಥ ಕಾವಲಿನವರಿಂದಲೂ ಹೆಚ್ಚಿಗೆ ಪ್ರಯೋಜನವಾಗಲಿಲ್ಲ. ಅವರಿಗೆ ಗೊತ್ತಾಗಿದ್ದು ಇಷ್ಟೇ: ಯಾರೋ ಮಹಮ್ಮದ್ ಅಲಿ ಜಿನ್ನಾ ಎಂಬುವನಂತೆ. ಜನ ಅವನನ್ನು ಖೈದ್-ಎ-ಆಜಮ್ ಎಂದು ಕರೆಯುತ್ತಾರಂತೆ. ಮುಸ್ಲಿಮರಿಗೆ ಪ್ರತ್ಯೇಕವಾದ ದೇಶವೊಂದನ್ನು ಸ್ಥಾಪಿಸಿದಾನಂತೆ. ಅದರ ಹೆಸರು ಪಾಕಿಸ್ತಾನವಂತೆ. ಅದು ಎಲ್ಲಿದೆ ಅಂತಾಗಲೀ, ಅದರ ಅಂಚು ಸೆರಗುಗಳು ಯಾವು ಅಂತಾಗಲೀ ಏನೂ ಗೊತ್ತಿಲ್ಲ. ಪೂರ್ತಿ ತಲೆ ಕೆಟ್ಟಿಲ್ಲದವರು ತಾವು ಈಗ ಇರುವುದು ಭಾರತದಲ್ಲೋ ಅಥವಾ ಪಾಕಿಸ್ತಾನದಲ್ಲೋ ಎಂದು ತಿಳಿಯದೆ ತಬ್ಬಿಬ್ಬಾದರು. ಅವರಿರುವುದು ಭಾರತದಲ್ಲಿ ಎಂದಾದರೆ ಈ ಪಾಕಿಸ್ತಾನ ಅಂಥಕ್ಕಂಥಾದ್ದು ಎಲ್ಲಿದೆ? ಅಥವಾ ಪಾಕಿಸ್ತಾನದಲ್ಲಿ ಇರುವುದಾದರೆ ಇಲ್ಲಿಯ ತನಕ ಅದನ್ನು ಭಾರತ ಅಂತ ಯಾಕೆ ಕರೆಯುತ್ತಿದ್ದರು?

ಒಬ್ಬ ಹುಚ್ಚನಿಗಂತೂ ಇದರ ಬಗ್ಗೆ ಯೋಚಿಸೀ ಯೋಚಿಸೀ ತಲೆಯೇ ಕೆಟ್ಟು ಹೋಯಿತು. ಒಂದು ದಿನ ಮರ ಹತ್ತಿ ಎರಡು ಗಂಟೆಯ ಕಾಲ ರೆಂಬೆಯೊಂದರ ಮೇಲೆ ಕೂತು ವಿಭಜನೆ ಎಂಬ ಗಹನವಾದ ವಿಷಯದ ಬಗ್ಗೆ ಒಂದೇ ಸಮ ಭಾಷಣ ಬಿಗಿದಿದ್ದೂ ಬಿಗಿದಿದ್ದೇ. ಪಹರೆಯವರು ಕೆಳಗಿಳಿಯಲು ಆಜ್ಞಾಪಿಸಿದರೆ ಇನ್ನೂ ಮೇಲೆ ಹತ್ತಿ ಕೂತ. ಬೆದರಿಕೆ ಹಾಕಿದರೆ "ನನಗೆ ಪಾಕಿಸ್ತಾನವೂ ಬೇಡ, ಭಾರತವೂ ಬೇಡ. ಈ ಮರವೇ ಸಾಕು" ಅಂತ ಪಟ್ಟು ಬಿಡದೆ ಕೂತ. ಹೇಗೇಗೋ ಪುಸಲಾಯಿಸಿ ಅಂತೂ ಕೆಳಗಿಳಿಸುವ ಹೊತ್ತಿಗೆ ಕಾವಲಿನವರಿಗೆ ಸಾಕಪ್ಪಾ ಸಾಕು ಅಂತನ್ನಿಸಿತು. ಕೆಳಗಿಳಿದವನೇ ತನ್ನ ಹಿಂದೂ ಮತ್ತು ಸಿಖ್ ಗೆಳೆಯರನ್ನು ಅಪ್ಪಿಕೊಂಡು ಗೊಳೋ ಎಂದು ಅತ್ತ.

ಒಬ್ಬ ಎಂ. ಎಸ್ ಮಾಡಿ ರೇಡಿಯೋ ಎಂಜಿನಿಯರ್ ಆಗಿದ್ದವನು. ಬೇರೆಯವರೊಂದಿಗೆ ಅಷ್ಟಾಗಿ ಬೆರೆಯದೇ ತೋಟದ ಕಾಲುದಾರಿಯಲ್ಲಿ ಶತಪಥ ಅಡ್ಡಾಡುತ್ತಾ ಮೌನವಾಗಿ ಕಾಲಕಳೆಯುತ್ತಿದ್ದವ. ಸುದ್ದಿ ಕೇಳಿದ್ದೇ ಬಟ್ಟೆಗಳೆಲ್ಲವನ್ನೂ ಕಿತ್ತೊಗೆದು ಬೆತ್ತಲೆಯಾಗಿ ಅಲ್ಲಿಂದಿಲ್ಲಿಗೆ ದಿಕ್ಕುಗೆಟ್ಟವನಂತೆ ಓಡಾಡಿದ.

ಚಿನಿಯೋಟ್ ಎಂಬಲ್ಲಿಂದ ಬಂದಿದ್ದ ಧಡಿಯ ಮುಸ್ಲಿಮನೊಬ್ಬ ಮುಸ್ಲಿಮ್ ಲೀಗಿನ ಕಾರ್ಯಕರ್ತನಾಗಿದ್ದವ. ದಿನಕ್ಕೆ ಹತ್ತು ಹದಿನೈದು ಸಲ ಸ್ನಾನ ಮಾಡುವ ಅಭ್ಯಾಸವಿದ್ದವನು. ಸುದ್ದಿ ಕೇಳಿ ಬೆಳಕು ಹರಿಯುವುದರಲ್ಲಿ ತನ್ನ ಅಭ್ಯಾಸವನ್ನು ತ್ಯಜಿಸಿಬಿಟ್ಟ. ಅವನ ಹೆಸರು ಮಹಮ್ಮದ್ ಅಲಿ. ಒಂದು ದಿನ ಹಠಾತ್ತಾಗಿ ತಾನೇ ಖೈದ್-ಎ-ಆಜಮ್ ಮಹಮ್ಮದ್ ಅಲಿ ಜಿನ್ನಾ ಎಂದು ಘೋಷಿಸಿದ. ಇದನ್ನು ಕೇಳಿದ್ದೇ ಸಿಖ್ ಹುಚ್ಚನೊಬ್ಬ ಮಾಸ್ಟರ್ ತಾರಾ ಸಿಂಗ್ ನಾನೇ ಎಂದು ಒದರಿದ. ಅತ್ಯಂತ ಅಪಾಯಕಾರಿ ಹುಚ್ಚರು ಎಂಬ ಹಣೆಪಟ್ಟಿ ಹಚ್ಚಿ ಅವರನ್ನು ಪ್ರತ್ಯೇಕ ವಸತಿಗಳಿಗೆ ನೂಕಿಲ್ಲದಿದ್ದರೆ ಆ ದಿನ ರಕ್ತಪಾತವೇ ನಡೆಯುತ್ತಿತ್ತು!

ಲಾಹೋರಿನ ಒಬ್ಬ ಹಿಂದೂ ಯುವಕನೊಬ್ಬ ವೃತ್ತಿಯಲ್ಲಿ ವಕೀಲ. ಪಾಪ, ಪ್ರೇಮ ಪ್ರಕರಣದಲ್ಲಿ ಸಿಕ್ಕು ಹುಚ್ಚಾಗಿದ್ದವ. ಅವನು ಪ್ರೀತಿಸುತ್ತಿದ್ದ ಹಿಂದೂ ಹುಡುಗಿ ಅಮೃತಸರದವಳು. ಅವಳು ಅವನ ಪ್ರೇಮವನ್ನು ತಿರಸ್ಕರಿಸಿದ್ದರೂ ಅವನು ಮಾತ್ರ ತಲೆ ಕೆಟ್ಟರೂ ಅವಳನ್ನು ಮರೆತಿರಲಿಲ್ಲ. ಈಗ ಅಮೃತಸರ ಭಾರತದಲ್ಲಿದೆ ಎಂದು ಕೇಳಿ ಅವನ ಎದೆಯೇ ಒಡೆದು ಹೋಯಿತು. ತಮ್ಮಿಬ್ಬರನ್ನೂ ಬೇರೆಯಾಗಿಸಿದ ಮುಸ್ಲಿಮ್ ನಾಯಕರಿಗೆ ಹಿಡಿ ಹಿಡಿ ಶಾಪ ಹಾಕಿದ. ಉಳಿದ ಹುಚ್ಚರು ಅವನೂ ಸಧ್ಯದಲ್ಲೇ ಭಾರತಕ್ಕೇ ಹೋಗಬೇಕು ಎಂದು ಹೇಳಿ ಸಮಾಧಾನ ಮಾಡಲು ಪ್ರಯತ್ನಿಸಿದರು. ಅದು ಹೇಗೆ ಸಾಧ್ಯ? ತನ್ನ ಪ್ರಾಕ್ಟೀಸ್ ಇರುವುದು ಲಾಹೋರಿನಲ್ಲಿ, ಅಮೃತಸರದಲ್ಲಿ ಅಷ್ಟು ಚೆನ್ನಾಗಿ ಪ್ರಾಕ್ಟೀಸ್ ನಡೆಯದಿದ್ದರೆ?

ಯುರೋಪಿಯನ್ನರಿಗೆ ಮೀಸಲಾದ ವಾರ್ಡುಗಳಲ್ಲಿ ಆಂಗ್ಲೋ ಇಂಡಿಯನ್ ಹುಚ್ಚರಿದ್ದರು. ಭಾರತಕ್ಕೆ ಸ್ವಾತಂತ್ರ್ಯ ವನ್ನು ಕೊಟ್ಟು ಇಂಗ್ಲಿಷರು ಕಾಲ್ತೆಗೆದಿದ್ದಾರೆ ಎಂದು ಕೇಳಿದ ಅವರಿಗೆ ಆಕಾಶವೇ ಕುಸಿದು ಬಿದ್ದಂತೆನ್ನಿಸಿತು. ಇದರಿಂದ ಹುಚ್ಚಾಸ್ಪತ್ರೆಯಲ್ಲಿ ತಮ್ಮ ಸ್ಥಾನಮಾನ ಏನಾಗಬಹುದು ಎಂದು ಅವರೆಲ್ಲ ಒಟ್ಟುಗೂಡಿ ಗಂಟೆಗಟ್ಟಲೆ ಪಿಸಪಿಸನೆ ಬಿಸಿ ಚರ್ಚೆ ನಡೆಸಿದರು. ಈ ಯುರೋಪಿಯನ್ ವಾರ್ಡ್ ಅನ್ನುವುದು ಇರುತ್ತದೋ ಇಲ್ಲವೋ! ಇನ್ನು ಮೇಲೆ ಇಂಗ್ಲಿಷ್ ಮಾದರಿಯ ಬೆಳಗಿನ ಉಪಹಾರ ಸಿಗುತ್ತೋ ಇಲ್ಲವೋ! ಬ್ರೆಡ್ ಬದಲು ಆ ದರಿದ್ರ ಚಪಾತಿಗಳನ್ನೇ ತಿನ್ನಲು ಕೊಟ್ಟುಬಿಟ್ಟರೆ!!

ಒಬ್ಬ ಸಿಖ್ ಹುಚ್ಚ ಹದಿನೈದು ವರ್ಷದಿಂದ ಅಲ್ಲಿಯೇ ಇದ್ದ. ಅವನದು ವಿಚಿತ್ರ ಭಾಷೆ. ಆಗಾಗ್ಗೆ "ಉಪ್ರಿ ಗುರ್ ಗುರ್ ದಿ ಅನೆಕ್ಸ್ ದಿ ಬೇ-ಧಿಯಾನ್ ಓ ಮೂಂಗ್ ದಿ ದಾಲ್ ಆಫ್ ದಿ ಲಾಲ್‌ತೀನ್" ಎಂದು ಅಸಂಬದ್ಧವಾಗಿ ಗೊಣಗುತ್ತಿದ್ದ. ನಿದ್ದೆ ಅವನ ಹತ್ತಿರ ಸುಳಿಯುತ್ತಿರಲಿಲ್ಲ. ಪಹರೆಯವರ ಪ್ರಕಾರ ಅವನು ಹದಿನೈದು ವರ್ಷದಿಂದ ಒಂದಿಷ್ಟೂ ನಿದ್ದೆ ಮಾಡಿಲ್ಲವಂತೆ. ಆಗಾಗ್ಗೆ ಗೋಡೆಯನ್ನು ಆನಿಸಿ ನಿಂತು ಅಷ್ಟೋ ಇಷ್ಟೊ ವಿಶ್ರಾಂತಿ ತೆಗೆದುಕೊಳ್ಳುತ್ತಿದ್ದ ಅಷ್ಟೇ. ನಿಂತೂ ನಿಂತೂ ಅವನ ಕಾಲು, ಅಂಗಾಲು ಊದಿದ್ದರೂ ಸಹ ನೆಲದ ಮೇಲೆ ಮಲಗಿ ವಿರಮಿಸಲು ಅವ ಸುತಾರಾಂ ಒಪ್ಪುತ್ತಿರಲಿಲ್ಲ. ಭಾರತ, ಪಾಕಿಸ್ತಾನ, ಸಧ್ಯದಲ್ಲೇ ನಡೆಯಲಿರುವ ಹುಚ್ಚರ ಹಸ್ತಾಂತರ ಇತ್ಯಾದಿಗಳ ಸುದ್ದಿ ಬಂದಾಗೆಲ್ಲ ತನ್ಮಯತೆಯಿಂದ ಆಲಿಸುತ್ತಿದ್ದ. ಅವನ ಅಭಿಪ್ರಾಯವನ್ನು ಕೇಳಿದ್ದೇ ಆದರೆ ತುಂಬ ಗಂಭೀರವಾಗಿ "ಉಪ್ರಿ ಗುರ್ ಗುರ್ ದಿ ಅನೆಕ್ಸ್ ದಿ ಬೇ-ಧಿನಿಯಾ ದಿ ಮೂಂಗ್ ದಿ ದಾಲ್ ಆಫ್ ದಿ ಪಾಕಿಸ್ತಾನ್ ಗೋರ್ನಮೆಂಟ್" ಎಂದು ಉತ್ತರಿಸುತ್ತಿದ್ದ!

ಬರಬರುತ್ತಾ "ಆಫ್ ದಿ ಪಾಕಿಸ್ತಾನ್ ಗೋರ್ನಮೆಂಟ್" ಬದಲಾಗಿ "ಆಫ್ ದಿ ತೋಬಾ ತೇಕ್ ಸಿಂಗ್ ಗೋರ್ನಮೆಂಟ್" ಎಂದು ಬಡಬಡಿಸಲಾರಂಭಿಸಿದ. ತೋಬಾ ತೇಕ್ ಸಿಂಗ್ ಈಗ ಎಲ್ಲಿದೆ? ಯಾವ ದೇಶಕ್ಕೆ ಸೇರಿದೆ? ಎಂದು ಇತರ ಹುಚ್ಚರ ಬಳಿ ವಿಚಾರಿಸಲು ಪ್ರಾರಂಭಿಸಿದ. ಉತ್ತರ ಯಾರಿಗೂ ಗೊತ್ತಿರಲಿಲ್ಲ. ಬದಿಸಿದಷ್ಟೂ ಇನ್ನೂ ಕಗ್ಗಂಟಾಯಿತು. ಒಂದು ಕಾಲದಲ್ಲಿ ಭಾರತದಲ್ಲಿದ್ದ ಸಿಯಾಲ್‌ಕೋಟ್ ಈಗ ಪಾಕಿಸ್ತಾನದಲ್ಲಿದೆಯಂತೆ! ಈಗ ಪಾಕಿಸ್ತಾನದಲ್ಲಿರುವ ಲಾಹೋರ್ ನಾಳೆ ಭಾರತಕ್ಕೆ ಹೋಗೋಲ್ಲ ಎಂದು ಏನು ಗ್ಯಾರಂಟಿ? ಅಥವಾ ಇಡೀ ಭಾರತವೇ ಪಾಕಿಸ್ತಾನಕ್ಕೆ ಬಂದರೂ ಬರಬಹುದಲ್ಲ! ಅಥವಾ ಈ ಭಾರತ ಮತ್ತು ಪಾಕಿಸ್ತಾನ ಎರಡೂ ನಾಳೆ ಥಟ್ಟನೆ ಮಾಯವಾದರೆ??

ಕಥೆ

ಕನ್ನಡಕ್ಕೆ : ಸುಕನ್ಯಾ ಕನಾರಳ್ಳಿ

(ಮೂಲ: ಸಾದತ್ ಹಸನ್ ಮಾಂಟೋ ಅವರ ಉರ್ದು ಕಥೆ "ತೋಬಾ ತೇಕ್ ಸಿಂಗ್")

ಈ ಸಿಖ್ ಹುಚ್ಚನ ಕೂದಲು ತೆಳ್ಳಗೆ ಗೋಜಲು ಗೋಜಲಾಗಿತ್ತು. ಸಾಕಷ್ಟು ಆರೈಕೆಯಿಲ್ಲದೆ ತಲೆಕೂದಲು ಮತ್ತು ಗಡ್ಡ ಜಡೆಗಟ್ಟಿ ಅವನ ರೂಪ ಭ[ಯ] ಹುಟ್ಟಿಸುವಂತಿತ್ತು. ಆದರೂ ಅವನು ಪಾಪದ ಪ್ರಾ[ಣಿ]. ಹದಿನೈದು ವರ್ಷದಲ್ಲಿ ಒಬ್ಬರ ಹತ್ತಿರವೂ ಜ[ಗಳ]ಗಳ ಮಾಡದವ.

ಕಾವಲಿನವರಿಗೆ ಅವನ ಜಮೀನು ತೋ[ಬಾ] ತೇಕ್ ಸಿಂಗ್ ಜಿಲ್ಲೆಯಲ್ಲಿತ್ತು ಅಂತಷ್ಟೇ ಗೊತ್ತಿ[ತ್ತು]. ಆಳೂಕಾಳೂ ಇದ್ದು ಆಸ್ತಿವಂತನಾಗಿದ್ದವನಿಗೆ ಹಠಾತ್ತಾ[ಗಿ] ತಲೆ ಕೆಟ್ಟಿತಂತೆ. ಸಂಬಂಧಿಕರು ಕೈಕಾಲನ್ನು ಸರ[ಪಳಿ]ಯಿಂದ ಬಿಗಿದು ಹುಚ್ಚಾಸ್ಪತ್ರೆಯಲ್ಲಿ ಎತ್ತಿ ಹಾ[ಕಿ] ಹೋದರು.

ತಿಂಗಳಿಗೊಮ್ಮೆ ಅವನ ಮನೆಯವ[ರು] ನೋಡಲು ಬರುತ್ತಿದ್ದರು. ಆರೋಗ್ಯವಾಗಿ ಇದ್ದಾ[ನೆ] ಎಂದು ಖಚಿತಪಡಿಸಿಕೊಂಡು ವಾಪಸ್ ಹೋಗು[ತ್ತಿ]ತ್ತಿದ್ದರು. ವರ್ಷಾನುಗಟ್ಟಲೆ ನಡೆದ ಈ ಪದ್ಧತಿ ಭಾರ[ತ] ಪಾಕಿಸ್ತಾನ ಎಂಬ ಕಷ್ಟಗಳು ಪ್ರಾರಂಭವಾದ ತ[ಕ್ಷಣ] ನಿಂತು ಹೋಯಿತು.

ಈ ಹುಚ್ಚನ ಹೆಸರು ಬಶನ್ ಸಿಂಗ್. ಎಲ್ಲ[ರೂ] ಕರೆಯುತ್ತಿದ್ದದ್ದು ತೋಬಾ ತೇಕ್ ಸಿಂಗ್ ಅಂತ[ಲೇ]. ಅವನಿಗೆ ಕಾಲದ ಪ್ರಜ್ಞೆ ಅಲ್ಪಸ್ವಲ್ಪ ಇತ್ತಷ್ಟೇ. ಆ[ದರೆ] ತನ್ನ ಸಂಬಂಧಿಗಳು ಯಾವಾಗ ಬರುತ್ತಾರೆ ಎನ್ನುವ[ುದು] ಅದು ಹೇಗೋ ಹೊಳೆಯುತ್ತಿತ್ತು. ಡ್ಯೂಟಿ ಮೇಲಿ[ದ್ದ] ಅಧಿಕಾರಿಗೆ ತನ್ನ ಬಂಧುಗಳ ಭೇಟಿ ಹತ್ತಿರವಾಗುತ್ತಿ[ದೆ] ಎಂದು ಸೂಚನೆ ಕೊಡುತ್ತಿದ್ದ. ಆವತ್ತಿನ ದಿನ ಸ್ನಾ[ನ] ಮಾಡಿ, ತಲೆಗೆ ಎಣ್ಣೆ ಹಾಕಿ, ನೀಟಾಗಿ ಬಾ[ಚಿ] ರೆಡಿಯಾಗಿರುತ್ತಿದ್ದ. ತನ್ನಲ್ಲಿದ್ದ ಒಳ್ಳೆಯ ಬಟ್ಟೆಯನ್ನು ಹಾ[ಕಿ] ಅವರನ್ನು ನೋಡಲು ಹೋಗುತ್ತಿದ್ದ.

ಅವರೇನಾದರೂ ಕೇಳಿದರೆ ಮೌನವೇ ಉತ್ತ[ರ]. ಇಲ್ಲದಿದ್ದರೆ "ಉಪ್ರಿ ಗುಲ್ ಗುರ್ ದಿ ಅನೆಕ್ಸ್ ದಿ ಬೇ-[ಧಿ]ಯಾನ ದಿ ಮೂಂಗ್ ದಿ ದಾಲ್ ಆಫ್ ದಿ ಲಾಲ್‌ತೀನ್" ಎಂದು ಬಡಬಡಿಸುತ್ತಿದ್ದ!

ಅವನಿಗೆ ಈಗ ಹದಿನೈದು ವರ್ಷ[ದ] ಮಗಳೊಬ್ಬಳಿದ್ದಳು. ತಿಂಗಳಿಗೆ ಬೆರಳುದ್ದ ಎತ್ತರ ಬೆಳೆಯು[ತ್ತಿ]ತ್ತಿದ್ದವಳು. ಅವನನ್ನು ನೋಡಲು ಬಂದಾಗ ಅವಳ ಗುರು[ತೇ] ಹತ್ತಲಿಲ್ಲ! ಚಿಕ್ಕಂದಿನಲ್ಲಿ ಅಪ್ಪನ ಮುಖ ನೋಡಿದಾ[ಗ] ಬ್ಬಾ ಎಂದು ಅತ್ತ ಹುಡುಗಿ ಬೆಳೆದರೂ ಅಪ್ಪನ ಮು[ಖ] ನೋಡಿದ್ದೇ ಅತ್ತಳು.

ದೇಶ ಒಡೆದು ಕಷ್ಟಗಳು ಪ್ರಾರಂಭವಾದ ಕ್ಷ[ಣ] ಬಶನ್ ಸಿಂಗ್ ತೋಬಾ ತೇಕ್ ಸಿಂಗ್ ಎಲ್ಲಿದೆ ಎಂ[ದು] ಎಲ್ಲ ಹುಚ್ಚರನ್ನೂ ಕೇಳಲು ಪ್ರಾರಂಭಿಸಿದ. ಯಾ[ರೂ] ಸರಿಯಾದ ಉತ್ತರ ಕೊಡಲಿಲ್ಲ. ಅವನ ಚಿಂತೆ ದಿನದಿ[ಂದ] ದಿನಕ್ಕೆ ಹೆಚ್ಚುತ್ತಲೇ ಹೋಯಿತು.

ಅವನ ಬಂಧುಗಳು ಬರುವುದನ್ನೇ ನಿಲ್ಲಿಸಿಬಿಟ್ಟ[ರು]. ಮುಂಚೆಯೆಲ್ಲಾ ಅವರು ಯಾವಾಗ ಬರುತ್ತಾರೆ ಎಂ[ದು] ನಿಖರವಾಗಿ ಊಹಿಸುತ್ತಿದ್ದವನಿಗೆ ಒಳಗಿನ ದನಿಯೊಂ[ದು] ಸ್ತಬ್ಧವಾದಂತೆನ್ನಿಸಿತು. ಹೂವು, ಹಣ್ಣು, ಬಟ್ಟೆ, ಮಿಠಾಯಿ [...] ಜೊತೆಗೆ ನಾಲ್ಕು ಒಳ್ಳೆಯ ಮಾತಾಡುತ್ತಿದ್ದ ಅವರ[ನ್ನು] ಕಂಡರೆ ಅವನಿಗೆ ಆದರವಿತ್ತು. ಅವರಾದರೂ ಬಂದಿ[ದ್ದರೆ] ಈ ತೋಬಾ ತೇಕ್ ಸಿಂಗ್ ಎಲ್ಲಿದೆ, ಭಾರತದಲ್ಲಿದೆಯೆ[ೋ] ಪಾಕಿಸ್ತಾನದಲ್ಲೋ ಅಂತಲಾದರೂ ಹೇಳುತ್ತಿದ್ದರಲ್ಲ! ಅವ[ರು] ಅಲ್ಲಿಯವರೇ ತಾನೇ?

ತಾನೇ ದೇವರು ಎಂದು ಭಾವಿಸುತ್ತಿದ್ದ ಒಬ್ಬ ಹು[ಚ್ಚ] ಅಲ್ಲಿದ್ದ. ತೋಬಾ ತೇಕ್ ಸಿಂಗ್ ಎನ್ನುವುದು ಭಾರತ[ದಲ್ಲಿ]ದೆಯೋ, ಪಾಕಿಸ್ತಾನದಲ್ಲೋ ಎಂದು ಬಶನ್ ಸಿಂ[ಗ್] ಕೇಳಿದ್ದೇ, ಆ ಹುಚ್ಚ ಗಹಗಹಿಸಿ ನಕ್ಕು "ನಾನು ಅದ[ನ್ನು] ಎಲ್ಲಿ ಹಾಕಬೇಕು ಎಂದು ಇನ್ನೂ ನಿರ್ಧರಿಸಿಲ್ಲ. ಹಾ[ಗಾಗಿ] ಅದು ಅಲ್ಲೂ ಇಲ್ಲ, ಇಲ್ಲೂ ಇಲ್ಲ" ಎಂದು ಉತ್ತರ[ಿಸಿದ].

ಬಶನ್ ಸಿಂಗ್ ಈ 'ದೇವರನ್ನು' ಪರಿಪರಿಯಾ[ಗಿ] ಬೇಡಿಕೊಂಡ. ಆದಷ್ಟೂ ಬೇಗ ಈ ತೋಬಾ ತೇ[ಕ್] ಸಿಂಗ್ ಗೊಂದಲವನ್ನು ಪರಿಹರಿಸಿದರೆ ತನ್ನ ಗೊಂದ[ಲ] ಕಷ್ಟ ಕಾರ್ಪಣ್ಯಗಳೆಲ್ಲವೂ ಕೊನೆಗೊಳ್ಳುವುದರಿಂದ ತನ್ನ[ನ್ನು] ಉದ್ಧರಿಸಬೇಕೆಂದು ವಿನೀತನಾಗಿ ಕೇಳಿಕೊಂಡ. ಆ[ದರೆ] "ದೇವರು" ಇತರ ತುರ್ತಿನ ಆಜ್ಞೆಗಳನ್ನು ನೀಡುವುದ[ರಲ್ಲಿ] ಮುಳುಗಿ ಹೋಗಿದ್ದರಿಂದ ಸಧ್ಯಕ್ಕೆ ಈ ಜುಜು[ಬಿ] ವಿಷಯವನ್ನು ಕೈಗೆತ್ತಿಕೊಳ್ಳಲಾಗಲಿಲ್ಲ. ಬೇಡೀ, ಬೇ[ಡೀ] ಸುಸ್ತಾದ ಬಶನ್ ಸಿಂಗ್ ಒಂದು ದಿನ ತಾಳ್ಮೆ ಕಳೆದುಕೊಂ[ಡು] ಅಬ್ಬರಿಸಿದ. "ಉಪ್ರಿ ಗುರ್ ಗುರ್ ದಿ ಅನೆಕ್ಸ್ ದಿ ಬೇ-ಧಿಯಾನ ದಿ ಮೂಂಗ್ ದಿ ದಾಲ್ ಆಫ್ ವಹಾ[ಹೆ] ಗುರೂಕಿ ವಾ ಖಲ್ಸಾ ಅಂಡ್ ವಹಾಯ್ ಗುರೂಜಿ[ಕಿ] ಫತಾಹ್, ಜೋ ಬೋಲೆ ಸೋ ನೆಹಾಲ್ ಸತ್ ಅಕಾ[ಲ್]."

"ನೀನೊಬ್ಬ ಮುಸ್ಲಿಮ್ ದೇವರು. ಒಂದು [ವೇಳೆ] ಸಿಖ್ ದೇವರಾಗಿದ್ದರೆ ನನಗೆ ಸಹಾಯ ಮಾಡಿರುತ್ತಿ[ದ್ದೆ]" ಎನ್ನುವುದು ಅವನ ಉದ್ದೇಶಿತ ಅರ್ಥವಾಗಿತ್ತೋ ಏನೋ.

ಅದಲುಬದಲಿಗೆ ಸ್ವಲ್ಪ ದಿನಗಳ ಮುಂಚೆ ತೋ[ಬಾ] ತೇಕ್ ಸಿಂಗ್‌ನಿಂದ ಬಶನ್ ಸಿಂಗ್‌ನ ಮುಸ್ಲಿ[ಮ್] ಗೆಳೆಯನೊಬ್ಬ ಅವನನ್ನು ಭೇಟಿಯಾಗಲು ಬಂದ. ಅವ[ನು] ಹುಚ್ಚಾಸ್ಪತ್ರೆಗೆ ಯಾವತ್ತೂ ಬಂದಿದ್ದೇ ಇಲ್ಲ. ಅವನ ಮು[ಖ] ಕಂಡಿದ್ದೇ ಬಶನ್ ಸಿಂಗ್ ಥಟ್ಟನೆ ಬೆನ್ನು ಹಾಕಿ ಹೊ[ರಟ].

ಕಾವಲಿನವನು ಅವನನ್ನು ತಡೆದು "ಅವನು

...ಹಿತ ಫಜಲುದ್ದೀನ್. ನಿನ್ನನ್ನು ನೋಡಲು ಬಂದಿದ್ದಾನೆ" ಎಂದ.

ಫಜಲುದ್ದೀನನನ್ನು ನೋಡಿ ಬಶನ್ ಸಿಂಗ್ ಏನೋ ಗೊಣಗಿದ. ಫಜಲುದ್ದೀನ್ ಮುಂದೆ ಬಂದು ಅವನ ಮೊಣಕೈ ಹಿಡಿದು ನಿಲ್ಲಿಸಿದ. "ಎಷ್ಟೋಂದು ವರ್ಷಗಳಿಂದ ನಿನ್ನನ್ನು ನೋಡಬೇಕು ಅಂತ ಅಂದು ...ಳ್ಳುತ್ತಿದ್ದೆ. ಇಲ್ಲಿಯತನಕ ಆಗಲಿಲ್ಲ, ನೋಡು. ನಿನ್ನ ಬಂಧುಗಳೆಲ್ಲ ...ರತಕ್ಕೆ ಹೋದರು. ಕ್ಷೇಮವಾಗಿ ಹೋಗಲು ನನ್ನ ಕೈಲಾದಷ್ಟು ಸಹಾಯ ಮಾಡಿದೆ. ನಿನ್ನ ಮಗಳು ರೂಪ್ ಕರ್...."

ಬಶನ್ ಸಿಂಗ್‌ಗೆ ಏನೋ ನೆನಪಿಗೆ ಬಂದಂತೆನ್ನಿಸಿತು. "ಮಗಳು ರೂಪ್ ಕರ್...?"

ಫಜಲುದ್ದೀನ್ ಒಂದು ಕ್ಷಣ ಹಿಂಜರಿದ. "ಏನಿಲ್ಲಾ...ನಿನ್ನ ಮಗಳು...ಅವಳೂ ಚೆನ್ನಾಗಿದಾಳೆ. ನಿನ್ನ ಬಂಧುಗಳ ಜೊತೆಯೇ ಹೋದಳು."

ಬಶನ್ ಸಿಂಗ್ ಏನೂ ಮಾತಾಡಲಿಲ್ಲ ಫಜಲುದ್ದೀನನೇ ಮುಂದುವರೆಸಿದ. ನಿನ್ನ ಯೋಗಕ್ಷೇಮನ ವಿಚಾರಿಸೋದಿಕ್ಕೆ ಹೇಳಿದ್ರು. ಈಗ ಭಾರತಕ್ಕೆ ಹೋಗ್ತಾ ಇದೀಯಂತೆ. ಬಲ್‌ಬೀರ್ ಸಿಂಗ್ ಮತ್ತು ವಧಾದ ಸಿಂಗ್‌ಗೆ ಸಲಾಮ್ ಹೇಳಿದೆ ಅಂತ ಹೇಳು. ಬಹೆನ್ ಇಮ್ರುತ್ ಕೌರ್‌ಗೆ ಸಹ ...ಹೇಳಿದೆ ಅಂತ ಹೇಳು. ಬಲ್‌ಬೀರ್ ಸಿಂಗ್‌ಗೆ ನಾನು ಚೆನ್ನಾಗಿದೀನಿ ಅಂತ ಹೇಳು. ಅವನು ಬಿಟ್ಟು ಹೋದ ಎರಡು ಕಂದು ಹಸುಗಳಲ್ಲಿ ಒಂದು ಕರು ಹಾಕಿದೆ ಅಂತ ಹೇಳು. ಇನ್ನೊಂದೂ ಹಾಕ್ತು, ಆದರೆ ಆರು ದಿನದಲ್ಲಿ ಸತ್ತು ಹೋಯ್ತು, ಆಮೇಲೆ....ಇನ್ನೇನಾದ್ರೂ ಸಹಾಯ ಬೇಕಿದ್ರೆ ನನಗೆ ತಿಳಿಸೋಕ್ಕೆ ಹೇಳು. ಏನು ಬೇಕಾದ್ರೂ ಮಾಡ್ತೀನಿ. ನಿನಗೆ ಅಂತ ಸ್ವಲ್ಪ ಸಿಹಿ ತಂದೆ ನೋಡು..."

ಸಿಹಿ ಪೊಟ್ಟಣವನ್ನು ಕಾವಲಿನವನಿಗೆ ಕೊಟ್ಟು ಬಶನ್ ಸಿಂಗ್ "ಅದಿರಲಿ, ತೋಬಾ ತೇಕ್ ಸಿಂಗ್ ಎಲ್ಲಿದೆ ಹೇಳು?" ಅಂತ ಕೇಳಿದ.

ಫಜಲುದ್ದೀನ್ ತಬ್ಬಿಬ್ಬಾದ. "ಓ! ತೋಬಾ ತೇಕ್ ಸಿಂಗಾ? ಎಲ್ಲಿದೇ? ಅದೆಲ್ಲಿತ್ತೋ ಅಲ್ಲೇ ಇದೆ,"

"ಭಾರತದಲ್ಲಿದೆಯಾ ಅಥವಾ ಪಾಕಿಸ್ತಾನದಲ್ಲಿದೆಯಾ?" ಬಶನ್ ಸಿಂಗ್ ಪಟ್ಟು ಬಿಡದೆ ಕೇಳಿದ.

ಫಜಲುದ್ದೀನನಿಗೆ ದುಗುಡ ಇನ್ನಷ್ಟು ಏರಿತು. "ಅದೂ...ಭಾರತದಲ್ಲಿದೆಯಲ್ಲ? ಇಲ್ಲ, ಪಾಕಿಸ್ತಾನದಲ್ಲಿದೆ."

ಬಶನ್ ಸಿಂಗ್ ಹೊರಟುಹೋದ. "ಉಪರ್ ದಿ ಗುರ್ ಗುರ್ ದಿ ...ನೆಕ್ಸ್ ದಿ ಧಿಯಾನ ದಿ ಮೂಂಗ್ ದಿ ದಾಲ್ ಆಫ್ ದಿ ಪಾಕಿಸ್ತಾನ್ ಅಂಡ್ ಹಿಂದೂಸ್ತಾನ್ ಆಫ್ ದಿ ದರ್ ಫತೇ ಮನ್" ಎಂದು ಗೊಣಗುತ್ತಿದ್ದದ್ದು ಕೇಳಿಸಿತು.

ಅಂತೂ ಅದಲುಬದಲಿಗೆ ಎಲ್ಲ ಸಿದ್ಧತೆಗಳೂ ಪೂರ್ತಿಯಾದವು. ಕೊಡಬೇಕಾದ, ಪಡೆಯಬೇಕಾದ ಹುಚ್ಚರ ಪಟ್ಟಿಯೂ ಅಂತಿಮವಾಗಿ ತೀರ್ಮಾನವಾಯಿತು. ದಿನವನ್ನೂ ಗೊತ್ತು ಮಾಡಲಾಯಿತು.

ಝಿಲ್ಲನೆಯ ಚಳಿಗಾಲ. ಲಾಹೋರಿನಲ್ಲಿದ್ದ ಹಿಂದೂ ಮತ್ತು ಸಿಖ್ ಹುಚ್ಚರನ್ನು ಪೊಲೀಸ್ ಸುಪರ್ದಿನಲ್ಲಿ ಟ್ರಕ್ಕುಗಳಿಗೆ ತುಂಬಲಾಯಿತು. ವಾಘಾ ಗಡಿಯಲ್ಲಿ ಪಾಕಿಸ್ತಾನಿ ಮತ್ತು ಭಾರತೀಯ ಅಧಿಕಾರಿಗಳು ಅಧಿಕೃತ ವಿಧಿಗಳನ್ನೆಲ್ಲ ಮುಗಿಸಿದ ಮೇಲೆ ಪ್ರಾರಂಭವಾದ ಅದಲುಬದಲು ರಾತ್ರಿಯಿಡೀ ನಡೆಯಿತು.

ಟ್ರಕ್ಕಿನಿಂದ ಹುಚ್ಚರನ್ನು ಇಳಿಸಿ ಗಡಿಯಾಚೆ ಕಳಿಸುವ ಕೆಲಸ ಸುಲಭದ್ದಾಗಿರಲಿಲ್ಲ, ಕೆಲವರಂತೂ ಟ್ರಕ್ಕಿನಿಂದ ಇಳಿಯಲೂ ನಿರಾಕರಿಸಿದರು. ಇಳಿದವರು ಹಿಡಿತಕ್ಕೆ ಸಿಗದೆ ಅಡ್ಡಾದಿಡ್ಡಿ ಹೋಗಲಾರಂಭಿಸಿದರು. ಬೆತ್ತಲೆ ಹುಚ್ಚರಿಗೆ ಗಾರ್ಡ್‌ಗಳು ಬಲವಂತವಾಗಿ ಬಟ್ಟೆ ಹಾಕ ಹೋದರೆ ಬಟ್ಟೆಗಳು ಹರಿದುಹೋದವು. ಕೆಲವರು ಹಿಡಿಶಾಪ ಹಾಕುತ್ತಿದ್ದರೆ, ಇನ್ನೂ ಕೆಲವರು ಹಾಡುತ್ತಿದ್ದರು. ಉಳಿದವರು ಕಚ್ಚಾಡುತ್ತಿದ್ದರು. ಅಳುವಿನ ಜೊತೆಯೇ ಮಾತು, ಗೊಣಗಾಟ. ಯಾರಿಗೂ ಅರ್ಥವಾಗುತ್ತಿರಲಿಲ್ಲ, ಹುಚ್ಚ ಹೆಂಗಸರು ತಮ್ಮದೇ ರೀತಿಯ ರಂಪವನ್ನು ಎಬ್ಬಿಸುವುದರಲ್ಲಿ ಮುಳುಗಿದ್ದರು. ಹಲ್ಲು ಕಟಕಟಿಸುವಂತ ಚಳಿ.

ಅಲ್ಲಿದ್ದ ಹೆಚ್ಚಿನ ಹುಚ್ಚರಿಗೆ ಈ ಅದಲುಬದಲು ಸ್ವಲ್ಪವೂ ಇಷ್ಟವಿರಲಿಲ್ಲ. ಇದ್ದ ಕಡೆಯಿಂದ ಎಬ್ಬಿಸಿ ಯಾವುದೋ ಕಾಣದೂರಿಗೆ ಯಾಕೆ ಸಾಗಿಸಬೇಕು? ಯಾರೋ ಅರೆ ಹುಚ್ಚರು "ಪಾಕಿಸ್ತಾನ್ ಜಿಂದಾಬಾದ್" ಎಂದು ಕೂಗಿದ ಕ್ಷಣ ಸಿಖ್ ಮತ್ತು ಮುಸ್ಲಿಮ್ ಹುಚ್ಚರ ನಡುವೆ ಎರಡು ಮೂರು ಕಡೆ ಜಗಳ ಶುರುವಾಯಿತು.

ಬಶನ್ ಸಿಂಗ್ ಸರದಿ ಬಂದಾಗ ಅಧಿಕಾರಿಯನ್ನು ಕೇಳಿದ, "ತೋಬಾ ತೇಕ್ ಸಿಂಗ್ ಎಲ್ಲಿದೆ? ಭಾರತದಲ್ಲಾ? ಪಾಕಿಸ್ತಾನದಲ್ಲಾ?"

ಅಧಿಕಾರಿ ದೊಡ್ಡದಾಗಿ ನಕ್ಕು "ಪಾಕಿಸ್ತಾನದಲ್ಲಿದೆ" ಅಂದ.

ಕೇಳಿದ್ದೇ ತಡ ಬಶನ್ ಸಿಂಗ್ ಹಿಂದಕ್ಕೆ ಹಾರಿ ತನ್ನ ಜೊತೆಯವರು ಇದ್ದ ಕಡೆ ಓಡಲಾರಂಭಿಸಿದ. ಪಾಕಿಸ್ತಾನಿ ಗಾರ್ಡ್‌ಗಳು ಹಿಡಿದು ಗಡಿಯತ್ತ ಎಳೆದರೂ ಪಟ್ಟು ಬಿಡದೇ ನಿಂತ.

"ತೋಬಾ ತೇಕ್ ಸಿಂಗ್ ಇಲ್ಲಿರೋದು!" ಎತ್ತರದ ಧ್ವನಿಯಲ್ಲಿ ಒಂದೇ ಸಮ ಅರಚಲಾರಂಭಿಸಿದ, "ಉಪರ್ ದಿ ಗುರ್ ಗುರ್ ದಿ ಅನೆಕ್ಸ್ ದಿ ಬೇ-ಧಿಯಾನ ಮೂಂಗ್ ದಿ ದಾಲ್ ಆಫ್ ದಿ ತೋಬಾ ತೇಕ್ ಸಿಂಗ್ ಅಂಡ್ ಪಾಕಿಸ್ತಾನ್!"

ತೋಬಾ ತೇಕ್ ಸಿಂಗ್ ಈಗ ಭಾರತದಲ್ಲಿದೆ ಎಂದು ಅಧಿಕಾರಿಗಳು ನಾನಾರು ರೀತಿಯಲ್ಲಿ ನಂಬಿಸಲು ಪ್ರಯತ್ನಿಸಿದರು. ಆಕಸ್ಮಾತ್ ಅಲ್ಲಿದ್ದರೂ ತಕ್ಷಣವೇ ಕಳಿಸಿಕೊಡುವುದಾಗಿ ಆಶ್ವಾಸನೆಯನ್ನು ಕೊಟ್ಟರು. ಆದರೂ ಅವನು ಕೇಳಲಿಲ್ಲ.

ಬಶನ್ ಸಿಂಗ್ ಯಾವತ್ತೂ ನಿರುಪದ್ರವಿಯಾದ್ದರಿಂದ ಅವನನ್ನು ಅಲ್ಲಿಯೇ ನಿಲ್ಲಲು ಬಿಟ್ಟು ಗಾರ್ಡ್‌ಗಳು ತಮ್ಮ ಕೆಲಸ ಮುಂದುವರೆಸಿದರು. ಇಡೀ ರಾತ್ರಿ ಸುಮ್ಮನಿದ್ದ ಬಶನ್ ಸಿಂಗ್ ಸೂರ್ಯ ಹುಟ್ಟುವ ಮುಂಚೆ ವಿಕಾರವಾಗಿ ಕಿರುಚಿದ. ಅಧಿಕಾರಿಗಳು ಎಲ್ಲ ಕಡೆಯಿಂದಲೂ ಓಡಿ ಬಂದರು. ಹದಿನೈದು ವರ್ಷಗಳನ್ನು ನಿಂತೇ ಕಳೆದಿದ್ದ ಬಶನ್ ಸಿಂಗ್ ಈಗ ಭೂಮಿಗೆ ಮುಖ ಮಾಡಿ ಕೆಳಗೆ ಬಿದ್ದಿದ್ದ, ಮುಳ್ಳು ಬೇಲಿಯ ಆಚೆ ಭಾರತ. ಇನ್ನೊಂದು ಮುಳ್ಳು ಬೇಲಿಯ ಈಚೆ ಪಾಕಿಸ್ತಾನ. ಮಧ್ಯದಲ್ಲಿ ಯಾರಿಗೂ ಸೇರದ, ಹೆಸರಿಲ್ಲದ ಒಂದು ತುಣುಕು ಭೂಮಿಯ ಮೇಲೆ ತೋಬಾ ತೇಕ್ ಸಿಂಗ್ ಬಿದ್ದಿದ್ದ!

ತನನಂ ತನನಂ



ತೇಲಿ ಬಂದ ದಾರಿ 11

ಕವಿತಾ ಲಂಕೇಶ್

ಆವತ್ತು ಸಂಜೆ ವೆಸ್ಟ್‌ಎಂಡ್ ಹೋಟೆಲಿನಲ್ಲಿ 'ತನನಂ ತನನಂ' ಆಡಿಯೋ ರಿಲೀಸ್ ಕಾರ್ಯಕ್ರಮ. ಅರೇಂಜ್‌ಮೆಂಟ್ ಹೇಗೆ ಮಾಡ್ತಿದಾರೆ ಅಂತಾ ಮಧ್ಯಾಹ್ನವೇ ಅಲ್ಲಿಗೆ ಹೋದ್ರೆ, ಪ್ರೊಜೆಕ್ಟರ್ ಯಾವ ದಿಕ್ಕಿಗೆ ಇಡೋದು, ಸ್ಕ್ರೀನ್ ಯಾವ ದಿಕ್ಕಿಗೆ ಇಡೋದು ಅಂತಾ ಗೊಂದಲದಲ್ಲಿ ಮುಳುಗಿದ್ರು ವ್ಯವಸ್ಥಾಪಕರು! ಈ ಹಾಳು 'ವಾಸ್ತು' ವೆಸ್ಟ್‌ಎಂಡ್ ಹೊಕ್ಕುಬಿಟ್ಟಿತ್ತು, ಹಿಂದೆ ಅಲ್ಲಿ 'ಜ್ಯೂಲಿ' ಸಿನಿಮಾ ಕಾರ್ಯಕ್ರಮ ನಡೆದಾಗ ಸ್ಕ್ರೀನ್ ಎಡಕ್ಕೆ ಇಟ್ಟಿದ್ರಂತೆ...ಅದರ ಗುಣಮಟ್ಟದ ಲೆವೆಲ್‌ಗೆ ತಕ್ಕಂತೆ 'ಜ್ಯೂಲಿ' ಢಮಾರ್ ಆಯ್ತು! **But,** ಈ ಸಿನಿಮಾದವರ ನಂಬಿಕೆ ಹೇಗಿರುತ್ತೆ ನೋಡಿ! ಎಡಕ್ಕೆ ಸ್ಕ್ರೀನ್ ಇಟ್ಟಿದ್ದು ವಾಸ್ತು ಪ್ರಕಾರ ತಪ್ಪಂತೆ! ಅದಕ್ಕೇ 'ಜ್ಯೂಲಿ' ಫ್ಲಾಪ್ ಆದ್ದಂತೆ! ಈ ಕಾರಣಕ್ಕೆ ನಮ್ಮ ಆಡಿಯೋ ಪ್ರೊಗ್ರಾಮ್‌ನಲ್ಲಿ ಸ್ಕ್ರೀನ್ ಬಲಕ್ಕೆ ಇಟ್ಟರೆ ಒಳ್ಳೆದಾಗುತ್ತೆ ಎಂದು ಚರ್ಚಿಸುತ್ತಿದ್ದರು ವ್ಯವಸ್ಥಾಪಕ ಮಹಾಶಯರು! 'ಎಲ್ಲಾದ್ರು ಒಂದು ಕಡೆ ಇಡಿ.... ಕುಳಿತವರಿಗೆ ಸರಿಯಾಗಿ ನೋಡಲು, ಕೇಳಲು ಅವಕಾಶ ಇರಬೇಕಷ್ಟೇ' ಎಂದು ಜೋರು ಮಾಡಿದೆ. ಈ ಹಾಳು 'ವಾಸ್ತು'ವಿನ ಕಾಟ ತುಂಬಾ ಆಯ್ತಪ್ಪಾ! ಈ 'ವಾಸ್ತು'ವಾದಿಗಳು ಟಾಯ್ಲೆಟ್‌ನಲ್ಲೇ ಲಿವಿಂಗ್ ರೂಮ್ ಕಟ್ಟಿದ್ರು ಕಟ್ಟಬಹುದೇನೋ?



ವಾಸ್ತುವಾದಿ V/s ವಾಸ್ತವವಾದಿ

ಮನೆಯೊಳಗೆ ಸರಿಯಾಗಿ ಗಾಳಿ, ಬೆಳಕು ಬರುವಂತಿರಬೇಕು ಅಷ್ಟೇ. ಆ ಮೂಲೇಲಿ ಅದು, ಈ ಮೂಲೇಲಿ ಇದು ಅಂತಾ ಸುಮ್ನೆ ತಲೆ ಕೆಡಿಸಿಕೊಳ್ತಾರೆ. ಲಾಜಿಕ್ ಬಿಟ್ಟು ವಾಸ್ತು ಅಂತಾ ಟೈಮ್ ವೇಸ್ಟ್ ಮಾಡಿಕೊಳ್ತಿದಾರೆ ಚಿತ್ರರಂಗದವರು....

ಹಾಡು, ದೃಶ್ಯ ಚೆನ್ನಾಗಿಲ್ಲದಿದ್ರೆ ಯಾವ ಮೂಲೇಲಿ ಸ್ಕ್ರೀನ್ ಇಟ್ರೂ ಪರಿಣಾಮ ಅಷ್ಟೇ! ನಾವು ಯಾವ ಗುಣಮಟ್ಟದ ಪ್ರಾಡಕ್ಟ್ ನೀಡ್ತೀವಿ ಅನ್ನೋದರ ಮೇಲೆ ಯಶಸ್ಸು ನಿಂತಿರುತ್ತೆ ಅಷ್ಟೆ. ಇನ್ನೂ ಕೆಲವು ಜನರಿಗೆ ಬಣ್ಣಬಣ್ಣದ ಹುಚ್ಚೂ ಇದೆ! ಪೋಸ್ಟರ್ ಇಂತದೇ **particular** ಕಲರಲ್ಲೇ ಇದ್ರೆ ಸಿನಿಮಾ ಹಿಟ್ ಆಗುತ್ತೆ ಎಂಬ ಭ್ರಮೆಯೂ ಇದೆ ಈ ಗಾಂಧಿನಗರದಲ್ಲಿ! ಬಿಟ್ಹಾಕಿ ಇದ್ನೆಲ್ಲ.. **Let us talk about `Tananam Tananam'.**

ನೂರು ಜನ ಬರ್‍ಬಹುದು ಫಂಕ್ಷನ್‌ಗೆ ಅಂತಾ ಅಂದುಕೊಂಡಿದ್ವಿ. ಇನ್ನೂರಕ್ಕೂ ಹೆಚ್ಚು ಜನ ಬಂದಿದ್ದು ನೋಡಿ ನಿರ್ಮಾಪಕ ಸುರೇಶ್‌ಗೆ ಒಂದು ಕಡೆ ಖುಷಿ..... ಇನ್ನೊಂದು ಕಡೆ ಸಂಕಟ! ಸಂಕಟ ಯಾಕಂದ್ರೆ ಖರ್ಚೂ ಹೆಚ್ಚಾಗುತ್ತಲ್ಲ!

ಅಂತರರಾಷ್ಟ್ರೀಯ ಖ್ಯಾತಿಯ ಡಾ. ಎಲ್.ಎಸ್. ರೈಟ್‌ಟೈಮ್‌ಗೆ ಹಾಜರಿದ್ದರು. ಆಡಿಯೋ ಫಂಕ್ಷನ್ ವಿವರಗಳೆಲ್ಲ ಸುದ್ದಿ ಮಾಧ್ಯಮಗಳಲ್ಲಿ ಈಗಾಗಲೇ ಬಂದು ನಿಮ್ಮನ್ನೆಲ್ಲ ತಲುಪಿಯಾಗಿದೆ. ಆವತ್ತು ತಂದೆ ಸಾವಿನ ಕಾರಣದಿಂದ ಕೆ. ಕಲ್ಯಾಣ್‌ರವರಿಗೆ ಸಮಾರಂಭಕ್ಕೆ ಬರಲಾಗಲಿಲ್ಲ.

ರಮ್ಯ, ರಕ್ಷಿತಾರ ವೈಯ್ಯಾರ ಭಲೇ ಜೋರಾಗಿತ್ತು.... ಹಿಂದಿನ ದಿನವೇ ಮಾತಾಡಿಕೊಂಡಿದ್ದ ಈ ಚೆಲುವೆಯರು ಬ್ಲಾಕ್ ಮಾಡರ್ನ್ ಡ್ರೆಸ್‌ಗಳಲ್ಲಿ ಮಿಂಚುತ್ತಿದ್ದರು. ಒಂದು **interesting** ವಿಷಯ ಹೇಳ್ತೀನಿ ಕೇಳಿ.... ಮಹಿಳಾ ನಿರ್ದೇಶಕಿ ಅಂತಾ ಯಾರಾದ್ರೂ ಕರೆದಾಗ ನನಗೆ ಕಿರಿಕಿರಿ ಆಗುತ್ತೆ.... ಇರೋದು ಎರಡೇ ವಿಭಾಗ.... ಒಳ್ಳೇ ನಿರ್ದೇಶಕರು, ಕೆಟ್ಟ ನಿರ್ದೇಶಕರು ಅಷ್ಟೇ....

ಆದರೆ ನಾನು ಮಹಿಳೆ ಆಗಿರುವುದರಿಂದಲೇ ರಮ್ಯ, ರಕ್ಷಿತಾ ಪ್ರತಿ ಫಂಕ್ಷನ್‌ಗೂ ಮೊದಲು 'ನಾಳೆ ಯಾವ ಡ್ರೆಸ್ ಹಾಕ್ತೀರಿ ಕವಿತಾ? ನಾವು ಯಾವ ಡ್ರೆಸ್ ಹಾಕೋಣ?' ಅಂತೆಲ್ಲ ಚರ್ಚೆ ಮಾಡ್ತಾರೆ! ಈ ಹಿಂದೆ ನಂದಿತಾ ದಾಸ್ ಸಹಾ ಮುಂಬೈಯಿಂದ ಕಾಲ್ ಮಾಡಿ 'ನಾಳೆ ಫಂಕ್ಷನ್‌ಗೆ ನೀವು ಯಾವ ಕಲರ್ ಡ್ರೆಸ್ ಹಾಕ್ತೀರಾ?' ಎಂದೇ ಕೇಳ್ತಿದ್ದರು... ಹೆಣ್ಣುಮಕ್ಕಳಿಗೆ ಎಷ್ಟೊಂದು ಬಟ್ಟೆಯ ಸಡಗರ ನೋಡಿ....

ಈ ಡ್ರೆಸ್ ವಿಷಯ ಹೇಳುವಾಗ ಸಿನಮಾದಲ್ಲಿನ 'ಕಂಟಿನ್ಯೂಯಿಟಿ' ನೆನಪಾಗುತ್ತೆ, ಒಬ್ಬ ನಾಯಕಿ ಮನೆಯಿಂದ ಓಡಿಹೋದ್ಲು ಅಂತಾ ಇಟ್ಕೊಳ್ಳಿ... ನಂತರ ಅವಳನ್ನು ಇನ್ನೆಲ್ಲೋ ತೋರಿಸ್ತೀವಿ... ಮನೆಯಲ್ಲಿ ನೀಲಿ ಸೀರೆಯುಟ್ಟವಳು ಹೊರಾಂಗಣದಲ್ಲಿ ರೆಡ್ ಸಾರಿಯಲ್ಲಿ ಕಂಡರೆ ಅಭಾಸ ಆಗಿಬಿಡುತ್ತಲ್ವಾ? ಅಸಿಸ್ಟೆಂಟ್‌ಗಳು ಸಣ್ಣ ಸಣ್ಣ ವಿಷಯಗಳನ್ನು ಬರೆದಿಟ್ಟು ಕೊಳ್ಳಬೇಕಾಗುತ್ತದೆ. ಕಿವಿಯೋಲೆ, ಹಣೆಬೊಟ್ಟು, ಅದರ ಗಾತ್ರ ಮತ್ತು ಕಲರ್ ಎಲ್ಲಾ ಇಂಪಾರ್ಟೆಂಟ್ ಆಗುತ್ತೆ... 'ದೇವೀರಿ'ಯಲ್ಲಿ ಒಂದ್ಸಲ ಕ್ಯಾತ (ಮಂಜ) ಚಪ್ಪಲಿ ಹಾಕಿಕೊಂಡು ಓಡುವ ದೃಶ್ಯ ಶೂಟ್ ಮಾಡಿದ್ವಿ... ಆದರೆ ಹಿಂದಿನ ಸೀನ್ ಚಿತ್ರೀಕರಿಸಿ ತುಂಬಾ ದಿನಗಳಾಗಿತ್ತು, ಆ ಹಳೆ ಸೀನ್ ಚೆಕ್ ಮಾಡಿ ನೋಡಿದ್ರೆ ಅದರಲ್ಲಿ ಕ್ಯಾತ ಚಪ್ಪಲಿ ಧರಿಸಿರಲಿಲ್ಲ!.... ನಾವು ಚಪ್ಪಲಿ ತೆಗೆಸಿ ಮತ್ತೆ ಶೂಟ್ ಮಾಡಬೇಕಾಯ್ತು! ಮಿಸ್ಟೇಕ್‌ಗಳು ಆಗೋದು ಸಹಜ.... ಆದರೆ ಆದಷ್ಟು ಕಾಳಜಿಯಿಂದ ಗಮನಿಸಿ ಸಣ್ಣಪುಟ್ಟ ಕಂಟಿನ್ಯೂಯಿಟಿ ಮಿಸ್ಟೇಕ್ ಆಗದಂತೆ ನೋಡಿಕೊಳ್ಳಬೇಕು.

'ತನನಂ ತನನಂ' ಚಿತ್ರದ ಶೂಟಿಂಗ್ ಚಿಕ್ಕಮಗಳೂರಿನಲ್ಲಿ ನಡೆಯುತ್ತಿದ್ದಾಗ ಭಾರತಿಯವರಿದ್ದ ಒಂದು ದೃಶ್ಯ ಚಿತ್ರೀಕರಿಸುತ್ತಿದ್ದೆವು. ಭಾರತಿ ಆಭರಣಗಳನ್ನೆಲ್ಲ ತೊಟ್ಟು ರೆಡಿಯಾಗಿದ್ದರು. ಆ ಹೊತ್ತಲ್ಲಿ ಹೊರಗಡೆ ಜರ್ಬರಾ ಎಂಬ ಹಳದಿ ಹೂಗಳನ್ನು ಮಾರುತ್ತಿದ್ದರು. ಭಾರತಿಯವರ ಕಾಸ್ಟ್ಯೂಮ್ ಅಸಿಸ್ಟೆಂಟ್ ಆ ಸುಂದರ ಹೂ ತಂದು ಭಾರತಿಗೆ ಕೊಟ್ಟರು. ಭಾರತಿ ಆ ಹೂ ಧರಿಸಿ ಅಭಿನಯಿಸಿದರು. ನಂತರ ಶ್ಯಾಮ್ ಕೆನಡಾದಲ್ಲಿ ಸ್ಟಕ್ ಆಗಿದ್ದರಿಂದ ಹದಿನೈದು ದಿನ ಶೂಟಿಂಗ್ ಬಂದ್ ಆಯ್ತು, ಆಮೇಲೆ ಮತ್ತೆ ಶೂಟಿಂಗ್ ಆರಂಭವಾದಾಗ ನಮ್ಮ ಅಸಿಸ್ಟೆಂಟ್ ಪ್ರಕಾಶ್ ಎನ್ನುವವರು 'ಕಂಟಿನ್ಯೂಯಿಟಿ' ಲಿಸ್ಟ್ ತೆಗೆದು ಹಳೇ ಸೀನ್‌ನಲ್ಲಿ ಭಾರತಿಯವರು ಧರಿಸಿದ್ದ ಡ್ರೆಸ್, ಆಭರಣಗಳನ್ನು ಭಾರತಿಯವರಿಗೆ ನೆನಪಿಸಿದರು. ಆಗ ಆ ಜರ್ಬರಾ ಹೂ ನೆನಪಾಯ್ತು, ಮುಂಜಾನೆ ವೇಳೆ ಆಗಿದ್ದರೆ ಅದಿನ್ನೂ ಮೊಗ್ಗು ತರಹ ಇರುತ್ತೆ, ಪುಣ್ಯಕ್ಕೆ ಆಗ ಸಂಜೆಯಾಗುತ್ತಿತ್ತು, ಆ ಹಳದಿ ಹೂ ಅರಳಿ ನಳನಳಿಸುತ್ತಿತ್ತು, ಮತ್ತೆ ಆ ಹೂ ಧರಿಸಿ ಭಾರತಿ ಶೂಟಿಂಗ್‌ನಲ್ಲಿ ಪಾಲ್ಗೊಂಡರು. ಸದ್ಯಕ್ಕೆ 12 ವರ್ಷಕ್ಕೊಮ್ಮೆ ಕಾಣಿಸಿಕೊಳ್ಳುವ ಕುರಿಂಜಿ ಹೂಗಳ ಮಧ್ಯೆ ಶೂಟ್ ಮಾಡಿರಲಿಲ್ಲ! 'ತಿರುಪತಿ' ಚಿತ್ರ ನೆನೆಸಿಕೊಂಡರೆ ನಗು ಬರುತ್ತೆ... ಅಲ್ಲಿ ಡ್ರೆಸ್‌ಗಳ ಕಂಟಿನ್ಯೂಯಿಟಿ ಬಿಡಿ... ನಾಯಕಿಯ ಹೆಸರೇ ಸಡನ್ ಆಗಿ ಬದ್ಲಾಗಿ ಬಿಡುತ್ತೆ. ಆರಂಭದಲ್ಲಿ ಆಕೆ ನಂದಿತಾ, ಇಂಟರ್‌ವಲ್ ವೇಳೆಗಾಗಲೇ ಆಕೆ ಪೂಜಾ ಅಂತೆ!

ಕತೆ ಮಾಡುವಾಗ ಪಾತ್ರಗಳ ಹೆಸರು ಇಡುವಾಗಲೂ ಕಾಳಜಿ ವಹಿಸಬೇಕಾಗುತ್ತೆ.... 'ತನನಂ ತನನಂ'ನಲ್ಲಿ ಸಂಪ್ರದಾಯಸ್ಥ ಸಂಗೀತಗಾರರ ಕುಟುಂಬದ ಚಿತ್ರಣವಿದೆ. ಅದಕ್ಕೇ ಇಲ್ಲಿ ಭಾರತಿ ಜಾನಕಿಯಾಗಿ, ಕಾರ್ನಾಡ್ ಕೃಷ್ಣಮೂರ್ತಿಯಾಗಿ, ರಮ್ಯಾ ವನಜಾ ಆಗಿ ಅಭಿನಯಿಸಿದ್ದಾರೆ. ಇನ್ನು ರಕ್ಷಿತಾ ಭವಾನಿಯಾಗಿ....

ಆರಂಭದಲ್ಲಿ **synopsis** ಓದಿದಾಗ ಡಾ. ಎಲ್. ಸುಬ್ರಮಣ್ಯಂ 'ಎಷ್ಟೊಂದು ನ್ಯಾಚುರಲ್ ಆಗಿವೆ ಈ ಪಾತ್ರಗಳ ಹೆಸರುಗಳು.... ನಮ್ಮ ಕುಟುಂಬದಲ್ಲಿ ಈ ಎಲ್ಲ ಹೆಸರಿನವರೂ ಇದ್ದಾರೆ' ಎಂದು ನಕ್ಕು ಮೆಚ್ಚುಗೆ ಸೂಚಿಸಿದ್ದರು!

ಅಂದ ಹಾಗೆ ವಿಜಯದಶಮಿ ದಿನ ನೀವು 'ಉದಯ' ಟಿವಿಯಲ್ಲಿ ನಮ್ಮ ಪ್ರೊಗ್ರಾಮ್ ನೋಡಿರಬೇಕಲ್ಲ? ಅದೆಷ್ಟು ಉತ್ಸಾಹದಿಂದ ಮಾತಾಡಿದ್ರು ರಮ್ಯ, ರಕ್ಷಿತಾ ಅಂದು....

ರಮ್ಯ, ರಕ್ಷಿತಾ, ನಿರೂಪಕಿ ಹಾಗು ನಾನು ಹೀಗೆ ನಾಲ್ಕು ಜನರ ಮಧ್ಯೆ ನಿರ್ಮಾಪಕ ಸುರೇಶ್ ತಣ್ಣಗೆ ಕುಳಿತಿದ್ರು... ಆದರೆ ವೀಕ್ಷಕರ ಕುತೂಹಲ, ಆಸಕ್ತಿ ಅವರನ್ನು ಸಂತೋಷಗೊಳಿಸಿಬಿಟ್ಟಿತ್ತು.


ಮತ್ತೆ ಈ ವಾರ ನಾವೆಲ್ಲ ಹುಬ್ಬಳ್ಳಿಗೆ ಬರ್ತಾ ಇದ್ದೀವಿ....

(ಮುಂದುವರೆಯುತ್ತದೆ..)

ನಿರೂಪಣೆ : ಪಿ.ಕೆ. ಮಲ್ಲನಗೌಡರ್

ಪ್ರಧಾನಿ ಆಗ ಬಯಸುವವರ ಪರಿಪಾಟಲುಗಳು

ಈ ಅಧಿಕಾರದ ಆಸೆ ಅನ್ನುವುದು ಬಲೇ ಕಾಟ ಕೊಡುತ್ತೆ ಮಾಡಬಾರದ್ದನ್ನೂ ಮಾಡಿಸುತ್ತೆ, ಅದರ ರುಚಿ ಕಂಡವರ ಅಥವಾ ಅಂತಹವರನ್ನು ಹತ್ತಿರದಿಂದ ಬಲ್ಲವರ ಅಕ್ಕಗಳು ಅದನ್ನು ಹೇಗಾದರೂ ಮಾಡಿ ವಶಪಡಿಸಿಕೊ ಅಂತ ಪೀಡಿಸುತ್ತವೆ. ಆಂಧ್ರದ ಆತ್ಮಗೌರವವನ್ನು ಮುಂದುಮಾಡಿ ಮುಖ್ಯಮಂತ್ರಿಯಾದ ಎನ್.ಟಿ. ರಾಮರಾವುಗಾರು ಅವರನ್ನು 'ನಿಮಗೆ ಪ್ರಧಾನಿಯಾಗುವ ಮುಖ ಲಕ್ಷಣ ಇದೆ' ಅಂತ ಯಾರೋ ಒಬ್ಬ ಜ್ಯೋತಿಷಿ ರೈಲು ಹತ್ತಿಸಿದನಂತೆ. ಮುಖ ಲಕ್ಷಣ ಒಂದು ಇದ್ದರೆ ಸಾಕು, ಕೌಶಲ್ಯವ್ವಾ ಇರಬಾರದೆ ಅಂತ ಅವರು ಯೋಚಿಸ ಲಿಲ್ಲವ್ವೋ, ಅಥವಾ ತನ್ನಲ್ಲಿ ಅದು ಇದೆ ಎಂದು ಎಲ್ಲ ರಾಜಕಾರಣಿಗಳು ಭ್ರಮಿಸುವಂತೆ ಭ್ರಮಿಸಿದರೋ, ಇಲ್ಲ ಪ್ರಧಾನಿ ಪಟ್ಟ ಚಲಾಯಿಸಲು ಬುದ್ಧಿಯ ಅವಶ್ಯಕತೆಯಿಲ್ಲ ಎಂದು ತಿಳಿದರೋ ಗೊತ್ತಿಲ್ಲ, ಅಂತೂ ಇಂತೂ ಪ್ರಧಾನಿಯಾಗಲು ಪೂರ್ವ ಸಿದ್ಧತೆಗೆ ತರಾತುರಿಯಲ್ಲಿ ಮುಂದಾದರಂತೆ. ಅದು ಎಂತಪ್ಪ ಎಂದರೆ.... ಘನಪಂಡಿತ ರಾದ ಜ್ಯೋತಿಷಿಗಳು 'ನೀವು ಪ್ರಧಾನಿಯಾಗಬೇಕಾದರೆ ಒಂದು ವ್ರತ ಕೈಗೊಳ್ಳಬೇಕು; ಈ ವ್ರತದ ನಿಯಮದಂತೆ ತಾವು ರಾತ್ರಿ ಮಲಗುವ ವೇಳೆ ಸ್ತ್ರೀ ವೇಷಧಾರಿಗಳಾ ಗಿರಬೇಕು' ಎಂದು ಅಪ್ಪಣೆ ಕೊಡಿಸಿದ್ದರಂತೆ. ಸ್ತ್ರೀ ವೇಷವೆಂದರೆ ಮ್ಯಾಕ್ಸಿ ಮಿಡಿಯೋ, ಸಲ್ವಾರ್ ಕಮೀಜೋ ಅಥವಾ ಸೀರೆಯೋ ಎಂದು ಪ್ರಕಾಂಡ ಪಂಡಿತರು ಸ್ಪಷ್ಟಪಡಿಸದಿದ್ದರೂ ರಾಮರಾವುಗಾರು ಸೀರೆಯನ್ನು ಉಟ್ಟು ಪವಡಿಸುತ್ತಿದ್ದರಂತೆ. ಅದೇ ಜ್ಯೋತಿಷಿಗಳ ಆದೇಶದಂತೆ ಒಂದು ಕಿವಿಗೆ ಓಲೆಯನ್ನು ಸದಾ ಇಟ್ಟು ಕೊಂಡಿರುತ್ತಿದ್ದರಂತೆ.



ಇದು ರಾಮರಾವ್ ಅವರಿಗೆ ಸೀಮಿತ ಎಂದು ಬಗೆಯಬೇಕಾ ಗಿಲ್ಲ, ಕೇಂದ್ರದ ಮಾನವ ಸಂಪ ನ್ಮೂಲ ಸಚಿವರಾದ ಅರ್ಜುನ್ ಸಿಂಗ್ ಅವರೂ ಪ್ರಧಾನಿಯಾಗ ಬೇಕೆಂಬ ಉತ್ಕಟೇಚ್ಛೆಯಿಂದ ಹರಿ ದ್ವಾರದ ಆಶ್ರಮದಲ್ಲಿ ಈ ರೀತಿ ಸ್ತ್ರೀ ವೇಷದಲ್ಲಿ ಒಂದು ವಾರ ಕಳೆದು ಬಂದರು ಎಂಬ ಸುದ್ದಿಯೂ ಗಾಳಿಯಲ್ಲಿ ಹಾರಾಡುತ್ತಿದೆ. ಒಂದು ವೇಳೆ ಈ ಪ್ರಕಾಂಡ ಪಂಡಿತರೇನಾದರೂ ನೀವು ಲಿಂಗಪರಿವರ್ತನೆ ಮಾಡಿಕೊಂಡರೆ ಪ್ರಧಾನಿ ಪಟ್ಟ ಖಾತರಿ ಎಂದೇನಾದರೂ ಹೇಳಿದ್ದರೆ ಅದಕ್ಕೂ ಸಿದ್ಧರಿರುತ್ತಿದ್ದರೇನೋ!

ಪೂರ್ವಸಿದ್ಧತೆ ಏನಾದರೂ ಮಾಡಿಕೊಂಡಿರಲಿ. ರಾಮರಾವು ಪ್ರಧಾನಿ ಆಗಲಿಲ್ಲ, ಅರ್ಜುನ್ ಸಿಂಗ್ ಆಗುವ ಸಾಧ್ಯತೆಗಳು ಕಾಣುತ್ತಿಲ್ಲ. ಈ ಗಂಡು ಗೋವಿಗಳ ಬದಲು ಉಮಾ ಭಾರತೀನೋ, ಸುಷ್ಮಾ ಸ್ವರಾಜೋ ಇಂತಹ ಜ್ಯೋತಿಷಿ ರತ್ನಗಳ ಕೈಗೆ ಸಿಕ್ಕಿದ್ದರೆ ಏನು ಹೇಳುತ್ತಿದ್ದರು? ಪುರುಷ ವೇಷಧಾರಿಗಳಾಗಿರಬೇಕು ಅಂತಾನಾ ಅನ್ನುವುದು ಒಂದು ಅನುಮಾನ ಅಷ್ಟೆ.

ಈ ಪ್ರಧಾನಿ ಹುದ್ದೆಯ ಕನಸು ಉತ್ತರ ಪ್ರದೇಶದ ಮುಖ್ಯಮಂತ್ರಿ ಮುಲಾಯಂಸಿಂಗ್ ಯಾದವ್‌ಗೆ ಅಮರಿ ಕೊಂಡಿದೆಯಂತೆ. ಅವರು ಜ್ಯೋತಿಷಿಗಳ ಮರೆ ಹೋಗಿದ್ದರಾ, ಸ್ತ್ರೀ ವೇಷದಲ್ಲಿ ಮಲಗುತ್ತಾರಾ ಎಂಬುದರ ಬಗ್ಗೆ ಮಾಹಿತಿ ಇಲ್ಲ, ಆದರೆ ಜ್ಯೋತಿಷಿಗಳನ್ನು ಬಿಟ್ಟಿದ್ದಾರೋ ಇಲ್ಲವ್ವೋ, ದೇವತೆಗಳ ಮರೆ ಹೋಗುತ್ತಿರುವುದು ಖಚಿತವಾಗಿದೆ. ಪುರಾಣಯುಗದಲ್ಲಿ ರಾಕ್ಷಸರು ದೇವತೆಗಳ ಮರೆಹೋಗಿ ಅವರಿಂದ ವರ ಪಡೆದು ನಂತರ ವಿಧ್ವಂಸಕ ಕೃತ್ಯಗಳಲ್ಲಿ ತೊಡಗುತ್ತಿದ್ದರಲ್ಲ ಹಾಗೇನೇ ಇದೂನೂವೆ ಎಂದು ಕೆಲವರು ವ್ಯಾಖ್ಯಾನಿಸಬಹುದು. ಇರಲಿ. ಈಗ ಅವರು ಮರೆ ಹೋಗಿರುವುದು ಗುಹಾಟಿಯ ಕಾಮಾಕ್ಯ ದೇವತೆಗೆ.

ಈ ಕಾಮಾಕ್ಯ ದೇವತೆ ಅಂತಿಂತಹ ದೇವತೆಯಲ್ಲ, ಒಂದು ತರಹ ನಮ್ಮಲ್ಲಿನ ಮಾರಿ ತರಹದ ದೇವತೆ. ಗುಡ್ಡಗಾಡು ಜನರ ಒಂದು ಪಂಗಡದವರ ಮನೆ ದೇವರು. ಆ ಒಕ್ಕಲಿನ ಒಬ್ಬರು ಸಂವಿಧಾನ ರಚನಾ ಸಭೆಯಲ್ಲಿ ಈ ದೇವತೆಯ ಪ್ರಸ್ತಾಪ ಎತ್ತಿದ್ದರು. ಅದು ಹೇಗಪ್ಪಾ ಅಂದರೆ... ಎಚ್.ವಿ. ಕಾಮತ್ ಅವರು ಸಂವಿಧಾನ ರಚನಾ ಸಭೆಯಲ್ಲಿ 'ಇನ್ ದಿ ನೇಮ್ ಆಫ್ ಗಾಡ್' ಎಂಬುದನ್ನು ಸಂವಿಧಾನದಲ್ಲಿ ಸೇರಿಸಬೇಕು ಅಂತ ಒತ್ತಾಯಿಸಿದರು. ನಮ್ಮ ಕಾಮಾಕ್ಯ ದೇವತೆಯ ಭಕ್ತರು ಈ ಪ್ರಸ್ತಾಪವನ್ನು ಪ್ರಬಲವಾಗಿ ವಿರೋಧಿಸುತ್ತಾ 'ನಾವು ಕಾಮಾಕ್ಯ ದೇವತೆಯ ಭಕ್ತರು; ಇನ್ ದಿ ನೇಮ್ ಆಫ್ ಗಾಡ್ ಅಂತ ಇದ್ದರೆ ಇನ್ ದಿ ನೇಮ್ ಆಫ್ ಗಾಡೆಸಸ್ ಅಂತಾನೂ ಇರಬೇಕು' ಎಂಬುದಾಗಿ ಪಟ್ಟು ಹಿಡಿದರಂತೆ!

ತಿಳಿಯಿತೆ ಆಕೆಯ ಮಹಿಮೆ. ಇಂತಹ ಪ್ರಭಾವೀ ದೇವತೆ ಶಾಖಾಹಾರಿಯೋ ಮಾಂಸಾಹಾರಿಯೋ ತಿಳಿಯದು. ಮಾಂಸಾಹಾರಿ ಭಕ್ತಗಣವಂತೂ ಅರ್ಪಿಸು ವುದು ಮಾಂಸಾಹಾರದ ತಣಿಗೆಯನ್ನೆ! ವರ್ಷಪೂರ್ತಿ ದೇವಿಗೆ ಎರಡು ಕಾಲು, ನಾಲ್ಕು ಕಾಲಿನ ಪ್ರಾಣಿಗಳ ಬಲಿ ನೀಡಿ ಇಷ್ಟಾರ್ಥ ಪೂರೈಸಿಕೊಂಡರೂ ದಸರಾ ಹಬ್ಬದ ಸಂದರ್ಭದಲ್ಲಿ ಅಲ್ಲಿ ರಕ್ತದ ಓಕುಳಿಯೇ ನಡೆಯುತ್ತದಂತೆ. ಸಾವಿರಾರು ಪ್ರಾಣಿಗಳ ಚೆಂಡಾಡುವರಂತೆ.

ಇಂತಹ ಮಹಿಮಾವಂತೆ ದೇವಿಯ ಸನ್ನಿಧಿಗೆ ಮುಲಾಯಂಸಿಂಗ್ ಯಾದವ್ ಅವರ ಸುಪುತ್ರ, ಸಂಸದ ಅಖಿಲೇಶ್ವರಸಿಂಗ್ ಅವರು ಪಾದ ಬೆಳಸಿದ್ದರಂತೆ. ತಮ್ಮ ತಂದೆಯವರು ಪ್ರಧಾನಿ ಆಗಲಿ ಎಂಬ ಅಭೀಪ್ಸೆಯಿಂದ ಬಲವಾಗಿದ್ದ ಹತ್ತು ಕೋಣಗಳನ್ನು ಬಲಿ ನೀಡಿದರಂತೆ! ಈ ಕೋಣಗಳನ್ನು ಉತ್ತರ ಪ್ರದೇಶದಿಂದಲೇ ತಂದಿದ್ದರೋ ಅಥವಾ ಗುಹಾಟಿಯಲ್ಲಿಯೇ ಕೊಂಡಿದ್ದರೋ ತಿಳಿಯದು. ಅಲ್ಲಿ ಸಾರ್ವಜನಿಕವಾಗಿ ಪ್ರಾಣಿವಧೆ ನಿಷೇಧಿಸಲಾಗಿದೆ ಅಂತ ಬಡಪಾಯಿಗಳಿಗೆ ಕಾನೂನು ಅನ್ನೋದು ಬೆದರಿಕೆ ಒಡ್ಡುತ್ತಲ್ಲ ಇಂತಹವರ ಕಾಲಿನ ಕೆಳಗೆ ಅದು ಮಿಲಿಮಿಲಿ ಅಂತ ನಾಯಿ ತರಹ ಬಿದ್ದಿರುತ್ತಾ ಅಂತ....

ಅಣಕ

ಲಗೆ ರಹೋ ಮುನ್ನಾಭಾಯಿ!

ಈಗ ಎಲ್ಲೆಲ್ಲೂ ಆ ಚಿತ್ರದ್ದೇ ಹೆಸರು.

ಅಕ್ಟೋಬರ್ 2: ಗಾಂಧೀಜಿ ಅವರ 137 ನೇ ಜನ್ಮ ದಿನ.

ಅಂದಾದರೂ ನೆನೆಯಬಾರದೆ ಗಾಂಧಿಯನ್ನ.

ಯರವಾಡ ಜೈಲು ಮಹಾತ್ಮ ಇದ್ದ ತಾಣ. ಅಲ್ಲಿ ಖೈದಿಗಳಿಗೆ ಚಿತ್ರ ಪ್ರದರ್ಶನ–ಲಗೆ ರಹೋ ಮುನ್ನಾಭಾಯಿ.

ಉದ್ದೇಶ: ಮನಃಪರಿವರ್ತನೆ. ಖೈದಿಗಳೂ ಗಾಂಧಿ ಮಾರ್ಗ ಹಿಡಿಯಲಿ ಎಂಬ ಆಶಯ.

ಪುಣೆಯಲ್ಲಿ ಒಂದು ಸಂಘಟನೆ 'ಗಾಂಧಿಗಿರಿ'.

ಅವರಿಂದ ವಿನೂತನ ಪ್ರದರ್ಶನ.

ಪುಣೆಯ ಒಂದು ಸರ್ಕಲ್ ಬಳಿ ಸಂಘಟಕರು ಸೇರಿದರು.

ಆ ಸರ್ಕಲ್‌ನಲ್ಲಿ ಖಾಕಿ ಹಾಕಿದ ಒಂದು ನರಪಿಳ್ಳೆ ಇಲ್ಲ.

ಕೆಂಪು ದೀಪ ಹೊತ್ತಿ ಕೊಂಡಿತು. ವಾಹನ ಚಾಲಕರಿಗೆ ಸೂಚನೆ ಸಿಕ್ಕಿತು. ಆದರೆ ಪೊಲೀಸಿನವರೇ ಇಲ್ಲದ ಮೇಲೆ ಅದಕ್ಕೇನು ಬೆಲೆ? ಕೆಂಪು ದೀಪ ಧಿಕ್ಕರಿಸಿ ಚಲಿಸಿದರು ವಾಹನವ! ಜೀಬ್ರಾ ಕ್ರಾಸ್‌ಗಳಿಗೆ ಕೇರೆ ಮಾಡಲಿಲ್ಲ!

ಇಂತಹ ವಾಹನಗಳ ಎದುರು ಸಂಘಟಕರು ಕ್ಷಣ ಮಾತ್ರದಲ್ಲಿ ಪ್ರತ್ಯಕ್ಷ. ತಪ್ಪೆಸಗಿದ ಚಾಲಕನಿಗೆ ಕಿರುಕುಳ ಇಲ್ಲ, ಗುಲಾಬಿ ಹೂವಿನ ಬಹುಮಾನ! ಜೊತೆಗೆ ಒಂದು ಮಾತು– 'ಕೆಂಪು ದೀಪ ನಿರ್ಲಕ್ಷಿಸಿದ್ದಕ್ಕಾಗಿ ವಂದನೆಗಳು. ಇದನ್ನು ಪುನರಾವರ್ತಿಸ ಬೇಡಿ'.

ಉದ್ದೇಶ: ಚಾಲಕರ ಮನಃಪರಿವರ್ತನೆ.

ಅದು ಸರಿ. ಕರ್ತವ್ಯ ನಿರತ ಪೊಲೀಸರೂ ತಪ್ಪೆಸಗಿದ ಚಾಲಕನಿಗೆ ಉಗಿಯದೆ, ತಲೆ ಮೇಲೆ ಮೊಟಕದೆ, ಡ್ರೈವಿಂಗ್ ಲೈಸೆನ್ಸ್ ಕಿತ್ತುಕೊಳ್ಳದೇ, ವೆಹಿಕಲ್‌ನ ಸೀಜ್ ಮಾಡದೆ ಹೀಗೆ ಹೂವು ಕೊಡುತ್ತಾ ಬಂದರೆ ಏನಾಗಬಹುದು. ಚಾಲಕರ ಮನಸ್ಸು ಪರಿವರ್ತನೆ ಆಗುತ್ತೆ ತಾನು ಮಾಡಿದ ತಪ್ಪಿಗೆ ಪಶ್ಚಾತ್ತಾಪ ಪಡ್ತಾನೆ ಅಂತೀರಾ, ಅಥವಾ ರೆಡ್‌ಲೈಟ್ ಕ್ರಾಸ್ ಮಾಡಿದರೂ ಯಾವನೂ ಕೇಳಲ್ಲ ಅಂತ ಕಾನೂನು ಉಲ್ಲಂಘಿಸುವವರ ಸಂಖ್ಯೆ ಏರುತ್ತೆ ಅಂತೀರಾ. ಯಾಕೆ ಅಂದರೆ ರಾತ್ರಿ ಎಲ್ಲಾ ಸತ್ಯಹರಿಶ್ಚಂದ್ರ ನಾಟಕ ನೋಡ್ತೀವಿ. ಅಂತಹ ಸತ್ಯವಂತ[...] ಕಾಡಿದ ವಿಶ್ವಾಮಿತ್ರನನ್ನು, ನಕ್ಷತ್ರಿಕನನ್ನು ಬೈತೀ[...] ಹೀಯಾಳಿಸುತ್ತೀವಿ. ಬೆಳಿಗ್ಗೆ ಆದರೆ ಮಾಡುವುದೇನು[...] ಅದೇ ನಕ್ಷತ್ರಿಕನ ಕೆಲಸ! ಜನರನ್ನು ಮಾನಸಿ[...] ವಾಗಿ ಸಿದ್ಧಪಡಿಸದೇ ಇಂತಹ ಕೆಲಸಗಳ[...] ಕೈಹಾಕಿದರೆ ಪ್ರಚಾರ ಸಿಕ್ಕಬಹುದು, ಪ್ರತಿಫ[...] ಸಿಗಲಾರದು ಅಲ್ಲವಾ.

ತಂತ್ರವ್ವೊ? ಕುತಂತ್ರವ್ವೊ?

ಭಾರತೀಯ ಜನತಾ ಪಕ್ಷ ನ್ಯಾಯಾ[...] ಯದ ತೀರ್ಪಿಗೆ ಮನ್ನಣೆ ನೀಡುತ್ತದೆ. ಚಾಚೂ[...] ಪ್ಪದಂತೆ ಅದನ್ನು ಪರಿಪಾಲಿಸುತ್ತದೆ ಎಂದಿದ್ದಾ[...] ಸರ್ಕಾರದ ಗೌಡರು. ಅತ್ಯಂತ ಸಂತೋಷದಾಯಕ ಸಂಗ[...] ಇದು. ಆದರೆ ಪಕ್ಷದ ತತ್ವ, ಜನತೆಗೆ ನೀಡಿದ ವಾಗ್ದಾ[...] ಮೀರುವುದಿಲ್ಲ ಎಂದು ಮುಂದುವರೆಸುತ್ತಾರೆ ಗೌಡರು[...]

ಏನು ಅವರ ಆದರ್ಶ? 'ದತ್ತಮಾಲಾ ಅಭಿಯಾ[...]' 'ಶೋಭಾಯಾತ್ರೆ' ನಡೆಸುವುದು!

ಇದು ನ್ಯಾಯಾಲಯದ ಉಲ್ಲಂಘನೆ ಆಗುವುದಿಲ್ಲ[...]

ಇಲ್ಲವಂತೆ! ತೀರ್ಪಿನಲ್ಲಿ ಇವುಗಳನ್ನು ಕುರಿ[...] ನ್ಯಾಯಾಲಯ ಏನೂ ಹೇಳಿಲ್ಲವಂತೆ!

ನ್ಯಾಯಾಲಯ ಹೇಳಿರುವುದು 1975 ರ ಹಿಂದಿ[...] ಆಚರಣೆಗಳು ಮಾತ್ರ ನಡೆಯಬೇಕು ಎಂದು. ಇದ[...] ಹಿಂದೆ ಇವು ಇದ್ದವೆ? ಇಲ್ಲ, ಅಂದರೆ ನ್ಯಾಯಾಲ[...] ಮುಂದೆ ಸಂಘ ಪರಿವಾರದವರು ಸೃಷ್ಟಿಸಬಹುದಾ[...] ಹಲವು ಅಭಿಯಾನ, ಯಾತ್ರೆಗಳನ್ನು ಈಗಲೇ ತನ್ನ ಜ್ಞಾನ[...] ಕಣ್ಣುಗಳಿಂದ ನೋಡಿ ಅವುಗಳನ್ನು ನಿಷೇಧಿಸಿ ತೀರ್ಪ[...] ನೀಡಬೇಕಿತ್ತು!

ಇನ್ನು ಜಾತ್ಯತೀತ ಜನತಾದಳದ ಒಬ್ಬೊಬ್ಬರದ್ದು[...] ಒಂದೊಂದು ದಿಕ್ಕು. ಕೋಮು ಸೌಹಾರ್ದತೆ ಹಾ[...] ಮಾಡಲು ಪ್ರಯತ್ನಿಸಿದರೆ ನಿಮ್ಮ ಸಂಗ ತೊರೆಯುತ್ತೇ[...] ಗುಡುಗಿದ್ದ ದೇವೇಗೌಡರು ದೆಹಲಿಗೆ ದೌಡಾಯಿಸಿದ್ದಾ[...] ಮುಖ್ಯಮಂತ್ರಿ ಕುಮಾರಸ್ವಾಮಿಯವರಿಗೆ ಚಾಮುಂ[...] ಶ್ವರಿಯೇ ಮೈಮೇಲೆ ಬಂದಂತಾಗಿ ಮೈಸೂರಿಗೆ ತಗುಲ[...] ಕೊಂಡಿದ್ದಾರೆ. ಗೃಹ ಮಂತ್ರಿ ಎಂ.ಪಿ. ಪ್ರಕಾಶ್ ಬೆಂಗಳೂ[...] ನಲ್ಲಿಯೇ ಭೂಗತರಾಗಿದ್ದಾರೆ. ಹೀಗಾಗಿ ಈ ಸೂ[...] ವಿಷಯವನ್ನು ನಿರ್ಧರಿಸಬೇಕಾಗಿದ್ದ ಸಮನ್ವಯ ಸಮಿ[...] ಸಭೆಯೇ ನಡೆಯಲಿಲ್ಲವಂತೆ. ಸಂಪರ್ಕ ಸೌಲಭ್ಯ ಧಾರಾ[...] ವಾಗಿ ಸಿಗುತ್ತಿರುವ ಈ ದಿನಗಳಲ್ಲೂ ಇದು ಪವಾಡಕ್ಕೆ[...] ಸರಿ!

ಮುಖ್ಯಮಂತ್ರಿಯವರು ಪದೇಪದೇ ಹೇಳುವ[...] 'ನ್ಯಾಯಾಲಯದ ತೀರ್ಪಿನ ಅಡಿಯಲ್ಲಿ ಶಾಂತಿಯುತವಾ[...] ಇವು ನಡೆಯುತ್ತವಂತೆ!' ಅಂದರೆ ಶಾಂತಿಯುತವಾ[...] ಅಲ್ಪಸಂಖ್ಯಾತರಲ್ಲಿ ಭಯದ ವಾತಾವರಣ ಮೂಡಿ[...] ಲಾಗುತ್ತದೆ; ಸೌಹಾರ್ದತೆಯಿಂದ ಅವರನ್ನು ಥಳಿಸಲಾಗುತ್ತ[...] ತಾಳ್ಮೆಯಿಂದ ಅವರ ವ್ಯಾಪಾರ ಕೇಂದ್ರಗಳಿಗೆ ಬೆ[...] ಇಡಲಾಗುತ್ತದೆ!

ಇದು ಕೋ–ಜಾ ಸರ್ಕಾರದ ತಂತ್ರವ್ವೊ? ಕುತಂತ್ರವ್ವೊ[...]

–ಎಚ್.ಎಲ್. ಕೇಶವಮೂರ್ತಿ

ಚೆಡ್ಡಿಗಳಿಗೆ ಟಿಪ್ಪು ಅರ್ಥವಾಗುವುದು ಹೇಗೆ?

ಮುಖ್ಯಮಂತ್ರಿಗಳ ಬಲಗೈ ಬಂಟ ಕಬಡ್ಡಿ ಬಾಬು ಉರ್ಫ್ ಪ್ರಕಾಶ್ ಬಾಬುವಿನ ಅಟ್ಟಹಾಸದ ಬಗ್ಗೆ 'ಲಂಕೇಶ್' ಪತ್ರಿಕೆಯಲ್ಲಿ ವರದಿ ಪ್ರಕಟಿಸಿದ್ದಕ್ಕೆ ನಮ್ಮ ಧನ್ಯವಾದಗಳು. ರಾ. ಸೋಮನಾಥ್ ರವರು ಇವನ ವೃತ್ತಾಂತವನ್ನು ಅಚ್ಚುಕಟ್ಟಾಗಿ ವರದಿಮಾಡಿದ್ದಾರೆ. ಈ ಕಬಡ್ಡಿ ಬಾಬುವಿನ ಕಥೆಗಳು ಇನ್ನೂ ಇವೆ.

ಈತನ ರೌಡಿ ಪಡೆ ಉತ್ತರಹಳ್ಳಿಯಿಂದ ಹಿಡಿದು ಸುತ್ತಮುತ್ತಲ ಹೊಸಕೆರೆಹಳ್ಳಿ, ಹಲಗೇವಡೇರಹಳ್ಳಿ, ಸಾರಕ್ಕಿ, ಕೋಣನಕುಂಟೆ, ಪಕ್ಕದ ಗೌಡನಪಾಳ್ಯ, ಅರೇಹಳ್ಳಿ, ಚಿಕ್ಕಕಲ್ಲಸಂದ್ರ, ಸುಬ್ರಮಣ್ಯಪುರ, ಇಟ್ಟುಮಡು, ತುರಹಳ್ಳಿ, ಕಗ್ಗಲೀಪುರ, ಹೆಬ್ಬಗೆಪುರ, ಬಿಡದಿ ಬಳಿಯ ಹಲವಾರು ಗ್ರಾಮಗಳಲ್ಲಿ ತನ್ನ ಅಟ್ಟಹಾಸ ಮೆರೆಯುತ್ತಿದೆ. ಈ ಬಡಾವಣೆಗಳಲ್ಲಿ ವಾಸಿಸುತ್ತಿರುವ ಜನ ಈ ರೌಡಿ ಪಡೆಯ ದೌರ್ಜನ್ಯಕ್ಕೆ ಸಿಕ್ಕ ನಡುಗುತ್ತಿದ್ದಾರೆ. ರೆವಿನ್ಯೂ ನಿವೇಶನಗಳು ಹಾಗೂ ಜಮೀನುಗಳ ದಂಧೆಯಲ್ಲಿ ತೊಡಗಿರುವ ಈ ಗೋಮುಖವ್ಯಾಘ್ರಗಳ ವಿರುದ್ಧ ನಾವು ಹೋರಾ ಡುತ್ತಾ ಬಂದಿದ್ದೇವೆ. ನಿಮ್ಮ ವರದಿ ನಮ್ಮ ಹೋರಾಟಕ್ಕೆ ನೈತಿಕ ಬೆಂಬಲ ನೀಡಿದಂತಾಗಿದೆ.

ಇದಕ್ಕೆ ಮತ್ತೊಮ್ಮೆ ನಿಮಗೆ ನಮ್ಮ ಧನ್ಯವಾದಗಳು.

- ಬೆಂಗಳೂರು ದಕ್ಷಿಣ ತಾಲ್ಲೂಕಿನ ನೊಂದ ಗ್ರಾಮಸ್ಥರು

ಬ್ರಿಟಿಷರ ಸಿಂಹ ಸ್ವಪ್ನ ಕರ್ನಾಟಕದ ಗಂಡುಗಲಿ, ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಡುತ್ತಾ ತನ್ನ ಜೀವವನ್ನೇ ಬಲಿ ಕೊಟ್ಟ ಟಿಪ್ಪು




ಸುಲ್ತಾನನ ಬಗ್ಗೆ ತಲೆಕೆಟ್ಟ ಸಚಿವನೊಬ್ಬ ಆಡಿದ ಮಾತಿಗೆ ಸೂಕ್ತವಾದ ಉತ್ತರ ನೀಡಿದ 'ಲಂಕೇಶ್' ಪತ್ರಿಕೆಗೆ ಧನ್ಯವಾದಗಳು.

ಶಿವಸುಂದರ್‌ರವರು ಈ ವಿಷಯ ಕುರಿತು ಬರೆದ ಲೇಖನ ಉತ್ತಮವಾಗಿತ್ತು, ಟಿಪ್ಪು ಕುರಿತ ಸತ್ಯವನ್ನು ನಾಡಿನ ಜನತೆಗೆ ಮನದಟ್ಟು ಮಾಡಿಸಿದ ಅವರಿಗೆ ನಮ್ಮ ಕೃತಜ್ಞತೆಗಳು.

- ಕೆ.ಎಂ. ಅಲಾವಿ ಅಶ್ರತ್, ಕೊಡಗು.

"ಸೂಪರ್ ಹಿಟ್ ಆಗಿರುವ ರಾಜಕೀಯ ಸಿನಿಮಾಗಳ ಜಾಹೀರಾತು"ಗಳನ್ನು ನೋಡಿ ನಾವೆಲ್ಲ ನಕ್ಕು, ನಕ್ಕು ಸುಸ್ತಾದೆವು. ತಮ್ಮ ಕೈಚಳಕದಿಂದ ಅವುಗಳನ್ನು ಸೃಷ್ಟಿಸಿದ ಕಲಾವಿದ



ಟಿ.ಕೆ. ದಯಾನಂದ್‌ರವರಿಗೂ, ಅದನ್ನು ಪ್ರಕಟಿಸಿದ ತಮಗೂ ಧನ್ಯವಾದಗಳು.

- ದಿ.ಎಲ್. ನಾಗರಾಜ್, ಹರಪನಹಳ್ಳಿ

ಸಚಿವ ಡಿ.ಎಚ್. ಶಂಕರಮೂರ್ತಿಗೆ ಇತಿಹಾಸ ಗೊತ್ತಿಲ್ಲ ಮಾತ್ರವಲ್ಲ, ಗೊತ್ತಿರುವಷ್ಟು ಇತಿಹಾಸವನ್ನು ತಿರುಚಿ ಕೋಮು ದ್ವೇಷ ಬಿತ್ತುವುದು ಅವರ ಬಿಜೆಪಿ ಪಕ್ಷದ ಪರಂಪರೆ ಎಂಬುದು ಜನರಿಗೆ ಚೆನ್ನಾಗಿ ಗೊತ್ತಾಗಿದೆ.



ಇವರ ಜೊತೆಗೆ ಚಿದಾನಂದ ಮೂರ್ತಿ, ಬೈರಪ್ಪರಂತಹ ಚೆಡ್ಡಿ ಮನಸ್ಸಿನ ಸಾಹಿತಿಗಳು ಸೇರಿ, ಟಿಪ್ಪು ಒಬ್ಬ ಮತಾಂಧ, ಉಗ್ರಗಾಮಿ, ಇತ್ಯಾದಿ ಎಂದು ಅರಚಿದ್ದರಲ್ಲಿ ಯಾವ ಆಶ್ಚರ್ಯವೂ ಇಲ್ಲ.

-ಸಿ. ಶಿವಕುಮಾರ್, ಚಿನಿವಾರಹಳ್ಳಿ

ಹೊಗ ತೆಗ ಳಿಕೆ


'ಲಂಕೇಶ್'ನಲ್ಲಿ ಬೆಳಗಾವಿ ಅದಿವೇಶನದ ದೊಂಬರಾಟವನ್ನು ಚೆನ್ನಾಗಿ ಬಯಲು ಮಾಡಿದ್ದೀರಿ. ಕರ್ನಾಟಕದ ರಾಜಕೀಯ ಮುಖಂಡರು ಹೀಗೆ ಆಡಳಿತ ನಡೆಸುತ್ತಿದ್ದರೆ, ಇವರಿಂದ ನಾಡಿನ ಏಳಿಗೆ ನಿರೀಕ್ಷಿಸುವುದು ಅಸಾಧ್ಯ. ಸರ್ವಾಧಿಕಾರಿ ಅಪ್ಪನ ದುರಹಂಕಾರದ ಕೂಸೆ ಮುಖ್ಯಮಂತ್ರಿ ಕುಮಾರಸ್ವಾಮಿ. ಇಲ್ಲಿ ಪ್ರಜಾಪ್ರಭುತ್ವ ಇದೆಯೋ ಅಥವಾ ಮಹಾರಾಜ, ಯುವರಾಜ ಸಂಸ್ಕೃತಿ ಇದೆಯೋ ಎಂಬಂತಾಗಿದೆ. ಈ ಬಿಜೆಪಿಗೆ ಅಧಿಕಾರ ಸಿಕ್ಕಿರುವುದು ಕೋತಿ ಕೈಗೆ ಗುಲಗಂಜಿ ಸಿಕ್ಕಂತಾಗಿದೆ. ಇದನ್ನೆಲ್ಲಾ ಈಗ ಮೂಕಪ್ರೇಕ್ಷಕನಾಗಿ ನೋಡುತ್ತಿರುವ ಮತದಾರರು ಮುಂದಿನ ಚುನಾವಣೆಯಲ್ಲಿ ಖಂಡಿತ ಇವರೆಲ್ಲರಿಗೆ ಗತಿ ಕಾಣಿಸುತ್ತಾರೆ.

- ಚಿತ್ರ, ಬಿ.ಎಸ್. ಶಿಕಾರಿಪುರ

ಭಟ್ಕಳದಲ್ಲಿ ಗೌರಿಯವರು ಒಬ್ಬರೇ ಇದ್ದದ್ದರ ಬಗ್ಗೆ ಇತ್ತೀಚೆಗೆ ಶಿವಮೊಗ್ಗದ ಭಾಷ ಹಂಚಿನಮನೆ ಎಂಬುವವರು ಪತ್ರ ಬರೆದು ತಮ್ಮ ಕಾಳಜಿ ಮತ್ತು ಆತಂಕವನ್ನು ವ್ಯಕ್ತಪಡಿಸಿದ್ದಾರೆ. ಭಾಷಾರವರು ಹೇಳಿರುವಂತೆ ಆತ್ಮ ರಕ್ಷಣೆ ಗೌರಿಯವರಿಗೆ ಅಗತ್ಯ ಅನಿಸದಿದ್ದರೂ, ಅವರ ಅಗತ್ಯ ಸದಾ ನಮಗಿದೆ. ಇದು ನಮ್ಮ ಸ್ವಾರ್ಥ ಅನಿಸಿದರೂ ಪರವಾಗಿಲ್ಲ, ಮುಂದೆ ಅವರು ಎಚ್ಚರ ವಹಿಸುವಂತಾಗಲಿ ಎಂದು ಆಶಿಸುವೆ.

- ರವಿ ಪುತ್ತೂರ, ಪುತ್ತೂರು.

ಕೇಡಿನೊಳಗೂ ಒಂದು ಕಡೆ ಒಳಿತಿನ ಆತ್ಮವೊಂದಿರುತ್ತದೆ




ಈ 'ಟುವಿ ಟುವಿ....' ಹಾಡು ನನ್ನ ವೃತ್ತಿ ಜೀವನಕ್ಕೆ ದೊಡ್ಡ ತಿರುವನ್ನು ನೀಡಿತು. ಇಪ್ಪತ್ತು ವರ್ಷಗಳ ನಂತರ ಇವತ್ತೂ ಸಭೆ ಸಮಾರಂಭಗಳಲ್ಲಿ ಈ ಹಾಡನ್ನು ನಾನು ಹಾಡಬೇಕೆಂದು ಜನ ಕೇಳುತ್ತಾರೆ. ನಾನು ಅದನ್ನು ಹಾಡಿದರೆ ಅವರೆಲ್ಲ ಕುಣಿದು ಕುಪ್ಪಳಿಸುತ್ತಾರೆ. ಯಾಕೆಂದರೆ ಈ ಹಾಡು ಅಷ್ಟೊಂದು ಉತ್ಸಾಹ ಮತ್ತು ಎನರ್ಜಿಯಿಂದ ಕೂಡಿದೆ.


ಸುಧಾರಾಣಿಯೊಂದಿಗೆ 'ಟುವಿ, ಟುವಿ' ಹಾಡಿದಾಗ...

ಚಿತ್ರೀಕರಣ ಆರಂಭವಾದ ಮೂರೇ ದಿನಕ್ಕೆ ಇಂತಹ ಒಂದು ಅಗ್ನಿ ಪರೀಕ್ಷೆ ಎದುರಾಗಬಹುದೆಂದು ನಾನು ಭಾವಿಸಿರಲಿಲ್ಲ. ಯಾವಾಗ ನಿರ್ದೇಶಕ ಸಿಂಗೀತಂ ಶ್ರೀನಿವಾಸ್ ಮತ್ತು ಛಾಯಾಗ್ರಾಹಕ ಗೌರಿಶಂಕರ್ ಚಿತ್ರದ ರಶಸ್ ನೋಡಿದ ನಂತರ ಕೆಲಸವನ್ನು ಮುಂದುವರಿಸೋಣ ಎಂದರೂ ಆಗ ನಾನು ಭಯ, ಆತಂಕದಲ್ಲಿ ಮುಳುಗಿಹೋದೆ.

ಇವರು ಯಾಕೆ ರಶಸ್ ನೋಡಬೇಕು ಎಂದು ಹೇಳುತ್ತಿದ್ದಾರೆ? ನಾನು ಚೆನ್ನಾಗಿ ನಟಿಸಲಿಲ್ಲವೇ? ನಟಿಸಿರದಿದ್ದರೆ ಮುಂದೇನು? ಇಂಥಹದ್ದೇ ಪ್ರಶ್ನೆಗಳು ನನ್ನನ್ನು ಕಾಡಲಾರಂಭಿಸಿದವು. ಆದರೆ ಈ ನನ್ನ ಆತಂಕಗಳನ್ನು ನಾನು ಯಾರೊಂದಿಗೂ ಚರ್ಚಿಸಲಿಲ್ಲ, ನಿರ್ದೇಶಕರಿಗೂ ಹೇಳಲಿಲ್ಲ. ಯಾಕೆಂದರೆ ಸಿನಿಮಾ ನಟನಾಗಬೇಕೆಂಬುದು ನನ್ನ ಜೀವನದ ಮಹತ್ವಾಕಾಂಕ್ಷೆಯಾಗಿರಲಿಲ್ಲ.

ಅವತ್ತು ಚಿತ್ರೀಕರಣವನ್ನು ಬೇಗ ಮುಗಿಸಿದ ಸಿಂಗೀತಂರವರು ಅಲ್ಲಿಂದ ನೇರವಾಗಿ ಪ್ರಸಾದ್ ಕಲರ್ ಲ್ಯಾಬಿಗೆ ಹೊರಟರು. ಕ್ಯಾಮರಮ್ಯಾನ್ ಗೌರಿಶಂಕರ್ ಕೂಡ ಮತ್ತೊಂದು ಕಾರಿನಲ್ಲಿ ಪ್ರಸಾದ್ ಕಲರ್‌ಲ್ಯಾಬಿಗೆ ತೆರಳಿದರು. ನಾನು ಭಯ ಮತ್ತು ಆತಂಕದೊಂದಿಗೆ ಮನೆಗೆ ಹಿಂದುರುಗಿದೆ.





ಅತ್ತ ಪ್ರಸಾದ್ ಲ್ಯಾಬ್‌ನಲ್ಲಿ ಪ್ರಿಂಟನ್ನು ಹಾಕಿಸಿ ಅವರಿಬ್ಬರೂ ವೀಕ್ಷಿಸಿದರು. ಹಾಗೆ ವೀಕ್ಷಿಸಿದ ನಂತರ ಗೌರಿಶಂಕರ್ ಫೋನ್ ಮಾಡಿ "ಶಿವ್ರೂ.... ಫೆಂಟಾಸ್ಟಿಕ್.... ಯೂ ಲುಕ್ ವೆರಿ ಗುಡ್, ಕಂಗ್ರಾಟ್ಸ್" ಎಂದರು. ಅವರ ಮಾತು ಕನಸೋ, ನನಸೋ ಎಂದು ನಾನು ಚಿಂತಿಸುತ್ತಿರುವಾಗಲೇ ಗೌರಿ ಅವರು ಮಾತು ಮುಂದು ವರೆಸಿದರು. "ನಮ್ಗೂ ಒಂದು ಭಯ ಇತ್ತು ಶಿವ್ರೂ... ನಾನು ನಿಮ್ಮ ಫೋಟೋಸೆಷನ್ ಮಾಡಿರಬಹುದು, ಆದರೆ ಮೀಸೆಯಿದ್ದು ಮತ್ತು ಮೀಸೆಯಿಲ್ಲದೆ ನೀವು ಹೇಗೆ ಕಾಣಿಸುತ್ತೀರಿ ಎಂಬುದನ್ನು ನಾವು ಪರೀಕ್ಷಿಸಿ ಬೇಕಾಗಿತ್ತು, ಅದಕ್ಕಾಗಿ ಪ್ರಿಂಟ್ ಹಾಕಿ ನೋಡಿದೆವು." ಎಂದರು

ಅವರು ಅಷ್ಟು ಹೇಳಿ ಮುಗಿಸುತ್ತಿದಂತೆಯೇ ಮತ್ತೊಂದು ಫೋನಿಗೆ ಕರೆಮಾಡಿದ ನಿರ್ದೇಶಕ ಸಿಂಗೀತಂ ಸರ್ ಅವರು "ಶಿವ್ರೂ, ಯು ಲುಕ್ ವೆರಿ ಗುಡ್. ಆಲ್ ದಿ ಬೆಸ್ಟ್" ಎಂದರು. ಅವರಿಬ್ಬರೂ ಹಾಗೆ ಹೇಳಿದಾಗ ನನಗಾದ ಸಂತೋಷ ಅಷ್ಟಿಷ್ಟಲ್ಲ. ನನ್ನಲ್ಲಿದ್ದ ಆತಂಕ, ಭಯ ಎಲ್ಲವೂ ಮಾಯವಾಗಿ ಆತ್ಮವಿಶ್ವಾಸ, ಉತ್ಸಾಹ ಇಮ್ಮಡಿಯಾದವು.

ಆದರೂ ವಾಸ್ತವವನ್ನು ಎಂದೂ ಮರೆಯದ ನಾನು "ನೀವೆಲ್ಲಾ ಹೊಗಳುತ್ತೀರಿ, ನಿಜ. ಆದರೆ ನಿಜವಾಗಿಯೂ ನನ್ನನ್ನು ಮೆಚ್ಚಬೇಕಾದ್ದು ಹಣ ಕೊಟ್ಟು ಸಿನಿಮಾ ನೋಡುವ ಪ್ರೇಕ್ಷಕ" ಎಂದು ಹೇಳಿದೆ. ಆಗ ನನ್ನ ಮಾತನ್ನು ಗೌರಿ ಒಪ್ಪಿಕೊಂಡರೂ "ನಾವು ಈ ಚಿತ್ರದ ತಂತ್ರಜ್ಞರಾಗಿ ನಮ್ಮ ಅಭಿಪ್ರಾಯವನ್ನು ಹೇಳುತ್ತಿದ್ದೇವೆ..... ನೀವು ಚಿತ್ರರಂಗದಲ್ಲಿ ಗಟ್ಟಿಯಾಗಿ ಕಾಲೂರುವುದು ಗ್ಯಾರಂಟಿ" ಎಂದು ಮತ್ತೊಮ್ಮೆ ಹೇಳಿ ನನ್ನಲ್ಲಿ ಧೈರ್ಯ ತುಂಬಿದರು.

ಹೀಗೆ ಚಿತ್ರ ಆರಂಭವಾದ ಮೂರೇ ದಿನದಲ್ಲಿ ಅದರ ನಿರ್ದೇಶಕ ಮತ್ತು ಛಾಯಾಗ್ರಾಹಕರ ದೃಷ್ಟಿಯಲ್ಲಿ ಪಾಸಾಗಿದ್ದು ನನ್ನಲ್ಲಿ ವಿಶ್ವಾಸವನ್ನು ದುಪ್ಪಟ್ಟುಗೊಳಿಸಿತ್ತು. ಮರುದಿನ ನಾನು ಶೂಟಿಂಗಿಗೆ ಹಾಜರಾದಾಗ ನನ್ನಲ್ಲಿದ್ದ ಕಾನ್‌ಫಿಡೆಂನ್ಸ್ ನೋಡಿ ಸಿಂಗೀತಂರವರು "ಟುವಿ ಟುವಿ ಟುವಿ ಎಂದು ಹಾಡುವ... ಹೊಸ ಹಕ್ಕಿಯಾ ನೋಡಿದಾ..." ಎಂಬ ಹಾಡನ್ನು ಚಿತ್ರೀಕರಿಸಲು ನಿರ್ಧರಿಸಿದರು.

ಈ ಹಾಡು ರಸ್ತೆಯಲ್ಲಿ ಚಿತ್ರೀಕರಿಸಲ್ಪಟ್ಟಿತು. ಅದು ನನಗೆ ಹೊಸ ಅನುಭವ. ಈ ಹಾಡಿಗೋಸ್ಕರ ಮದ್ರಾಸಿನಿಂದ ಅತ್ಯುತ್ತಮ ಡ್ಯಾನ್ಸರ್‌ಗಳನ್ನು ಕರೆದುಕೊಂಡು ಬಂದಿದ್ದರು. ನನಗೆ ಮದ್ರಾಸಿನಲ್ಲಿ ಡ್ಯಾನ್ಸಿಂಗ್ ಕಲಿಸಿದ ಕೈಲಾಸಂ ಮಾಸ್ಟರ್ ಈ ಚಿತ್ರಕ್ಕೂ ನೃತ್ಯ ನಿರ್ದೇಶಕರಾಗಿದ್ದರು.

ಸಾಧಾರಣವಾಗಿ ಒಬ್ಬ ಹೀರೋಗಿಂತ ಚೆನ್ನಾಗಿ ಡ್ಯಾನ್ಸ್ ಮಾಡುವ ಜ್ಯೂನಿಯರ್ ಆರ್ಟಿಸ್ಟ್‌ಗಳನ್ನು ಕ್ಯಾಮೆರಾಕ್ಕೆ ಕಾಣಿಸದಂತೆ ಹಿಂದಿನ ಸಾಲಿನಲ್ಲಿ ನಿಲ್ಲಿಸುತ್ತಾರೆ. ಆದರೆ ನಾನು ಮಾತ್ರ ಅದನ್ನು ಮೊದಲ ಚಿತ್ರದಲ್ಲೇ ಪ್ರತಿಭಟಿಸಿದೆ. "ನನಗಿಂತ ಉತ್ತಮವಾಗಿ ಡ್ಯಾನ್ಸ್ ಮಾಡುವವರೆಲ್ಲ ಮೊದಲ ಸಾಲಿನಲ್ಲಿ ಕಾಣಿಸಿಕೊಳ್ಳಲಿ. ಅದರಲ್ಲಿ ತಪ್ಪೇನಿದೆ?" ಎಂದು ವಾದಿಸಿದೆ. ನನ್ನ ಮಾತು ಕೇಳಿ ಡ್ಯಾನ್ಸ್ ಡೈರೆಕ್ಟರಿಗೆ ಮತ್ತು ಜ್ಯೂನಿಯರ್ ಆರ್ಟಿಸ್ಟುಗಳಿಗೆ ಆಶ್ಚರ್ಯವಾಯಿತು. ಅಂದಿನ ಚಿತ್ರೀಕರಣ ಮುಗಿದ ನಂತರ ಆ ಡ್ಯಾನ್ಸರ್‌ಗಳೆಲ್ಲ ನನ್ನ ಬಳಿ ಬಂದು "ನೀವು ಎಷ್ಟು ಬೋಲ್ಡ್ ಸಾರ್. ಯಾವ ಹೀರೋ ಕೂಡ ನಮಗೆ ಈ ಥರ ಅವಕಾಶ ಮಾಡಿಕೊಟ್ಟಿರಲಿಲ್ಲ" ಎಂದು ತಮ್ಮ ಮೆಚ್ಚುಗೆಯನ್ನು ವ್ಯಕ್ತಪಡಿಸಿದರು.

ಮೂರೇ ದಿನದಲ್ಲಿ ಈ ಹಾಡಿನ ಚಿತ್ರೀಕರಣ ಮುಗಿದಾಗ ಡ್ಯಾನ್ಸ್ ಮಾಸ್ಟರ್ ಕೂಡ ನನ್ನ ಬೆನ್ನು ತಟ್ಟಿ "ನಿಮ್ಮ ಡ್ಯಾನ್ಸ್ ತುಂಬಾ ಫಾಸ್ಟಾಗಿದೆ, ಚೆನ್ನಾಗಿ ಬಂದಿದೆ" ಎಂದು ಹುರಿದುಂಬಿಸಿದರು. ನಾನು ನಿಜವಾಗಿಯೂ ಹೃದಯದಿಂದ ಹೇಳುತ್ತಿದ್ದೇನೆ, ನನ್ನ ಜೀವದ ಕೊನೆಯ ಕ್ಷಣವಿರುವ ತನಕ ನಾನು ಡ್ಯಾನ್ಸ್ ಮಾಸ್ಟರ್ ಕೈಲಾಸಂ ಅವರನ್ನು ಮರೆಯಲಾಗುವುದಿಲ್ಲ.

ನಿರೂಪಣೆ: ಸದಾಶಿವ ಶೆಣೈ

23

ಹ್ಯಾಟ್ರಿಕ್ ಹೀರೋನ ಹಾರ್ಟ್ ಬೀಟ್!



ನನಗೆ ಮದ್ರಾಸಿನಲ್ಲಿ ಡ್ಯಾನ್ಸ್ ಬಗ್ಗೆ ತರಬೇತಿ ನೀಡಿದ್ದೇ ಅವರು. ನಾನು ಕುಚುಪುಡಿ ನೃತ್ಯವನ್ನು ಕಲಿತಿದ್ದರೂ ಕೂಡ ಫಿಲ್ಮಿ ಸಾಂಗ್‌ಗೋಸ್ಕರ ಮತ್ತೆ ಎರಡು ತಿಂಗಳುಗಳ ಕಾಲ ಕಠಿಣವಾದ ತರಬೇತಿಯನ್ನು ನೀಡಿದ್ದರು. ಸಿನಿಮಾದಲ್ಲಿ ನೃತ್ಯ ಮಾಡುವಾಗ ಹೇಗೆ ಮಾಡಬೇಕು? ದೇಹವನ್ನು ಹೇಗೆ ಬ್ಯಾಲೆನ್ಸ್ ಮಾಡಿಕೊಳ್ಳಬೇಕು? ಭಾವ-ಭಂಗಿಗಳು ಹೇಗಿರಬೇಕು ಎಂಬಿತ್ಯಾದಿ ವಿಷಯಗಳನ್ನು ನನಗೆ ಕಲಿಸಿಕೊಟ್ಟಿದ್ದೇ ಅವರು. ನೃತ್ಯದ ಎಬಿಸಿಡಿಯನ್ನು ಕಲಿಸಿಕೊಟ್ಟ ಆ ಗುರುವಿಗೆ ಈ ಲೇಖನದ ಮುಖಾಂತರ ನನ್ನ ನಮನಗಳನ್ನು ತಿಳಿಸುತ್ತಿದ್ದೇನೆ.

ಈ 'ಟುವಿ ಟುವಿ....' ಹಾಡು ನನ್ನ ವೃತ್ತಿ ಜೀವನಕ್ಕೆ ದೊಡ್ಡ ತಿರುವನ್ನು ನೀಡಿತು. ಇಪ್ಪತ್ತು ವರ್ಷಗಳ ನಂತರ ಇವತ್ತೂ ಸಭೆ ಸಮಾರಂಭಗಳಲ್ಲಿ ಈ ಹಾಡನ್ನು ನಾನು ಹಾಡಬೇಕೆಂದು ಜನ ಕೇಳುತ್ತಾರೆ. ನಾನು ಅದನ್ನು ಹಾಡಿದರೆ ಅವರೆಲ್ಲ ಕುಣಿದು ಕುಪ್ಪಳಿಸುತ್ತಾರೆ. ಯಾಕೆಂದರೆ ಈ ಹಾಡು ಅಷ್ಟೊಂದು ಉತ್ಸಾಹ ಮತ್ತು ಎನರ್ಜಿಯಿಂದ ಕೂಡಿದೆ.

"ಟುವಿ ಟುವಿ" ಮುಗಿದ ಕೂಡಲೇ ಸಿಂಗೀತಂ ಸರ್ ಡ್ಯೂಯೆಟ್ ಹಾಡನ್ನು ಕೈಗೆತ್ತಿಕೊಂಡರು. ನಾನು ಮತ್ತು ಸುಧಾರಾಣಿ "ನಗುವು ಚೆನ್ನ... ಮೊಗವೂ ಚೆನ್ನ" ಹಾಡಿನಲ್ಲಿ ನಟಿಸಿದೆವು. ನನ್ನ ಜೀವನದ ಮೊದಲ ಪ್ರೇಮಗೀತೆಯಾದ ಅದರಲ್ಲಿ ನಟಿಸುವಾಗ ಸ್ವಲ್ಪ ಮುಜುಗರವಾಗುತ್ತಿತ್ತು, ಸುಧಾರಾಣಿಗೂ ಇದು ಮೊದಲ ಚಿತ್ರವಾಗಿದ್ದರಿಂದ ಆಕೆಗೂ ಅಷ್ಟೇ ಮುಜುಗರವಾಗುತ್ತಿತ್ತು. ಬಹುಶಃ ನನ್ನ ಎದುರು ಜನಪ್ರಿಯ ನಾಯಕಿಯನ್ನು ಹಾಕಿದ್ದರೆ ನನಗೆ ಮತ್ತಷ್ಟು ಕಷ್ಟವಾಗುತ್ತಿತ್ತೋ ಏನೋ....? ನಮ್ಮಿಬ್ಬರ ಕಷ್ಟವನ್ನು ಅರಿತ ಕೈಲಾಸಂ ಸಾರ್ ಮತ್ತು ಸಿಂಗೀತಂ ಸಾರ್ ಯಾರಿಗೂ ಮುಜುಗರವಾಗದ ರೀತಿಯಲ್ಲಿ ತುಂಬಾ ಜಾಣ್ಮೆಯಿಂದ ಈ ಹಾಡನ್ನು ಮುಗಿಸಿದರು.

ಇವೆರಡು ಹಾಡುಗಳ ಚಿತ್ರೀಕರಣ ಯಶಸ್ವಿಯಾಗಿ ಮುಗಿದದ್ದೇ ತಡ, ನನಗೆ ಎದುರಾಗಿದ್ದು ಕ್ಲೈಮಾಕ್ಸ್ ದೃಶ್ಯದ ಚಿತ್ರೀಕರಣ. ಇದಕ್ಕಾಗಿ ನಾವೆಲ್ಲಾ ಕೆಮ್ಮಣ್ಣುಗುಂಡಿಗೆ ಹೊರಡಬೇಕಾಗಿತ್ತು.

ಆದರೆ ಅದಕ್ಕೂ ಮೊದಲು ನನ್ನ ಸಾಂಸಾರಿಕ ಜೀವನದ ಮುಹೂರ್ತ ನಡೆಯಿತು. ಅರ್ಥಾತ್ ನನ್ನ ಮತ್ತು ಗೀತಾ ಮದುವೆ ನಿಶ್ಚಿತಾರ್ಥ ಅವರ ಮನೆಯಲ್ಲಿ ಏಪ್ರಿಲ್ ತಿಂಗಳಲ್ಲಿ ಜರುಗಿತು.

ಆ ದಿನಗಳಲ್ಲಿ ನೀವು ನನ್ನನ್ನು ನೋಡಬೇಕಿತ್ತು! ಒಂದೆಡೆ ನನ್ನ ಚೊಚ್ಚಲ ಚಿತ್ರದ ಚಿತ್ರೀಕರಣ. ಇನ್ನೊಂದೆಡೆ ನನ್ನ ವೈವಾಹಿಕ ಜೀವನಕ್ಕೆ ನಿಶ್ಚಿತಾರ್ಥ ಎಂಬ ಮುನ್ನುಡಿ. ಎರಡೂ ನನಗೆ ಮುಖ್ಯವಾಗಿದಿದ್ದರಿಂದ ನಾನು ಸಂತೋಷ ಮತ್ತು ಆನಂದದಲ್ಲಿ ಮುಳುಗಿ ಹೋಗಿದ್ದೆ.

ಈ ಮಧ್ಯೆ ಕೆಲವರು "ಸಿನಿಮಾ ರಿಲೀಸ್ ಆದ್ಮೇಲೆ ನಿಶ್ಚಿತಾರ್ಥ ಮತ್ತು ಮದುವೆ ಯಾದರೆ ಒಳ್ಳೆಯದು" ಎಂದು ಸಲಹೆ ನೀಡಿದರು. "ಮದುವೆಯಾದ ಯುವ ನಾಯಕ ನಟನನ್ನು ಯುವ ಜನಾಂಗ - ಅದರಲ್ಲೂ ತರುಣಿಯರು - ಇಷ್ಟಪಡುವುದಿಲ್ಲ" ಎಂದು ಅವರು ಹೇಳಿದರೂ ನಾನು ಪ್ರತಿಕ್ರಿಯಿಸಿರಲಿಲ್ಲ.

ಅಪ್ಪಾಜಿಯವರೂ ಮದುವೆಯಾದ ನಂತರವೇ ಚಿತ್ರರಂಗಕ್ಕೆ ಪಾದಾರ್ಪಣೆ ಮಾಡಿದ್ದನ್ನು ಅವರೆಲ್ಲಾ ಮರೆತಿದ್ದರೋ ಏನೋ? ಅದಕ್ಕಿಂತಲೂ ಮುಖ್ಯವಾಗಿ ಮದುವೆಯಿಂದ ನಟನ ಕೆರಿಯರ್‌ಗೆ ತೊಂದರೆಯಾಗುತ್ತದೆ ಎಂಬುದು ತೀರಾ 'ಸಿಲ್ಲಿ' ವಿಷಯ ಎಂದು ನಾನು ಪರಿಗಣಿಸಿದ್ದೆ.

ನನ್ನ ನಿಶ್ಚಿತಾರ್ಥ ಮುಗಿದ ನಂತರ ಸಿಂಗೀತಂರವರು ಒಂದು ಚೇಸಿಂಗ್ ದೃಶ್ಯವನ್ನು ಚಿತ್ರೀಕರಿಸಲು ನಿರ್ಧರಿಸಿದರು. ಆ ದೃಶ್ಯದಲ್ಲಿ ಪೊಲೀಸರು ಚೇಸ್ ಮಾಡಿಕೊಂಡು ಬರುವಾಗ ಅವರಿಂದ ತಪ್ಪಿಸಿಕೊಳ್ಳಲು ನಾನು ಬಿಲ್ಡಿಂಗ್‌ನಿಂದ ಬಿಲ್ಡಿಂಗ್‌ಗೆ ಹಾರಬೇಕಾಗಿತ್ತು.

"ಮೊನ್ನೆಯಷ್ಟೇ ನಿಶ್ಚಿತಾರ್ಥವಾಗಿದೆ. ಇಂತಹ ಅಪಾಯಕಾರಿ ದೃಶ್ಯಗಳಲ್ಲಿ ನಟಿಸುವಾಗ 'ಡ್ಯೂಪ್' ಬಳಸೋಣ" ಎಂದು ಚಿತ್ರ ತಂಡದವರು ನಿರ್ಧರಿಸಿದರು. ಆದರೆ ಯಾವುದೇ ಕಾರಣಕ್ಕೆ ನನಗೆ ಡ್ಯೂಪ್ ಬೇಡವೇ ಬೇಡ ಎಂದು ನಾನು ಪಟ್ಟು ಹಿಡಿದೆ. ಆ ನನ್ನ ನಿರ್ಧಾರದಿಂದಾಗಿ ಮುಂದೆ ಏನಾಯಿತು ಗೊತ್ತಾ....

(ಮುಂದುವರೆಯುತ್ತದೆ....)

ಅಂಜಲಿನಾ ಪೂನಾ ಪುರಾಣ...

ಟಿವಿ, ಪೇಪರು ಎಲ್ಲಿ ನೋಡಿದರಲ್ಲಿ ಬ್ರಾಡ್‌ಪಿಟ್, ಅಂಜಲಿನಾ ಜೋಲಿಯದ್ದೇ ಸುದ್ದಿ! ಈಗ ಪೂನಾದಲ್ಲಿ ಶೂಟಿಂಗ್‌ನಲ್ಲಿರುವ ಪಿಟ್, ಅಂಜಲಿನಾ ಹಿಂದೆ ಬಿದ್ದಿವೆ ನಮ್ಮ ಮೇಜರ್ ಮಾಧ್ಯಮಗಳು!

ಹಿಂದೆಲ್ಲ ಡಯಾನಾರಂತವರು ಬಂದಾಗ ಪಶ್ಚಿಮದ ಕಾಂಜಿಪಿಂಜಿ ಪೇಪರು, ಟಿವಿಗಳೆಲ್ಲ ಹಿಂಬಾಲಿಸುತ್ತಿದ್ದವು. ಈಗ ಅಂತಹ ಕಾಂಜಿಪಿಂಜಿಗಳೊಂದಿಗೆ ನಮ್ಮ ಮೇಜರ್ ಮಾಧ್ಯಮಗಳೂ ಸೇರಿಕೊಂಡು ಬ್ರಾಡ್ ಪಿಟ್, ಅಂಜಲಿನಾ ಜೋಲಿ ಕುಳಿತಿದ್ದು, ನಿಂತಿದ್ದು (ಮಲಗಿದ್ದು?) ಯಾವ ಬಣ್ಣದ ಬಟ್ಟೆ ತೊಟ್ಟದ್ದು ಇತ್ಯಾದಿ ವಿವರ ನೀಡುತ್ತಿವೆ! ಸದ್ಯಕ್ಕೆ ಅಂಜಲಿನಾಳ ಬ್ರಾ ಬಣ್ಣ ಯಾವುದಿತ್ತು ಎಂಬುದನ್ನು ಪ್ರಕಟಿಸಿಲ್ಲವಷ್ಟೇ!

ಅಂದ ಹಾಗೆ ಈ ಚಿತ್ರದ ಹೆಸರು 'A Mighty Heart'. ಕಾಶ್ಮೀರದಲ್ಲಿ ಅಪಹರಣಗೊಂಡು, ಪಾಕ್‌ನಲ್ಲಿ ಉಗ್ರರಿಂದ ಕೊಲೆಯಾದ ಪತ್ರಕರ್ತ ಡೇನಿಯಲ್ ಪರ್ಲ್ ಕುರಿತ ಚಿತ್ರವಿದು. ಡೇನಿಯಲ್ ಪತ್ನಿ ಮರ್ಲೈನ್ ಪರ್ಲ್ ಬರೆದಿರುವ ಪುಸ್ತಕ ಆಧರಿಸಿ ಚಿತ್ರ ತಯಾರಾಗುತ್ತಿದೆ.

ಬಾಲಿವುಡ್‌ನ ಇರ್ಫಾನ್ ಖಾನ್ ಜುಬೇರ್‌ನ ಪಾತ್ರದಲ್ಲಿದ್ದಾನೆ!

ಇರ್ಫಾನ್, ಹಿಂದಿ ಚಾನಲ್ ಹಾಕಿ ನೋಡಿ... ಅಂಜಲಿನಾ ಹಿಂದೇ ಕಾಣ್ತಾನೆ!



ಕರಣ್ ಜೋಹರ್ ಮದುವೆ ಬ್ರೋಕರ್!

ಶಾರ್ಟ್ ಕಟ್

ಬಾಲಿವುಡ್‌ನ ಯಂಗ್ ಡೈರೆಕ್ಟರ್ ಕರಣ್ ಜೋಹರ್ ಈಗ ಮದುವೆಯ ಬ್ರೋಕರ್ ಅಂತೆ! ಇತ್ತೀಚೆಗೆ ಆತ ಅಮೆರಿಕಕ್ಕೆ ಹೋದಾಗ ಎನ್‌ಆರ್‌ಐಗಳೆಲ್ಲ ಮದುವೆ ಕುರಿತು ಸಂಬಂಧದ ಕುರಿತು ಆತನೊಡನೆ ಚರ್ಚೆಗೆ ಮುಗಿಬಿದ್ದರಂತೆ!

ಕರಣ್‌ಗೆ ಮದುವೆಯೂ ಆಗಿಲ್ಲ, ಗರ್ಲ್‌ಫ್ರೆಂಡೂ ಇಲ್ಲ! ಬದಲಾಗಿ ಬಾಯ್‌ಫ್ರೆಂಡ್ ಇರಬೇಕೆಂಬ ಗುಮಾನಿಗಳಿವೆ! ಈತ ಇನ್ನೇನು ಸಲಹೆ ಕೊಟ್ಟಾನು?



-ಶೆಣೈ



'ಬಾಟ್ಲಿ'ಮೋರ್ ಎಂದ ಗುರು

ಬಾಲ್ಟಿಮೋರ್‌ನಲ್ಲಿ ನಡೆಯುತ್ತಿದ್ದ ವಿಶ್ವ ಕನ್ನಡ ಸಮ್ಮೇಳನದ ಎರಡನೆ ದಿನ ಹಾಜರಾದ ಸಂಗೀತ ನಿರ್ದೇಶಕ ಗುರುಕಿರಣ್ ನನ್ನನ್ನು ಅಲ್ಲಿ ನೋಡುತ್ತಿದ್ದಂತೆ, ಸೀದ ಬಂದು, ನನ್ನ ಹೊಟ್ಟೆಗೆ ಬಲವಾಗಿ ಹೊಡೆದು, ನನ್ನ ಹೆಗಲ ಮೇಲೆ ಕೈಹಾಕಿ ನಿಂತರು. ಪ್ರತಿಬಾರಿ ಸಿಕ್ಕಾಗ ಹೀಗೆ ಒಂದೇಟು ಕೊಟ್ಟು ಭುಜದ ಮೇಲೆ ಕೈ ಹಾಕಿ ನಿಲ್ಲುವುದು ಗುರುಕಿರಣ್‌ರವರ ಶೈಲಿ.

ಆದರೆ ಅಮೆರಿಕದಲ್ಲಿ ಒಬ್ಬ ಪುರುಷನ ಹೆಗಲ ಮೇಲೆ ಮತ್ತೊಬ್ಬ ಕೈಯಿಟ್ಟು ಆತ್ಮೀಯವಾಗಿ ನಡೆದುಕೊಂಡರೆ ಅದಕ್ಕೆ ಬೇರೆಯದೇ ಅರ್ಥವಿದೆ ಎಂಬುದು ಗುರುಕಿರಣ್‌ಗೆ ತಿಳಿದಿರಲಿಲ್ಲವೋ ಏನೋ? ಏಕೆಂದರೆ ಪುರುಷರು ಇತರೆ ಗಂಡಸರೊಂದಿಗೆ, ಮಹಿಳೆಯರು ಇತರೆ ಹೆಂಗಸರೊಂದಿಗೆ ಹೀಗೆ ಬಹಿರಂಗವಾಗಿ ನಡೆದುಕೊಂಡರೆ ಅವರನ್ನು ಸಲಿಂಗ ಕಾಮಿಗಳು ಎಂದೇ ಅಮೆರಿಕದಲ್ಲಿ ಭಾವಿಸುತ್ತಾರೆ. ಸದ್ಯಕ್ಕೆ ಅಲ್ಲಿ ಎಲ್ಲರೂ ಕನ್ನಡಿಗರೇ ಆಗಿದ್ದರಿಂದ ಅಂತಹ ಅನುಮಾನ, ಅಪಾರ್ಥಗಳಿಂದ ಬಚಾವ್ ಆದೆ!

ಸಮ್ಮೇಳನದ ಕೊನೆಯ ಸಂಜೆ ಗುರುಕಿರಣ್ ಅವರ ಸಂಗೀತ ರಸಮಂಜರಿ ಕಾರ್ಯಕ್ರಮವಿತ್ತು. ಅನಿವಾಸಿ ಯುವ ಅಮೆರಿಕನ್ನಡಿಗರೆಲ್ಲ ಗುರುಕಿರಣ್‌ರವರ ಸಂಗೀತಕ್ಕೋಸ್ಕರ ಕಾದಿದ್ದರು. ಅದೇ ದಿನ ಬಾಲ್ಟಿಮೋರದ ಸಮುದ್ರ ತೀರದಲ್ಲಿ ಹಡಗೊಂದರಲ್ಲಿ ನೃತ್ಯ ಮತ್ತು ಬೆಳದಿಂಗಳೂಟ ಕಾರ್ಯಕ್ರಮವಿದ್ದರೂ ಗುರುಕಿರಣ್ ಹಾಡಿಗೋಸ್ಕರ ಸಾವಿರಾರು ಜನ ಜಮಾಯಿಸಿದ್ದು ಆಶ್ಚರ್ಯಕರವಾಗಿತ್ತು.


ಗುರುಕಿರಣ್ ಉಪೇಂದ್ರರವರ ಚಿತ್ರಗಳ ಹಾಡುಗಳನ್ನು ಹಾಡಿ, ರಂಜಿಸಿದರು. ಅದಕ್ಕೆ ಯುವಕರೆಲ್ಲಾ ಎಷ್ಟು ಉತ್ಸಾಹದಿಂದ ಕುಣಿದು ಕುಪ್ಪಳಿಸಿದರೆಂದರೆ, ಕೆಲವರು ವೇದಿಕೆಗೇ ಲಗ್ಗೆಯಿಟ್ಟು ಗುರುಕಿರಣ್ ಜೊತೆ ಮನಸೋ ಇಚ್ಛೆ ಕುಣಿದರು. ಆದರೆ ಅಲ್ಲಿ ಸೇರಿದ್ದ ಅರ್ಧಕ್ಕರ್ಧ ಜನರಿಗೆ ಗುರುಕಿರಣ್‌ರವರ ಸಂಗೀತ ಒಂದಿಷ್ಟೂ ಇಷ್ಟವಾಗಲಿಲ್ಲ. ಏಕೆಂದರೆ ಅವರೆಲ್ಲಾ ಮೂವತ್ತು-ಮೂವತ್ತೈದು ವರ್ಷಗಳ ಹಿಂದೆ ಭಾರತ ಬಿಟ್ಟು ಅಮೆರಿಕದಲ್ಲಿ ನೆಲೆಸಿದವರು. ಆ ತಲೆಮಾರಿನವರಿಗೆ ಅದರ ಹಿಂದಿನ ದಿನ ನಡೆ... ಎಸ್.ಪಿ. ಬಾಲಸುಬ್ರಮಣ್ಯಂರವರ ಸಂಗೀತ ಕಾರ್ಯಕ್ರಮವೇ ಹಿಡಿಸಿ...

ಅವರಲ್ಲಿ ಕೆಲವರು ಗುರುಕಿರಣ್ ಬಗ್ಗೆ ಮಾಡಿದ ಕಾಮೆಂಟ್... ಗಳು ತುಂಬಾ ಮಜವಾಗಿದ್ದವು. "ಈ ಗುರುಕಿರಣ್ ಕನ್ನಡದವ... ಅವರು ಹಾಡಿದ್ದು ಕನ್ನಡ ಹಾಡುಗಳನ್ನೋ ಅಥವಾ ಇಂಗ್ಲಿ... ಹಾಡುಗಳನ್ನೋ?" ಎಂದು ಅವರು ಪ್ರಶ್ನಿಸುತ್ತಿದ್ದರು. ಆದರೆ ಇತ್ತೀಚೆ... ಅಮೆರಿಕೆಗೆ ಹೋದ ಸಾಫ್ಟ್‌ವೇರ್ ಇಂಜಿನಿಯರುಗಳೆಲ್ಲ ತಾವೆಂದೂ ಇಷ್ಟೊಂದು ಸುಮಧುರವಾದ ಹಾಡನ್ನು ಕೇಳಿರಲಿಲ್ಲವೆಂಬಂ... ಮೈಮರೆತು ನರ್ತಿಸುತ್ತಿದ್ದರು. ಇದನ್ನೇ ತಾನೆ ಜನರೇಶನ್ ಗ್ಯಾಪ್ ಅನ್ನೋದು?

ಸಂಗೀತ ರಸಸಂಜೆ ನಡೆಸಿಕೊಡಲು 'ಅಕ್ಕ'ದವರು ಕೇಳಿದಾ... ಕನಿಷ್ಠ ಹದಿನಾಲ್ಕು ಜನರಿಗೆ ವೀಸಾ ಬೇಕು ಎಂದಿದ್ದರಂತೆ ಗುರು... ಆದರೆ 'ಅಕ್ಕ'ದವರು ಕಳಿಸಿದ್ದು ಕೇವಲ ಗುರು ಮತ್ತು ಅವರ ಪತ್ನಿ... ಮಾತ್ರ. ಆದರೂ ಅಲ್ಲಿಗೆ ಬಂದ ನಂತರ ಎಸ್ಪಿ ತಂಡದಿಂದ ನಾಲ್... ಕಲಾವಿದರನ್ನು, ನರಸಿಂಹನಾಯಕ್ ತಂಡದಿಂದ ಇಬ್ಬರನ್ನು, ಪಲ್ಲ... ತಂಡದಿಂದ ಮೂವರನ್ನು ಹೆಕ್ಕಿಕೊಂಡು ನಿಂತ ಕಾಲಲ್ಲೇ ಗುರುಕಿರಣ್... ಹೊಸ ತಂಡ ಕಟ್ಟಿಕೊಂಡರು. ಅಷ್ಟೇ ಅಲ್ಲ, ಯಾವುದೇ ಪೂರ್ವಭಾ... ಸಿದ್ಧತೆಯಿಲ್ಲದೆ ಕಾರ್ಯಕ್ರಮ ನಡೆಸಿದರು. ಯಾವುದೇ ಗಳಿಗೆಯಲ್ಲ... ಗುರು ಯಾರಿಗೂ ಗುಲಾಮನಾಗಲಿಲ್ಲ.

ಸಮಾವೇಶ ಮುಗಿಸಿ ಬಾಲ್ಟಿಮೋರಿನಿಂದ ಹೊರಟು ನಿಂತಾಗ ... ಊರಿಗೆ ಗುರುಕಿರಣ್ ಹೊಸ ಹೆಸರನ್ನು ನೀಡಿದ್ದರು. ಅವರ ಪ್ರಕಾ... "ಇದು ಬಾಲ್ಟಿಮೋರ ಅಲ್ಲ, ಬದಲಾಗಿ ಬಾಟ್ಲಿಮೋರ್!" ಇದ... ಕಾರಣ ಹುಡುಕುವುದು ಕಷ್ಟವಲ್ಲ. ಅದೇನೆಂದರೆ, ಅವರು ಅಲ್ಲಿ... ಮೂರು ರಾತ್ರಿಗಳನ್ನು ತಮ್ಮ ಗೆಳೆಯರೊಂದಿಗೆ ಮಾತ್ರವಲ್ಲ, ಬಾಟ... ಳೊಂದಿಗೇ ಕಳೆದಿದ್ದರು!

ಪಂಚ್‌ಲೈನು....



ಇದೇನಿದೇನು?

ಸಿನಿಮಾ ಟೈಟಲ್ಲು... ಕೆಳಗೊಂದು ಪಂಚ್‌ಲೈನು.... ಕನ್ನಡದ ಸಿನಿಮಾಗಳಿಗೆ ಇಂಗ್ಲಿಷ್ ಲೈನ್‌ಗಳು... ಪುಟಾಣಿ ಕಿಷನ್‌ನ ಫುಟ್‌ಪಾತ್ ಚಿತ್ರಕ್ಕೆ `address ಇಲ್ದವ್ನ success ಕಥೆ' ಎಂಬ ಲೈನು! 'ಜೊತೆಜೊತೆಯಲಿ' ಚಿತ್ರಕ್ಕೆ' and life begins ಎಂಬ ಸಾಲು!

'ಸಿರಿವಂತ' ಎಂಬಾತ `A human with values' ಅಂತೆ! ಇವು ಇಂಗ್ಲಿಷ್ ಲೈನ್‌ಗಳಾಯ್ತು ಬಿಡಿ...



ಇನ್ನು ಕನ್ನಡದಲ್ಲಿರೋ ಪಂಚ್‌ಲೈನ್ ಹೇಗಿರ್‍ತಾವೆ? 'ಪೂಜಾರಿ' ಚಿತ್ರಕ್ಕೆ `love with long life' ಎಂಬ ಲೈನು ಕೆಳಗೆ.... ಮೇಲೆ ಏನಿದೆ? 'ಕ್ಲಾಸ್ ಆಗ್ ಬಂದ್ರೆ ಭಕ್ತಿಲ್ ಪೂಜೆ ಮಾಸ್ ಆಗ್ ಬಂದ್ರೆ ಮಚ್ಚಲ್ ಪೂಜೆ'....

ಏನು ಗಾಂಧಿನಗರ... ಅದೇನು ಕನ್ನಡ! ಉದ್ಧಾರವಾಗುತ್ತಾ ಕನ್ನಡ ಚಿತ್ರರಂಗ?



ಮತ್ತೆ ಶಂಕರ್‌ನಾಗ್..... ರಂಗೋತ್ಸವದ ಪುಳಕ...

ರಂಗೋತ್ಸವ... ಮತ್ತೆ ಶುರುವಾಗಿದೆ.. 15 ನೇ ತಾರೀಖಿನವರೆಗೂ ರಂಗಾಸಕ್ತರಿಗೆ ಹಬ್ಬವೋ ಹಬ್ಬ... ಮತ್ತೆ ಮತ್ತೆ ಶಂಕರ್‌ನಾಗ್ ನೆನಪು....



ಇದು 'ರಂಗ ಶಂಕರ'... ಶಂಕರನಾಗ್ ನೆನಪಲ್ಲಿ ಆರುಂಧತಿ ನಾಗ್ ತಂಡ ಮೂರು ವರ್ಷದಿಂದ ನಡೆಸುತ್ತಿರುವ ನಾಟಕ ಹಬ್ಬ, ಕನ್ನಡ, ಇಂಗ್ಲಿಷ್, ಹಿಂದಿ, ಮರಾಠಿ, ಬಂಗಾಳಿ ನಾಟಕಗಳ ಪ್ರದರ್ಶನ ರಂಗಾಸಕ್ತರ ಮನ ತಣಿಸುತ್ತಿದೆ...

ಶಂಕರ್‌ನಾಗ್ ಸದಾ ಚಿರಾಯು...

PRINTER, PUBLISHER, PROPRIETOR AND EDITOR : GAURI LANKESH, No. 9, 1st Floor, E.A.T.Street, Basavanagudi, Bangalore...
Fax : 26620026, E-mail :lankesh70@rediffmail.com, Printed at ...